08 January 2026 Thursday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಾವು ಒಬ್ಬರಿಗೆ ನೆರವಾದರೆ ನಮ್ಮ ಕಷ್ಟದ ಕಾಲದಲ್ಲಿ ದೇವರು ಇಬ್ಬರನ್ನು ಸಹಾಯಕ್ಕೆ ಕಳುಹಿಸುತ್ತಾನೆ!

-ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ದುಡಿದು
ತಿನ್ನುವವನಿಗೆ ಮೈತುಂಬ
ನೋವುಗಳಿದ್ರೆ ಕೂತು
ತಿನ್ನುವವನಿಗೆ ಮೈತುಂಬ
ರೋಗಗಳಿರುತ್ತೆ

ಮೈಲಾರ ಸಾವಿತ್ರಿಬಾಯಿ

info.varthaman@gmail.com
9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್
VARTHAMAN | Volume: 69 | Issue: 72 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಮತ್ತೆ ಕನಿಷ್ಠ ತಾಪಮಾನ

**ಬೆಂಗಳೂರು:** ರಾಜ್ಯದಲ್ಲಿ ಮತ್ತೆ ಹವಾಮಾನದಲ್ಲಿ ಬದಲಾವಣೆ ಕಂಡುಬಂದಿದೆ. ಮತ್ತೆ ರಾಜ್ಯದಲ್ಲಿ ಕನಿಷ್ಠ ತಾಪಮಾನ ದಾಖಲಾಗಿದೆ. ಬೀದರ್, ವಿಜಯಪುರ ಸೇರಿದಂತೆ ಉತ್ತರ ಕರ್ನಾಟದಲ್ಲಿ ತಾಪಮಾನ ಕನಿಷ್ಠ ಮಟ್ಟಕ್ಕೆ ಕುಸಿದಿದೆ.

ಮಲೆನಾಡು ಭಾಗಗಳಲ್ಲಿ ಜನವರಿ 9 ಮತ್ತು 10ರಂದು ಮಳೆಯಾಗುವ ಸಾಧ್ಯತೆ ಇದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ ತಿಳಿಸಿದೆ. ಮುಂದಿನ 7 ದಿನಗಳ ಕಾಲ ರಾಜ್ಯದಾದ್ಯಂತ ಒಣ ಹವೆ ಮುಂದುವರಿಯುವ ಸಾಧ್ಯತೆ ಇದೆ. ಮುಂಜಾನೆ ಚಳಿ ಹಾಗೂ ಅಲ್ಲಲ್ಲಿ ಮಂಜಿನ ವಾತಾವರಣ ಇರುವ ಸಾಧ್ಯತೆಯಿದೆ. ಕನಿಷ್ಠ ತಾಪಮಾನ ಸಾಮಾನ್ಯ ಹಾಗೂ ಸಾಮಾನ್ಯಕಿಂತ 1 ರಿಂದ 3 ಡಿಗ್ರಿ ಸೆಲ್ಸಿಯಸ್ ಕಡಿಮೆ ಇರುವ ಸಾಧ್ಯತೆಯಿದೆ ಎಂದು ತಿಳಿಸಿದೆ.

## ಲಾರಿ ಡಿಕ್ಕಿ: ಬಸ್ ಚಾಲಕ ಸಾವು

**ಚಾಮರಾಜನಗರ:** ಕೆಎಸ್‌ಆರ್‌ಟಿಸಿ ಬಸ್ ಹಾಗೂ ಲಾರಿ ನಡುವೆ ಮುಖಾಮುಖಿ ಡಿಕ್ಕಿಯಾಗಿ ಸಂಭವಿಸಿ ಬಸ್ ಚಾಲಕ ಸಾವನ್ನಪ್ಪಿದ್ದಾರೆ. 17 ಮಂದಿ ಪ್ರಯಾಣಿಕರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಬೆಂಡರವಾಡಿ ಗ್ರಾಮದ ಸಮೀಪ ನಿನ್ನೆ ರಾತ್ರಿ ಸಂಭವಿಸಿದೆ.



ತಾಲ್ಲೂಕಿನ ಇರಸವಾಡಿ ಗ್ರಾಮದ ಮಂಜು (32) ಮೃತಪಟ್ಟ ಬಸ್ ಚಾಲಕ. ತಮಿಳು ನಾಡಿನ ಲಾರಿ ಚಾಲಕ ಗೋವಿಂದ ಸ್ವಾಮಿ ಕಾಲಿಗೆ ಗಂಭೀರ ಗಾಯವಾಗಿದೆ.

ಬೆಂಡರವಾಡಿ ಗ್ರಾಮದ ಬಳಿ ಮಂಗಳವಾರ ರಾತ್ರಿ ಅಪಘಾತ ಸಂಭವಿಸಿದೆ. ಮೈಸೂರಿನಿಂದ ಚಾಮರಾಜನಗರಕ್ಕೆ ಆಗಮಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ಗೆ ಮೈಸೂರು ಕಡೆಗೆ ತೆರಳುತ್ತಿದ್ದ ಲಾರಿ ಬೆಂಡರವಾಡಿ ಗ್ರಾಮದ ತಿರುವಿನಲ್ಲಿ ಮುಖಾಮುಖಿ ಡಿಕ್ಕಿ ಯಾಗಿದೆ. ಬಸ್ ಹಾಗೂ ಲಾರಿಯ ಮುಂಭಾಗ ಸಂಪೂರ್ಣವಾಗಿ ಜಖಂಗೊಂಡಿದೆ. ಅಪಘಾತದ ಹಿನ್ನೆಲೆಯಲ್ಲಿ ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಪೊಲೀಸರು ಬಸ್ ಹಾಗೂ ಲಾರಿಯನ್ನು ತೆರವುಗೊಳಿಸಿ ಪುಟ 2ಕ್ಕೆ

## ಮರಕ್ಕೆ ಬೊಲೆರೊ ವಾಹನ ಡಿಕ್ಕಿ: ಒಂದೇ ಗ್ರಾಮದ ನಾಲ್ವರು ಸಾವು

**ಚಿತ್ರದುರ್ಗ:** ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಸಾಸಲು ಬಳಿ ಮಂಗಳವಾರ ರಾತ್ರಿ ಭೀಕರ ಅಪಘಾತ ಸಂಭವಿಸಿ ಒಂದೇ ಗ್ರಾಮದ ನಾಲ್ವರು ಸಾವನ್ನಪ್ಪಿದ್ದಾರೆ. ಮರಕ್ಕೆ ಬೊಲೆರೊ ವಾಹನ ಡಿಕ್ಕಿ ಹೊಡೆದ ಪರಿಣಾಮ ಕಿರಣ್ (25), ಅರುಣ್ (32), ಗಿರಿರಾಜ್ (46) ಸ್ಥಳದಲ್ಲೇ ಮೃತಪಟ್ಟರು. ಗಂಭೀರವಾಗಿ ಗಾಯಗೊಂಡಿದ್ದ ಹನುಮಂತಪ್ಪ (32) ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ಮಾಯಕೊಂಡದಲ್ಲಿ ಅಡಿಕೆ ಕೆಲಸಕ್ಕೆ ಹೋಗಿ ವಾಪಸ್ ಬರುವಾಗ ಭೀಕರ ಅಪಘಾತ ಸಂಭವಿಸಿದೆ. ಮೃತರೆಲ್ಲರೂ ಕಲ್ಲವ್ವ ನಾಗತಿಹಳ್ಳಿಯ ಗ್ರಾಮದವರು. ಒಂದೇ ಗ್ರಾಮದ ನಾಲ್ವರು ಮೃತಪಟ್ಟಿದ್ದಾರೆ. ಕುಟುಂಬಸ್ಥರ ಆಕ್ರಂದನ ಮುಗಿಲು




ಮುಟ್ಟಿದೆ. ಅಪಘಾತದಲ್ಲಿ ನಾಲ್ವರು ಕಾರ್ಮಿಕರು ಗಾಯಗೊಂಡಿದ್ದು, ದಾವಣಗೆರೆ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಚಿಕ್ಕಜಾಜೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

## ಕಾರು ಪಲ್ಟಿಯಾಗಿ ಬೆಂಕಿ: ಇಬ್ಬರು ಸಜೀವ ದಹನ



**ಕಾರವಾರ:** ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಗೇರುಸೊಪ್ಪ– ಸುಳೆಮುರ್ಕಿ ಕ್ರಾಸ್ ಹತ್ತಿರ ಭೀಕರ ರಸ್ತೆ ಅಪಘಾತದಲ್ಲಿ ಕಾರು ಪಲ್ಟಿಯಾಗಿ ಬೆಂಕಿಗೆ ಆಹುತಿಯಾದ ಪರಿಣಾಮ ಇಬ್ಬರು ಸಜೀವ ದಹನಗೊಂಡಿದ್ದಾರೆ. ವೇಗವಾಗಿ ಚಲಿಸುತ್ತಿದ್ದ ಕಾರು ನಿಯಂತ್ರಣ ತಪ್ಪಿ ಮೊದಲು ಮರಕ್ಕೆ ಡಿಕ್ಕಿ ಹೊಡೆದಿದೆ. ಪುಟ 2ಕ್ಕೆ

## ಇವಿಎಂ ಸಮೀಕ್ಷೆ ನಡೆಸಿಲ್ಲ: ರಾಜ್ಯ ಚುನಾವಣಾ ಆಯೋಗ



**ಬೆಂಗಳೂರು:** ರಾಜ್ಯದಲ್ಲಿ ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಬಳಕೆ ಬಗ್ಗೆ ಯಾವುದೇ ಸಮೀಕ್ಷೆ ನಡೆಸಿಲ್ಲ ಎಂದು ರಾಜ್ಯ ಚುನಾವಣಾ ಆಯೋಗ ಸ್ಪಷ್ಟಪಡಿಸಿದೆ.

ಈ ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿರುವ ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿ ಡಾ.ನಾಗರಾಜ ಅವರು, ಕಳೆದ ಜನವರಿ 3ರಂದು ದಿನಪತ್ರಿಕೆಗಳಲ್ಲಿ ರಾಜ್ಯ ಚುನಾವಣಾ ಆಯೋಗ ಮೇ 2025ರಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಕರ್ನಾಟಕದ ಶೇ.83ರಷ್ಟು ಜನ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂಬ ಸುದ್ದಿಗಳನ್ನು ಪ್ರಕಟಿಸಿರುವ ಸುದ್ದಿ ಸತ್ಯವಲ್ಲ ಎಂದು ತಿಳಿಸಿದ್ದಾರೆ.

ರಾಜ್ಯ ಚುನಾವಣಾ ಆಯೋಗವು ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಅಧಿಕಾರ ಹೊಂದಿದೆ. ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಇವಿಎಂ ಗಳ ಬಳಕೆ ಬಗ್ಗೆ ಆಯೋಗ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಕರ್ನಾಟಕದಲ್ಲಿ ಚುನಾವಣಾ ಆಯೋಗ ನಡೆಸಿದ ಸಮೀಕ್ಷೆಯಲ್ಲಿ ಶೇ.85ರಷ್ಟು ಮಂದಿ ವಿದ್ಯುನ್ಮಾನ ಮತ ಯಂತ್ರಗಳ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿತ್ತು.


# ಇನ್ನೆಷ್ಟು ದಿನವ್ರೋ ಗೊತ್ತಿಲ್ಲ!

## ಹೈಕಮಾಂಡ್ ತೀರ್ಮಾನಕ್ಕೆ ಬದ್ಧ | ಮುಖ್ಯಮಂತ್ರಿ ಸಿದ್ದರಾಮಯ್ಯ

**ಹಾವೇರಿ:** ಜನರ ಆಶೀರ್ವಾದದಿಂದ ಇಲ್ಲಿ ವರೆಗೂ ಬಂದಿದ್ದೀನಿ. ಇನ್ನೂ ಎಷ್ಟು ದಿನ ಇರ್ತೀವ್ರೋ ಗೊತ್ತಿಲ್ಲ. ನನ್ನ ಆಡಳಿತ ತೃಪ್ತಿ ತಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಚ್ಚರಿಯ ಹೇಳಿಕೆ ನೀಡಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಬುಧವಾರ ದೇವರಾಜ ಅರಸು ದಾಖಲೆ ಮುರಿದ ವಿಚಾರವಾಗಿ ಮಾತನಾಡಿದ ಅವರು, ದೀರ್ಘಾವಧಿ ಅಧಿಕಾರಕ್ಕೆ ಜನರ ಆಶೀರ್ವಾದ, ವಿಶ್ವಾಸವೇ ಕಾರಣ ಎಂದರು. ಪೂರ್ಣಾವಧಿ ಅಧಿಕಾರ ಪೂರೈಸ್ತೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿಎಂ, ಹೈಕಮಾಂಡ್ ಏನು ತೀರ್ಮಾನ ತೆಗೆದುಕೊಳ್ಳುತ್ತೋ ಅದಕ್ಕೆ ಬದ್ಧ ಎಂದು ಸ್ಪಷ್ಟಪಡಿಸಿದರು.

ಬಿಜೆಪಿಯವರು ಸುಳ್ಳು ಹೇಳೋದ್ರಲ್ಲಿ ನಿಸ್ಸೀಮರು. ಎಸ್‌ಸಿಪಿ ಟಿಎಸ್‌ಪಿ ಮಾಡಿದವರು ಯಾರು? ಬಿಜೆಪಿಯವರು ಏನು ಮಾಡಿಲ್ಲ ಅಂತ ಹೇಳಿದ್ರೆ ನಾನೇನು



ಮಾಡಿದ್ದೀನಿ ಅಂತ ಜನರನ್ನ ಕೇಳಬೇಕು. ಅನ್ನ ಭಾಗ್ಯ ಕೊಟ್ಟವರು ಯಾರು? ಕೃಷಿ ಭಾಗ್ಯ ಮಾಡಿದವರು ಯಾರು? ರೈತರಿಗೆ ಮನಸ್ವಿನಿ ಮಾಡಿದವರು, ಶಕ್ತಿ ಯೋಜನೆ ಮಾಡಿದವರು ಯಾರು? ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಪ್ರತಿ ವರ್ಷ 3 ಲಕ್ಷ ಮನೆ ಕಟ್ಟೀವಿ ಅಂತ ಹೇಳಿದ್ದೆವು. ಇದುವರೆಗೆ 14,52,000 ಮನೆ ಕಟ್ಟಿದ್ದೀವಿ. ಬಿಜೆಪಿಯವರು 5 ವರ್ಷ ಅಧಿಕಾರದಲ್ಲಿ ಇದ್ರಲ್ಲಾ ಎಷ್ಟು ಮನೆ ಕಟ್ಟಿಸಿದ್ದಾರೆ? ಕುಡಿಯುವ ನೀರು ಕೊಟ್ಟವರು ಯಾರು? ಕೇಂದ್ರದಿಂದ ಬರೋ ಹಣ ಪುಟ 2ಕ್ಕೆ

### ಸಿದ್ದು ಅಹಿಂದ ನಾಯಕ: ಜೋಕ್ ಆಫ್ ದ ಇಯರ್!

**ಬೆಂಗಳೂರು:** ದೇವರಾಜ ಅರಸು ದಾಖಲೆ ಮುರಿದಿದ್ದೇನೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಇಟ್ ಇಸ್ ಜೋಕ್ ಆಫ್ ದ ಇಯರ್ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಲೇವಡಿ ಮಾಡಿದರು.


**ಡಿಕೆಶಿ ಭೇಟಿ ಮಾಡಿ ಎಚ್.ವಿಶ್ವನಾಥ್ ಲೇವಡಿ**

ಸದಾಶಿವನಗರದ ನಿವಾಸದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಅವರು, ನಮ್ಮನ್ನೆಲ್ಲ ದೇವರಾಜ ಅರಸು ಅವರು



ಬೆಳೆಸಿದ್ದರು. ಬಹುಶಃ ದೇವರಾಜ ಅರಸು ಹಾಗೂ ಇಂದಿರಾಗಾಂಧಿ ಅವರನ್ನು ಸಿದ್ದರಾಮಯ್ಯ ಅವರಷ್ಟು ಬೈದವರು ಯಾರಿಲ್ಲ. ಆದರೆ ಈಗ ದೇವರಾಜ ಅರಸು ಬಗ್ಗೆ ಮಾತನಾಡುತ್ತಾರೆ ಎಂದು ಟೀಕಿಸಿದರು. ಪುಟ 2ಕ್ಕೆ

### ಅರಸು– ಸಿದ್ದು ಹೋಲಿಕೆ ಬೇಡ: ಬಿಎಸ್‌ವೈ ವಾಗ್ದಾಳಿ



**ಬೆಂಗಳೂರು:** ದೇವರಾಜ ಅರಸು ಆಡಳಿತಕ್ಕೂ ಸಿದ್ದರಾಮಯ್ಯ ಆಡಳಿತಕ್ಕೂ ಹೋಲಿಕೆ ಮಾಡುವುದು ಸರಿಯಲ್ಲ. ಸಿದ್ದರಾಮಯ್ಯ ಪುಟ 2ಕ್ಕೆ

## ಕೋಗಿಲು ನಿವಾಸಿಗಳಿಗೆ ಇಂದು ಮನೆ ಹಸ್ತಾಂತರ


**ಬೆಂಗಳೂರು:** ಕೋಗಿಲು ಲೇಔಟ್‌ನಲ್ಲಿ ಅಕ್ರಮವಾಗಿ ನೆಲೆಸಿದ್ದವರ ಮನೆ, ಶೆಡ್‌ಗಳನ್ನ ತೆರವುಗೊಳಿಸಿದ್ದ ಸರ್ಕಾರ ಗುರುವಾರ ವಸತಿ ಭಾಗ್ಯ ನೀಡಲು ಮುಂದಾಗಿದೆ.

ಕಾಂಗ್ರೆಸ್ ಹೈಕಮಾಂಡ್ ಆದೇಶಕ್ಕೆ ತಲೆಬಾಗಿ ವಲಸಿಗರಿಗೆ ಗೃಹಭಾಗ್ಯ ಕಲ್ಪಿಸಲು ಸರ್ಕಾರ ಮುಂದಾಗಿದೆ. ಅರ್ಹ ಫಲಾನುಭವಿಗಳಿಗೆ ವಸತಿ ಯೋಜನೆಯಡಿ ಫ್ಲ್ಯಾಟ್ ಕೊಡುವುದಾಗಿ ತಿಳಿಸಿದೆ. ಎಲ್ಲಾ ಸರ್ಕಾರಿ ದಾಖಲೆಗಳ ಪರಿಶೀಲನೆ ನಡೆದಿದೆ. ಕೇವಲ 30 ಜನರ ದಾಖಲೆಗಳು ಮಾತ್ರ ಸಮರ್ಪಕವಾಗಿದೆ ಎಂದು ಅಧಿಕಾರಿಗಳು ಆಕ್ಷೇಪ ಎತ್ತಿದ್ದಾರೆ. ಆದರೆ, ಅಧಿಕಾರಿಗಳ ಆಕ್ಷೇಪದ ನಡುವೆಯೂ ಶತಾಯಗತಾಯ ಗುರುವಾರವೇ ಎಲ್ಲರಿಗೂ ಫ್ಲ್ಯಾಟ್ ನೀಡಲು ಕಸರತ್ತು ನಡೆದಿದೆ ಎನ್ನಲಾಗಿದೆ.

ಕೋಗಿಲು ಬಡಾವಣೆಯ ಸರ್ಕಾರಿ ಉರ್ದು ಶಾಲೆಯಲ್ಲಿ ವಲಸಿಗರ ದಾಖಲೆಗಳ ಪರಿಶೀಲನೆ ಮುಂದುವರಿದಿದೆ. ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ರಾಜೀವ್ ಗಾಂಧಿ ವಸತಿ ನಿಗಮದ ಅಧಿಕಾರಿಗಳು ದಾಖಲೆಗಳ ಪರಿಶೀಲನೆ ನಡೆಸಿದರು.

## ಕೈದಿ ಭೇಟಿಗೆ ಬಂದವರ ಬಳಿ ಗಾಂಜಾ: 2 ಬಂಧನ

**ಶಿವಮೊಗ್ಗ:** ನಗರದ ಕೇಂದ್ರ ಕಾರಾಗೃಹಕ್ಕೆ ಕೈದಿಯನ್ನ ಭೇಟಿಯಾಗಲು ಬಂದಿದ್ದ ವ್ಯಕ್ತಿಗಳು ಪ್ಯಾಂಟ್ ಒಳಗಡೆ ಗಾಂಜಾ ಬಚ್ಚಿಟ್ಟುಕೊಂಡು ಸಾಗಿಸಲು ಯತ್ನಿಸಿದ ಘಟನೆ ಬೆಳಕಿಗೆ ಬಂದಿದೆ.



ಘಟನೆ ಸಂಬಂಧ ತುಂಗಾನಗರ ಪೊಲೀಸ್ ಠಾಣೆ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಮಹಮ್ಮದ್ ಅಕ್ಬರ್ ಅಲಿಯಾಸ್ ಕಣ್ಣಪ್ಪ (22), ಮದರಿ ಪಾಳ್ಯ ಅಲಿಯಾಸ್ ಅಜ್ಗರ್ ಅಲಿ ಅಲಿಯಾಸ್ ಅಜ್ಜು (21) ಬಂಧಿತರಾದ ಆರೋಪಿಗಳು ಎಂದು ಗುರುತಿಸಲಾಗಿದೆ. ಪುಟ 2ಕ್ಕೆ

## ಜ.11ರಿಂದ ಬಹುರೂಪಿ ನಾಟಕೋತ್ಸವ

### 'ಬಾಬಾ ಸಾಹೇಬ್– ಸಮತೆಯೆಡೆಗೆ ನಡಿಗೆ' ಆಶಯ ಅನಾವರಣ

**ಮೈಸೂರು:** ಮೈಸೂರು ರಂಗಾಯಣ ವತಿಯಿಂದ ಜ.11 ರಿಂದ 18ರ ವರೆಗೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಆಯೋಜಿಸಲಾಗಿದೆ. ಬಹುರೂಪಿ ಬೆಳ್ಳಿಹಬ್ಬದ ಪ್ರಯುಕ್ತ ಬಹುರೂಪಿ 'ಬಾಬಾ ಸಾಹೇಬ್– ಸಮತೆಯೆಡೆಗೆ ನಡಿಗೆ' ಆಶಯದಲ್ಲಿ ನಡೆಯಲಿದೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದರು.

ರಂಗಾಯಣದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮಣಿಪುರದ ರಂಗಕರ್ಮಿ ಹೈಸ್ನಾಂ ಸಾವಿತ್ರಿ ದೇವಿ ಅವರು ಜ.12ರಂದು ಸಂಜೆ 5.30ಕ್ಕೆ ವನರಂಗದಲ್ಲಿ ಉತ್ಸವ ಉದ್ಘಾಟಿಸುವರು. ಸಾವಿತ್ರಿ ಅವರಿಗೆ ರಂಗಗೌರವ ನೀಡಲಾಗುವುದು ಎಂದು ಹೇಳಿದರು.

6 ರಾಜ್ಯಗಳ 12 ಬಹುಭಾಷಾ ನಾಟಕಗಳು ಸೇರಿದಂತೆ 24 ನಾಟಕಗಳು ಭೂಮಿಗೀತ, ವನರಂಗ, ಕಿರುರಂಗಮಂದಿರ ಹಾಗೂ ಕಲಾಮಂದಿರದಲ್ಲಿ ಪ್ರದರ್ಶನಗೊಳ್ಳಲಿವೆ. ಮಕ್ಕಳ ಬಹುರೂಪಿಯನ್ನು ಕಲಾಮಂದಿರದಲ್ಲಿ ಜ.12ರಂದು ಬೆಳಿಗ್ಗೆ 10.30ಕ್ಕೆ ವಿವರ ಪುಟ-2



### ಹಲವು ಭಾಷೆಗಳ 24 ನಾಟಕ

**ಮೈಸೂರು:** ಮಹಾರಾಷ್ಟ್ರ, ಮಣಿಪುರ, ತಮಿಳುನಾಡು, ಅಸ್ಸಾಂ, ಕೇರಳ ರಾಜ್ಯಗಳ ನಾಟಕಗಳು ಸೇರಿ ಒಟ್ಟು 24 ನಾಟಕಗಳು ಪ್ರದರ್ಶನಗೊಳ್ಳಲಿವೆ. ಭೂಮಿಗೀತ: ಪ್ರತಿದಿನ ಸಂಜೆ 6.30ಕ್ಕೆ, 12ರಂದು ಅಂಬೇಡ್ಕರ್ ಕೊಲಾಜ್, 13ರಂದು ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ, 14 ರಂದು ಪಿ ಥದೊಯ್(ಮಣಿಪುರಿ), 15ರಂದು ಮೀಡಿಯಾ, 16ರಂದು ತೃತೀಯ ರತ್ನ(ಮರಾಠಿ), 17ರಂದು ಕಳೆದು ಹೋದ ಹಾಡು, 18ರಂದು ಕವನ್ ಆನ್ ಅಂಬೇ ಡ್ಕರೈಟ್ ಒಪೆರಾ. ವಿವರ ಪುಟ-2

## ಬಳ್ಳಾರಿ: ಐಜಿ ವರ್ತಿಕಾ ಎತ್ತಂಗಡಿ

### ನೂತನ ಐಜಿ ಡಾ.ಹರ್ಷ, ಎಸ್ಪಿಯಾಗಿ ಸುಮನ್ ನೇಮಕ



**ಬಳ್ಳಾರಿ:** ಜನಾರ್ದನ ರೆಡ್ಡಿ ನಿವಾಸದ ಮುಂದೆ ಬ್ಯಾನರ್ ವಿಚಾರವಾಗಿ ನಡೆದ ಘರ್ಷಣೆ ಪ್ರಕರಣದಲ್ಲಿ ಮತ್ತೊಬ್ಬರು ಉನ್ನತ ಅಧಿಕಾರಿ ತಲೆ ದಂಡವಾಗಿದೆ. ಎಸ್ಪಿ ಪವನ್ ನೆಜ್ಜೂರು ಅಮಾನತು ಬೆನ್ನಲ್ಲೇ ಐಜಿ ವರ್ತಿಕಾ ಕಟಿಯಾರ್ ಅವರನ್ನ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಅಲ್ಲದೇ ಬಳ್ಳಾರಿ ವಲಯಕ್ಕೆ ನೂತನ ಐಜಿ ಆಗಿ ಡಾ. ಪಿ.ಎಸ್.ಹರ್ಷ ಅವರನ್ನು ಹಾಗೂ ನೂತನ ಎಸ್ಪಿ ಆಗಿ ಡಾ. ಸುಮನ್ ಡಿ ಪೆನ್ನೇಕರ್ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಬಳ್ಳಾರಿ ಎಸ್‌ಪಿಯಾಗಿ ಜ.1ರಂದು ಪವನ್ ನೆಜ್ಜೂರ್ ಅವರು, ಶೋಭಾರಾಣಿ ಅವರಿಂದ ಅಧಿಕಾರ ಸ್ವೀಕರಿಸಿದ್ದರು. ಬ್ಯಾನರ್ ಗಲಾಟೆ ಪ್ರಕರಣವನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲ ಎಂಬ ಕಾರಣ ನೀಡಿ ಅವರನ್ನು ಅಮಾನತು ಮಾಡಲಾಗಿತ್ತು. ಅಲ್ಲದೇ ಬಳ್ಳಾರಿ ವಿಭಾಗದ ಐಜಿ ಆಗಿದ್ದ ವರ್ತಿಕಾ ಕಟಿಯಾರ್ ಅವರು ಈ ಪ್ರಕರಣವನ್ನ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿಲ್ಲ. ಹೀಗಾಗಿ ಇವರ ಪುಟ 2ಕ್ಕೆ

## ರಾಜ್ಯ ರಾಜಕಾರಣ: ಸುಮಲತಾ ಇಂಗಿತ

### *ರಾಜಕೀಯ ಭವಿಷ್ಯ ಕುರಿತು ಹೈಕಮಾಂಡ್ ತೀರ್ಮಾನಕ್ಕೆ ಬದ್ಧ

**ಬೆಂಗಳೂರು:** ರಾಜ್ಯ ರಾಜಕಾರಣಕ್ಕೆ ಬರುವುದಾಗಿ ಮಾಜಿ ಸಂಸದೆ ಸುಮಲತಾ ಅಂಬರೀಷ್ ಇಂಗಿತ ವ್ಯಕ್ತಪಡಿಸಿದ್ದಾರೆ. ಪಕ್ಷದ ಹೈಕಮಾಂಡ್ ನಿರ್ದೇಶನ ಪ್ರಕಾರ ನಡೆದುಕೊಳ್ಳುತ್ತೇನೆ ಎಂದು ತಿಳಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಬುಧವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ತಮ್ಮ ಮುಂದಿನ ರಾಜಕೀಯ ಭವಿಷ್ಯ ಕುರಿತು ಬಿಜೆಪಿ ಹೈಕಮಾಂಡ್ ಮತ್ತು ರಾಜ್ಯ ನಾಯಕರು ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು.



ಮುಂದಿನ ಚುನಾವಣೆ ವಿಚಾರದಲ್ಲಿ ಹೈಕಮಾಂಡ್ ಹಾಗೂ ಪಕ್ಷದ ನಾಯಕರು ಏನು ತೀರ್ಮಾನ ಮಾಡುತ್ತಾರೋ ಅದಕ್ಕೆ ನಾನು ಬದ್ಧಳಾಗಿರುತ್ತೇನೆ. ನಾನೂ ಸಹ ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತೇನೆ. ರಾಜ್ಯ ರಾಜಕಾರಣಕ್ಕೆ ಪ್ರವೇಶಿಸುವ ಕುರಿತು ಯಾರದೇ ವಿರೋಧವಿಲ್ಲ. ಸಮಯ, ಸಂದರ್ಭ ಎಲ್ಲವೂ ಕೂಡಿಬಂದಾಗ ಎಲ್ಲವೂ ಸಾಧ್ಯ. ಮಂಡ್ಯ ಜಿಲ್ಲೆಯಲ್ಲಿ ಪಕ್ಷವನ್ನು ಕೆಳಮಟ್ಟದಿಂದ ಗಟ್ಟಿಗೊಳಿಸಲು ಎಲ್ಲರೂ ಒಗ್ಗಟ್ಟಾಗಿ ಶ್ರಮಿಸಬೇಕಿದೆ ಎಂದು ಹೇಳಿದರು. ಜಿಲ್ಲೆಯಲ್ಲೀಗ ಬಿಜೆಪಿ ಮತಗಳಿಕೆ ಪ್ರಮಾಣವೂ ಹೆಚ್ಚಾಗಿದೆ. ಪಕ್ಷ ಸಂಘಟನೆ ಸರಿಯಾದ ದಿಕ್ಕಿನಲ್ಲಿ ಸಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬಳ್ಳಾರಿಯಲ್ಲಿ ನಡೆದ ಇತ್ತೀಚಿನ ದುರ್ಘಟನೆ ಕುರಿತು ಮಾತನಾಡಿದ ಸುಮಲತಾ, ಬಳ್ಳಾರಿ ಘಟನೆ ಅತ್ಯಂತ ಬೇಸರ ತರಿಸಿದೆ. ಪಕ್ಷದ ಒಳಗಿನ ಕಲಹವಾಗಿರಲಿ ಅಥವಾ ಬೆಂಬಲಿಗರ ನಡುವಿನ ಸಂಘರ್ಷವಾಗಿರಲಿ, ಇಂತಹ ಕಚ್ಚಾಟದಲ್ಲಿ ಒಬ್ಬ ವ್ಯಕ್ತಿಯ ಪ್ರಾಣವೇ ಹೋಗಿರುವುದು ನೋವಿನ ಸಂಗತಿ. ಶತ್ರುತ್ವ ಈ ಮಟ್ಟಕ್ಕೆ ಹೋಗಬಾರದು ಎಂದು ಕಳವಳ ವ್ಯಕ್ತಪಡಿಸಿದರು.

## ಬಟ್ಟೆಬಿಚ್ಚಿ ಮಹಿಳೆ 'ಹೈಡ್ರಾಮ ಸೃಷ್ಟಿ'

### * ಬಂಧಿಸಲು ಹೋದ ಪೊಲೀಸರ ಮೇಲೆ ಹಲ್ಲೆ: ಕಮಿಷನರ್ ಶಶಿಕುಮಾರ್

**ಹುಬ್ಬಳ್ಳಿ:** ಹನಿಟ್ರಾ ಆಪ್, ಕಿಡ್ನಾ ಆಪ್ ಸೇರಿದಂತೆ ಹಲವು ಪ್ರಕರಣಗಳ ಆರೋಪಿ ಮಹಿಳೆಯನ್ನು ಬಂಧಿಸಲು ಮುಂದಾದ ಮಹಿಳಾ ಪೊಲೀಸರನ್ನು ಹಲ್ಲಿನಿಂದ ಕಚ್ಚಿ, ತನ್ನ ಬಟ್ಟೆಯನ್ನು ತಾನೇ ಬಿಚ್ಚಿಕೊಂಡು ಹೈಡ್ರಾಮ ಸೃಷ್ಟಿಸಿರುವ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ.

ಈ ಘಟನೆ ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರ ನಡುವಿನ ಕೆಸರೆರಚಾಟಕ್ಕೆ ಕಾರಣವಾಗಿದೆ. ಹೈಡ್ರಾಮ ಸೃಷ್ಟಿಸಿದ ಮಹಿಳೆ ಬಿಜೆಪಿ ಕಾರ್ಯಕರ್ತೆ ಆಗಿದ್ದು, ಬಿಜೆಪಿ ನಾಯಕರು ಆಕೆಯ ಪರವಾಗಿ ಬ್ಯಾಟಿಂಗ್ ಮಾಡಿದ್ದಾರೆ. ಆದರೆ ಆರೋಪಿಗಳನ್ನು ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತ ಶಶಿಕುಮಾರ್ ನಿರಾಕರಿಸಿದ್ದಾರೆ.

ಬಿಜೆಪಿ ಕಾರ್ಯಕರ್ತೆಯ ಬಟ್ಟೆ ಬಿಚ್ಚಿ ಥಳಿಸಿದ್ದಾರೆ ಎನ್ನಲಾದ ವಿಡಿಯೋ ವೈರಲ್ ಆದ ಬೆನ್ನಲ್ಲೇ ಪೊಲೀಸ್ ಆಯುಕ್ತರು ಪ್ರಕರಣ ಸಂಪೂರ್ಣ ವಿವರಣೆ ನೀಡಿದ್ದಾರೆ. ಪೊಲೀಸರು ಆರೋಪಿ ಮಹಿಳೆಯನ್ನ ವಶಕ್ಕೆ ಪಡೆದಾಗ ಆಕೆ ವಿವಸ್ತ್ರಳಾಗಿರಲಿಲ್ಲ. ವ್ಯಾನ್ ಹತ್ತಿದ ಮೇಲೆ ತನ್ನ ಬಟ್ಟೆಯನ್ನು ತಾನೇ ಬಿಚ್ಚಿಕೊಂಡು ಸೀನ್ ಕ್ರಿಯೇಟ್ ಮಾಡಿದ್ದಾಳೆ ಎಂದು ಅವರು ತಿಳಿಸಿದ್ದಾರೆ.




ಮಾಧ್ಯಮಗಳೊಂದಿಗೆ ಬುಧವಾರ ಮಾತನಾಡಿದ ಅವರು, 2020ರಿಂದ ಬಂಧಿತ ಮಹಿಳೆ ಮೇಲೆ 5 ಪ್ರಕರಣ ದಾಖಲಾಗಿವೆ. ಅದರಲ್ಲಿ ಧಾರವಾಡ ವಿದ್ಯಾಗಿರಿಯಲ್ಲಿ ಒಂದು ಮತ್ತು ಇದೇ ಕೇಶ್ವಾಪುರ ಠಾಣೆಯಲ್ಲಿ 4 ಕೇಸ್ ದಾಖಲಾಗಿವೆ. ಈ ವರ್ಷದಲ್ಲಿಯೂ 4 ಪ್ರಕರಣ ಪುಟ 2ಕ್ಕೆ

# ಜನಪರವಾಗಿ ಸೊಸೈಟಿ ಮುಂದುವರೆಯಲಿ: ಸುತ್ತೂರು ಶ್ರೀ



ಮೈಸೂರು: ಸಮಾಜದಲ್ಲಿ ನಿತ್ಯ ಬಡ್ಡಿಯಿಂದಾಗಿ ಜನರು ಅನೇಕ ರೀತಿಯ ಶೋಷಣೆ ಒಳಗಾಗುತ್ತಿರುವುದನ್ನು ಸಂದರ್ಭದಲ್ಲಿ ಈ ಕುಟುಂಬ ಆಧಾರಿತ ಬ್ಯಾಂಕ್ ಜನಪರ ಯಶಸ್ವಿಯಾಗಿ ಮುಂದುವರೆಯಲಿ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಕುವೆಂಪುನಗರದ ಪಂಚಮಂತ್ರ ರಸ್ತೆಯಲ್ಲಿರುವ ಫ್ಯಾಮಿಲಿ ಡೆವಲಪ್ ಮೆಂಟ್ ಕೋ ಅಪರೇಟಿವ್ ಥ್ರೀಫ್ಟ್ ಮತ್ತು ಕ್ರೆಡಿಟ್ ಸೊಸೈಟಿ ಲಿಮಿಟೆಡ್ (ಫ್ಯಾಮ್ಕೋ) ನೂತನ ಶಾಖೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕುಟುಂಬದ ಒಳಿತಾಗಿ ಸಹಕಾರಿ ತತ್ವದಡಿಯಲ್ಲಿ ಮಾಡುತ್ತಿರುವ ಬ್ಯಾಂಕ್ ಇದಾಗಿದೆ. ಬ್ಯಾಂಕ್ ಗಳಿಂದ ಸಾಲ ಸೌಲಭ್ಯವನ್ನು ಕೈಗೆಟುಕುವ ದರದಲ್ಲಿ ಒದಗಿಸಲು ಬಹುಮುಖ್ಯ ಉದ್ದೇಶವಾಗಿದೆ. ಕುಟುಂಬಕ್ಕೆ ಬೇಕಾದ ಚಿನ್ನ ಖರೀದಿ ಸಂದರ್ಭದಲ್ಲಿ ಸಾಲ ಸೌಲಭ್ಯವನ್ನು ವಿಶೇಷವಾಗಿ ನೀಡುತ್ತಿದೆ. ಇಂದು ಶಾಖೆ ತೆರೆದಿದ್ದು ಮುಂದೆ ದೊಡ್ಡ ಮಟ್ಟದಲ್ಲಿ ಬೆಳೆಯಲಿ. ವೆಂಕಟೇಶ್ ಅಂತಹ ಅಧಿಕಾರಿ ಜನಹಿತ ಅಧಿಕಾರಿಗಳು ಇಲ್ಲಿದ್ದಾರೆ ಎಂದರು. ಒಬ್ಬರೂ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು, ಮತ್ತೊಬ್ಬರೂ ಸ್ವಾತಂತ್ರ್ಯ ಭಾರತ ಹೇಗಿರಬೇಕೆಂದು ತಿಳಿಸಿಕೊಟ್ಟ ಮಹನೀಯರನ್ನು ಸ್ಮರಿಸಲಾಗಿದೆ ಎಂದು ತಿಳಿಸಿದರು.

ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾತನಾಡಿ, ಭಾರತದಲ್ಲಿ 150ಕ್ಕೂ ಹೆಚ್ಚು ಶಾಖೆ 1500 ಕ್ಕೂ ಹೆಚ್ಚು ಮಂದಿಗೆ ಉದ್ಯೋಗವನ್ನು ಧನಲಕ್ಷ್ಮಿ ಗ್ರೂಪ್ ನಿಂದ ನೀಡಲಾಗಿದೆ. ಮೊದಲ ಶಾಖೆಯನ್ನು ಮೈಸೂರಿನಲ್ಲಿ ತೆರೆದಿರುವುದು ಸ್ವಾಗತಾರ್ಹ. ಬಹುತೇಕ ಬ್ಯಾಂಕ್ ಗಳು ಲಾಭ, ಮೋಸದಿಂದ ಕೂಡಿವೆ. ಇಂತಹ ವೇಳೆ ಜನಪರವಾಗಿ ಸೇವೆ ನೀಡುವ ಉದ್ದೇಶದಿಂದ ಬ್ಯಾಂಕ್ ತೆರೆದಿರುವ ಎಲ್ಲರಿಗೂ ಶುಭಾಶಯಗಳು ಎಂದರು.

ಮಾಜಿ ಸಚಿವ ಬಿ.ಸೋಮಶೇಖರ್ ಮಾತನಾಡಿ, ಅನೇಕ ಹಣಕಾಸಿನ ಸಂಸ್ಥೆಗಳನ್ನು ನೋಡಿದ್ದೇವೆ. ಎಲ್ಲರೂ ರಿಸರ್ವ್ ಬ್ಯಾಂಕ್ ಅಡಿಯಲ್ಲಿ ಅನುಮತಿ ಪಡೆದು ಎಲ್ಲಾ ನಿಬಂಧನೆಗಳ ಅಡಿಯಲ್ಲಿ ವ್ಯವಹಾರ ನಡೆಸಿಕೊಂಡು ಬಂದಿದ್ದಾರೆ.ಆದರೂ ಕೆಲವು ಬ್ಯಾಂಕ್ ಅವ್ಯವಹಾರ ನೋಡಿದರೆ ಭಯ ಆಗುತ್ತದೆ. ಠೇವಣಿದಾರರು, ಬ್ಯಾಂಕ್ ಗ್ರಾಹಕರು ಹಣಕ್ಕಾಗಿ ಹೋರಾಟ ಮಾಡುವುದನ್ನು ನೋಡಿದ್ದೇವೆ. ಇವರೆಲ್ಲರಿಗೂ ರಿಸರ್ವ್ ಬ್ಯಾಂಕ್ ನಿಬಂಧನೆ ಅನ್ವಯಿಸುವುದಿಲ್ಲವೆ ಎನಿಸುತ್ತದೆ ಎಂದರು. ಇಂದಿರಾಗಾಂಧಿ ರಾಷ್ಟ್ರೀಕರಣ ಮಾಡಿ ಎಲ್ಲಾ ಬ್ಯಾಂಕ್ ನಡಿಯಲ್ಲಿ ಸಾಲ ಸೌಲಭ್ಯ ಕಲ್ಪಿಸಿದರು. ಅದು ಈಗ ಮುಂದುವರೆದುಕೊಂಡು ಬಂದಿದೆ. 15 ಲಕ್ಷ ಕೋಟಿ ರೂ. ಬೃಹತ್ ಸಾಲ ಪಡೆದು ಸಣ್ಣ ಸಣ್ಣ ಕಂಪನಿಗೆ ಸಾಲ ಕೊಡುತ್ತೇವೆಂದು ತಿಳಿಸಿ ಸರ್ಕಾರಕ್ಕೆ ಶೇ.30 ರಷ್ಟು ತೆರಿಗೆಯನ್ನು ಕಡಿಮೆ ಮಾಡಿಕೊಂಡು ಸಾಲವನ್ನು ವಾಪಾಸ್ ಮಾಡದೇ ವಂಚಿಸಿರುವುದನ್ನು ನಾವು ನೋಡುತ್ತಿದ್ದೇವೆ. ಇವರಿಗೆ ಯಾವ ನಿಯಮವು ಅನ್ವಯಿಸುದಿಲ್ಲ ಎನಿಸುತ್ತದೆ ಎಂದರು.

ಸರ್ವರಿಗೂ ಸಮಪಾಲು ಸಿಗಬೇಕೆಂಬುದೇ ಸಂವಿಧಾನದ ಮೂಲ ಉದ್ದೇಶ.ಆದರೆ ಈಗ ಖಾಸಗೀಕರಣ ಹೆಚ್ಚಾಗಿದೆ. ಕೇಂದ್ರದ ಬಹುತೇಕ ಕಂಪನಿಗಳು ಖಾಸಗೀಕರಣ ಮಾಡಿ ಮೀಸಲಾತಿ ಹೋಗಿಸಲಾಗಿದೆ. ಹೀಗೆ ಅನೇಕ ರೀತಿಯಲ್ಲಿ ವಂಚಿಸಲಾಗುತ್ತಿದೆ ಎಂದು ಹೇಳಿದರು. ಗೋವಾ ರಾಜ್ಯದ ಮಾಜಿ ಡಿಸಿಎಂ ಚಂದ್ರಕಾಂತ್ ಕಾವ್ಲೇಕರ್, ಮಾಜಿ ಮಹಾಪೌರ ಪುರುಷೋತ್ತಮ್, ಧನಲಕ್ಷ್ಮಿ ಸಮೂಹ ಸಂಸ್ಥೆಗಳ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ.ವಿಬಿಂದಾಸ್ ಕಾಡಂಗೊಟ್ಟು, ಜಿಲ್ಲಾ ಮತ್ತು ಸೆಷನ್ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಆರ್.ಶಾರದಾ, ಧನಲಕ್ಷ್ಮಿ ಗ್ರೂಪ್ ಆಫ್ ಕಂಪನಿಯ ನಿರ್ದೇಶಕರಾದ ಕೆ.ಸುನೀಲ್ ಕುಮಾರ್, ಕೆ.ಎಸ್.ಶ್ಯಾಮ್ ದೇವ್, ಕೆ.ಬಿ.ಸೂರಜ್, ಬೈಜು ಎಸ್.ಚುಲಿಯಲ್, ಮುಖ್ಯಕಾರ್ಯಾಚರಣಾಧಿಕಾರಿ ಮ್ಯಾಥ್ಯೂ ಥಾಮಸ್, ಫ್ಯಾಮ್ಕೋ ಮುಖ್ಯಸಂಘಟಕ ಗುರುಲಿಂಗಯ್ಯ,ವಲಯ ಸಂಘಟಕ ಸಿ.ಎಂ. ಕೃಷ್ಣ, ಸಂಘಟಕರಾದ ಡಾ.ಕೆ. ಕುಮಾರ್, ಇಂದ್ರಾಣಿ ಇನ್ನಿತರರು ಉಪಸ್ಥಿತರಿದ್ದರು.

ಮೊದಲ ಪುಟದಿಂದ

## ಇನ್ನೆಷ್ಟು ದಿನವೋ ಗೊತ್ತಿಲ್ಲ!

ಬಂದಿಲ್ಲ. ಜಿಎಸ್‌ಟಿ ತಂದವರು ಯಾರು? ಇಷ್ಟು ವರ್ಷ ಜನರನ್ನ ಸುಲಿಗೆ ಮಾಡಿ ಈಗ ಜಿಎಸ್‌ಟಿ ಕಡಿಮೆ ಮಾಡಿದ್ದೀವಿ ಅಂತಾರೆ. ರಾಜ್ಯಕ್ಕೆ 10 ರಿಂದ 12 ಸಾವಿರ ಕೋಟಿ ನಷ್ಟ ಆಗಿದೆ. ಇದಕ್ಕೆಲ್ಲಾ ಯಾರು ಹೊಣೆ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಕೇಂದ್ರ ಸರ್ಕಾರದಿಂದ ನಮಗೆ 60–70 ಸಾವಿರ ಕೋಟಿ ವಾಪಾಸ್ ಬರುತ್ತದೆ. ಒಂದು ರೂಪಾಯಿ ತೆರಿಗೆ ಕೊಟ್ಟರೆ 14ರಿಂದ 15 ಪೈಸೆ ವಾಪಸ್ ಕೊಡ್ತಾರೆ. ಅಪ್ಪರ್ ಭದ್ರಾಕ್ಕೆ ಅನುದಾನ ಕೊಟ್ಟೀದ್ದಾರಾ? ಇವರ ಅವಧಿಯಲ್ಲಿ ಮೆಡಿಕಲ್ ಕಾಲೇಜು ಕಂಪ್ಲೀಟ್ ಮಾಡಲಿಲ್ಲ ಯಾಕೆ ಎಂದು ವಾಗ್ದಾಳಿ ಪ್ರಶ್ನಿಸಿದರು. ಬಳ್ಳಾರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಿನ್ನೆ ಡಿಕೆಶಿ ನೋಡಿಕೊಂಡು ಬಂದಿದ್ದಾರೆ. ಬ್ಯಾನರ್ ಬಿಚ್ಚಿ ಹಾಕಿದವರು ಯಾರು? ಬಳ್ಳಾರಿಯಲ್ಲಿ ಗಲಾಟೆ ಆಗಲು ಪ್ರಚೋದನೆ ಮಾಡಿದವರು ಯಾರು? ಬಿಜೆಪಿಯವರಿಗೆ ಅಸೂಯೆಯಿಂದ ತಡೆದುಕೊಳ್ಳೋಕೆ ಆಗಲ್ಲ ಎಂದು ಕುಟುಕಿದರು.

ಹುಬ್ಬಳ್ಳಿಯಲ್ಲಿ ಮಹಿಳೆ ವಿವಸ್ತ್ರಗೊಳಿಸಿ ಹಲ್ಲೆ ಪ್ರಕರಣ ಬಗ್ಗೆ ಮಾತನಾಡಿದ ಅವರು, ಆಯಮ್ಮನೇ ವಿವಸ್ತ್ರ ಆಗಿ ಮಹಿಳಾ ಪೊಲೀಸರಿಗೆ ಕಚ್ಚಿದ್ದಾರೆ. ವೆರಿ ಬ್ಯಾಡ್. ಪೊಲೀಸರು ಅರೆಸ್ಟ್ ಮಾಡಲು ಹೋದಾಗ ಅವರನ್ನೇ ಕಚ್ಚಿದ್ದಾರೆ. ಆ ವೇಳೆ 10 ಮಹಿಳಾ ಪೊಲೀಸರು ಇದ್ದರು. ಕಾನೂನು ಕೈಗೆ ತಗೊಬಾರದು. ತಗೊಂಡ್ರೆ ಕಾನೂನು ಪ್ರಕಾರ ಕ್ರಮ ಎಂದು ಎಚ್ಚರಿಕೆ ನೀಡಿದರು.

## ಬಸ್ ಚಾಲಕ ಸಾವು

ಸಂಚಾರ ಸುಗಮಗೊಳಿಸಿದರು. ಗಾಯಾಳುಗಳನ್ನು ತಕ್ಷಣವೇ ಚಾಮರಾಜನಗರ ಸಿಮ್ಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ರವಾನಿದರು.

## ಬಳ್ಳಾರಿ: ಐಜಿ ವರ್ತಿಕಾ ಎತ್ತಂಗಡಿ

ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಡಿಜಿ–ಐಜಿಪಿ ಕಡೆಯಿಂದ ಸರ್ಕಾರಕ್ಕೆ ವರದಿ ಸಲ್ಲಿಕೆಯಾಗಿತ್ತು. ಹೀಗಾಗಿ ಐಜಿ ವರ್ತಿಕಾ ಕಟಿಯಾರ್ ಅವರನ್ನ ಸರ್ಕಾರ ವರ್ಗಾವಣೆ ಮಾಡಿದೆ. ಬಳ್ಳಾರಿ ಬ್ಯಾನರ್ ಗಲಭೆ ಪ್ರಕರಣದಲ್ಲಿ 26 ಮಂದಿ ಹಾಗೂ ಒಬ್ಬ ಖಾಸಗಿ ಗನ್‌ಮ್ಯಾನ್ ಬಂಧಿತರಾಗಿದ್ದಾರೆ. ಘಟನೆಯಲ್ಲಿ ಬಳಸಿದ್ದ ಬುಲೆಟ್‌ಗಳು, ಗಾಜಿನ ಬಾಟಲಿಗಳು ಪೊಲೀಸರ ವಶಕ್ಕೆ ಪಡೆದಿದ್ದಾರೆ. ಉಳಿದ ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ.

## ಪ್ರತಿ ಗುರುವಾರ ಭಗವದ್ಗೀತೆ ತರಬೇತಿ

ಮೈಸೂರು: ಇಲ್ಲಿನ ವಿಜಯನಗರ 3ನೇ ಹಂತದ ವೇದಶ್ರೀ ಫೌಂಡೇಶನ್‌ನಿಂದ ವಿಜಯ ನಗರದ ಭಾರತೀಯ ವಿದ್ಯಾ ಭವನ ವಿದ್ಯಾಲ ಯದಲ್ಲಿ 7ರಿಂದ 13 ವರ್ಷದ ಮಕ್ಕಳಿಗಾಗಿ ಪ್ರತಿ ಗುರುವಾರ ಸಂಜೆ 4.30ರಿಂದ 6ರವರೆಗೆ ಭಗವದ್ಗೀತೆ ತರಗತಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ವಿಕಾಸ್ ತಿಳಿಸಿದರು. ಮಕ್ಕಳನ್ನು ಭವಿಷ್ಯದ ಜವಾಬ್ದಾರಿಯುತ ನಾಗರಿಕರಾಗಲು ಸಹಕರಿಸುವುದು ಮತ್ತು ಮೌಲ್ಯಧಾರಿತ ವಿಷಯಗಳನ್ನು ಅವರಿಗೆ ತಿಳಿಸುವುದು ತರಗತಿಯ ಉದ್ದೇಶ. ಭಗವದ್ಗೀತೆ ಆಧಾರಿತ ಕ್ರೀಡೆ, ಗುಂಪು ಚಟುವಟಿಕೆ, ಕಥೆ ಮುಂತಾದವನ್ನು ಹಮ್ಮಿಕೊಳ್ಳಲಾಗುವುದು. ಮಾಸಿಕ ?300 ಶುಲ್ಕವಿದೆ. ಜ.8ರಂದು ಸಂಜೆ 7ಕ್ಕೆ ಉದ್ಘಾಟನೆ ನಡೆಯಲಿದೆ. ಮಾಹಿತಿಗೆ ಮೊ.ಸಂ.82176 41068 ಸಂಪರ್ಕಿಸಬಹುದು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಲೋಹಿತ್ ಹಾಜರಿದ್ದರು.

ಮೊದಲ ಪುಟದಿಂದ

## ಸಿದ್ದು ಅಹಿಂದ ನಾಯಕ: ಜೋಕ್ ಆಫ್ ದ ಇಯರ್!

ಅರಸು ಅವರು ಹಾವನೂರು ವರದಿ ಜಾರಿ ಮಾಡಿದರು. ಹಿಂದುಳಿದ ವರ್ಗದ ಅಧಿಕಾರಿ ಇದ್ದಾರೆಂದರೆ ಅದಕ್ಕೆ ಕಾರಣ ಅರಸು. ರಾಹುಲ್ ಗಾಂಧಿ ಹೇಳಿದ್ದರು ಅನ್ನೋ ಕಾರಣಕ್ಕೆ ವರದಿ ಬಿಸಾಕಿದ್ದೀರಿ. ಕಾಂಗ್ರೆಸ್ ಬಗ್ಗೆ ಸಿದ್ದರಾಮಯ್ಯ ಮಾತನಾಡುತ್ತಲೇ ಇಲ್ವಲ್ಲಾ? ಬರೀ ಅಹಿಂದ ಅಹಿಂದ, ಅಹಿಂದವೇ ಕಾಂಗ್ರೆಸ್ ಎಂದು ವಿಶ್ವನಾಥ್ ತಿರುಗೇಟು ನೀಡಿದರು.

ಸಿದ್ದರಾಮಯ್ಯ ದೇವರಾಜ ಅರಸು ಅವರಿಗೆ ಸಾಟಿ ಇಲ್ಲ. ಅರಸು ಸಮಾನ ಎನ್ನುವುದು ನಗೆಪಾಟಲು. ಇವರು ಯಾವ ಅಹಿಂದ ನಾಯಕ ರೀ? ಸಿದ್ದರಾಮಯ್ಯಗೆ ಕೃತಜ್ಞತೆ ಇಲ್ಲ. ಯುವ ನಾಯಕತ್ವವನ್ನ ಬೆಳೆಸಲಿಲ್ಲ. ರಾಜ್ಯದಲ್ಲಿ ಶಾಂತಿ, ಸುಭಿಕ್ಷೆ ಇಲ್ಲ ಹೈಕಮಾಂಡ್ ಸುತ್ತಿಗೆ ಹಿಡಿದುಕೊಂಡು ಕೂತಿದೆ. ಯಾವಾಗ ಹೊಡೆಯುತ್ತೋ ಗೊತ್ತಿಲ್ಲ. ಅದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಅಹಿಂದ ಮಂತ್ರ ಜಪಿಸುತ್ತಿದ್ದಾರೆ ಎಂದು ಟಾಂಗ್ ನೀಡಿದರು.

## ಅರಸು– ಸಿದ್ದು ಹೋಲಿಕೆ ಬೇಡ: ಬಿಎಸ್‌ವೈ ವಾಗ್ದಾಳಿ

ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯ ದೇವರಾಜ ಅರಸು ದಾಖಲೆ ಮುರಿದ ವಿಚಾರಕ್ಕೆ ಬಿಜೆಪಿ ಕಚೇರಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, ದೇವರಾಜ ಅರಸು ಆಡಳಿತ ವೈಖರಿ ಬೇರೆ, ಸಿದ್ದರಾಮಯ್ಯ ಆಡಳಿತ ವೈಖರಿ ಬೇರೆ. ಈ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿದೆ. ಈ ಸಮಯದಲ್ಲಿ ದೊಡ್ಡ ಸಾಧನೆ ಮಾಡಿದ್ದೇನೆ ಎಂದು ತೋರಿಸಿದ್ದನ್ನು ಜನರು ಮೆಚ್ಚೋದಿಲ್ಲ ಎಂದು ಕಿಡಿಕಾರಿದರು.

ಈಗಾಗಲೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸುತ್ತಿದೆ. ಮುಂದಿನ ಚುನಾವಣೆಯಲ್ಲೂ ಬಿಜೆಪಿ ನಿಶ್ಚಿತವಾಗಿ ದೊಡ್ಡ ಬಹುಮತದೊಂದಿಗೆ ಸರ್ಕಾರ ರವನೆ ಮಾಡುವ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇವೆ. ಕಾರ್ಯಕರ್ತರು ಉತ್ಸಾಹದಿಂದ ಮುಂದೆ ಬಂದಿದ್ದಾರೆ. ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ ಮತ್ತು ಎಲ್ಲಾ ಚುನಾವಣೆಗಳಲ್ಲಿ ಗೆಲುವು ಸಾಧಿಸುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಕೈದಿ ಭೇಟಿಗೆ ಬಂದವರ ಬಳಿ ಗಾಂಜಾ: 2 ಬಂಧನ

ಕೇಂದ್ರ ಕಾರಾಗೃಹದಲ್ಲಿ ಕೈದಿಯನ್ನು ಭೇಟಿಯಾಗಲು ಬಂದಿದ್ದ ವೇಳೆ ಜೈಲು ಅಧಿಕಾರಿಗಳು ತಪಾಸಣೆ

ನಡೆಸಿದಾಗ ಅವರ ಪ್ಯಾಂಟ್ ಒಳಗಡೆ ಗಾಂಜಾ ಪತ್ತೆಯಾಗಿದೆ. ಜೈಲು ಅಧಿಕಾರಿಗಳು ತುಂಗಾನಗರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಆಗಮಿಸಿದ ಪೊಲೀಸರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

## ಕಾರು ಪಲ್ಟಿಯಾಗಿ ಬೆಂಕಿ: ಇಬ್ಬರು ಸಜೀವ ದಹನ

ಬೀಳುತ್ತಿದ್ದಂತೆ ಬೆಂಕಿ ಹೊತ್ತಿಕೊಂಡಿದೆ. ಕ್ಷಣಾರ್ಧದಲ್ಲಿ ಕಾರು ಹೊತ್ತಿ ಉರಿದಿದೆ.

ಕಾರಿನಲ್ಲಿದ್ದ ಇಬ್ಬರು ಪ್ರಯಾಣಿಕರು ಹೊರಬರಲಾಗದೇ ಸಜೀವ ದಹನವಾಗಿದ್ದಾರೆ. ಬೆಂಕಿಯ ತೀವ್ರತೆಗೆ ಕಾರು ಹಾಗೂ ಮೃತರ ಗುರುತು ಪತ್ತೆಯಾಗದಷ್ಟು ಸುಟ್ಟು ಕರಕಲಾಗಿದೆ. ಕಾರಿನ ನಂಬರ್ ಪ್ಲೇಟ್ ಸಹ ಸಂಪೂರ್ಣವಾಗಿ ಸುಟ್ಟು ಹೋಗಿದೆ. ವಾಹನದ ಮಾಲೀಕತ್ವ ಹಾಗೂ ಮೃತರ ಗುರುತು ಪತ್ತೆ ಮಾಡಬೇಕಿದೆ.

# ಬಹುರೂಪಿಯಲ್ಲಿ ಬಾಬಾ ಸಾಹೇಬ್

## ಸಮತೆಯೆಡೆಗೆ ನಡಿಗೆ ಅನಾವರಣ । ರಾಷ್ಟ್ರೀಯ ನಾಟಕೋತ್ಸವ ಭಿತ್ತಿಪತ್ರ ಬಿಡುಗಡೆಗೊಳಿಸಿ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರ್ ಅಭಿಮತ

ಮೈಸೂರು: ಮೈಸೂರು ರಂಗಾಯಣದ ಪ್ರತಿಷ್ಠಿತ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಬಹುರೂಪಿ ಬಾಬಾ ಸಾಹೇಬ್– ಸಮತೆಡೆಗೆ ನಡಿಗೆ ಆಶಯದಲ್ಲಿ ಜ. 11ರಿಂದ 18ರವರೆಗೆ ನಡೆಸಲಾಗುವುದು. ನಾಟಕ, ಸಂಗೀತ, ಜಾನಪದ, ಕಲೆ, ಚಲನಚಿತ್ರಗಳಲ್ಲಿ ಅಂಬೇಡ್ಕರರ ಸಮಗ್ರ ವ್ಯಕ್ತಿತ್ವ ಪ್ರದರ್ಶಿಸಲಾಗುತ್ತಿದೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಮೈಸೂರು ರಂಗಾಯಣ 2001ರಿಂದ ಆರಂಭವಾದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಬೆಳ್ಳಿ ಮಹೋತ್ಸವ ಆಚರಿಸುತ್ತಿದೆ. ಅರ್ಥಪೂರ್ಣ ಶೀರ್ಷಿಕೆಯೊಂದಿಗೆ ಆಚರಿಸುವುದು ಸಂಪ್ರದಾಯ. ಈ ವರ್ಷದ ಆಶಯ ಬಾಬಾ ಸಾಹೇಬರಿಗೆ ಗೌರವ ಸಲ್ಲಿಸುವುದಾಗಿದೆ ಎಂದರು.

### ಅಸ್ಸಾಂ ಹಿರಿಯ ನಟಿಗೆ ರಂಗಗೌರವ

ಬಹು ರೂಪಿ ಬೆಳ್ಳಿಹಬ್ಬದ ಅಂಗವಾಗಿ ಬೆಳ್ಳಿ ಬಹು ರೂಪಿ ರಂಗಗೌರವವನ್ನು ಭಾರತ ರಂಗಭೂಮಿಯ ಹೆಸರಾಂತ ಹಿರಿಯ ನಟಿ ಪದ್ಮಶ್ರೀ ಹೈಸ್ನಾಂ ಸಾಬಿತ್ರಿ ಅವರಿಗೆ ನೀಡಿ ಸನ್ಮಾನಿಸಲಾಗುತ್ತಿದೆ. ಸಾಬಿತ್ರಿ ಅವರ ಅಭಿನಯ ರಂಗಭೂಮಿ ಒಂದು ಅನನ್ಯ ಅಭಿವ್ಯಕ್ತಿಯ ಮಾಧ್ಯಮವಾಗಿದೆ. ಪ್ರಸ್ತುತ ಅವರು ಕಲಾಕ್ಷೇತ್ರ ಮಣಿಪುರ ತಂಡದ ಮಾತೃ ಗುರು ಆಗಿದ್ದಾರೆ ಎಂದರು.

ಸೆ. 9ರಂದು ಬೆಳಗ್ಗೆ 10.309ಕ್ಕೆ ಭೂಮಿಗೀತದಲ್ಲಿ ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಬೀದಿನಾಟಕಕ್ಕೆ ಚಾಲನೆ ನೀಡಲಿದ್ದಾರೆ. ನ. 11ರಂದು ಬೆಳಗ್ಗೆ 10.30ಕ್ಕೆ ಬಹುರೂಪಿ ಚಲನಚಿತ್ರೋತ್ಸವಕ್ಕೆ ಸಾಹಿತಿ ಬರಗೂರು ರಾಮಚಂದ್ರಪ್ಪ ಚಾಲನೆ ನೀಡಲಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ. ಕೆ.ವಿ.ನಾಗರಾಜಮೂರ್ತಿ, ರಂಗ ಸಮಾಜದ ಸದಸ್ಯ ಎಂ.ಎಸ್. ಜಹಾಂಗೀರ್ ಭಾಗವಹಿಸಲಿದ್ದಾರೆ. ಸೆ. 11ರಂದು ಸಂಜೆ 6 ಗಂಟೆಗೆ ಕಿಂದರಿಜೋಗಿ ಆವರಣದಲ್ಲಿ ಜನಪದ ಉತ್ಸವಕ್ಕೆ ಕರ್ನಾಕ ಬಯಲಾಟ ಅಕಾಡೆಮಿ ಅಧ್ಯಕ್ಷ ಡಾ.ದುರ್ಗಾದಾಸ್ ಚಾಲನೆ ನೀಡುವರು.

> ಬಹುರೂಪಿ ಬೆಳ್ಳಿ ಹಬ್ಬದ ಹಿನ್ನೆಲೆಯಲ್ಲಿ 1 ಕೋಟಿ ರೂ. ಅನುದಾನ ದೊರೆತಿದೆ. ಕಳೆದ ವರ್ಷ 25 ಲಕ್ಷ ರೂ. ನೀಡಲಾಗಿತ್ತು. 1 ಲಕ್ಷಕ್ಕಿಂತ ಹೆಚ್ಚಿನ ಜನರು ಭಾಗವಹಿಸಿದ್ದರು. ಈ ಬಾರಿಯೂ ಹೆಚ್ಚಿನ ಜನರು ಭಾಗವಹಿಸುವ ನಿರೀಕ್ಷೆಯಿದೆ.
> –ಸತೀಶ್ ತಿಪಟೂರ್ ನಿರ್ದೇಶಕ, ರಂಗಾಯಣ

### 12ರಂದು ನಾಟಕೋತ್ಸವ ಉದ್ಘಾಟನೆ

ಜ. 12ರಂದು ಸಂಜೆ 5.30ಕ್ಕೆ ಬಹುರೂಪಿ ಬಾಬಾ ಸಾಹೇಬ ನಾಟಕೋತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ರಂಗೋತ್ಸವಕ್ಕೆ ಹೈಸ್ನಾಂ ಸಾವಿತ್ರಿ ದೇವಿ ಚಾಲನೆ ನೀಡುವರು.



### 24 ನಾಟಕಗಳು ಪ್ರದರ್ಶನ

ಮೈಸೂರು: ಮಹಾರಾಷ್ಟ್ರ, ಮಣಿಪುರ, ತಮಿಳು ನಾಡು, ಅಸ್ಸಾಂ, ಕೇರಳ ರಾಜ್ಯಗಳ ನಾಟಕಗಳು ಸೇರಿ ಒಟ್ಟು 24 ನಾಟಕಗಳು ಪ್ರದರ್ಶನಗೊಳ್ಳಲಿವೆ.

**ಭೂಮಿಗೀತ**

ಪ್ರತಿದಿನ ಸಂಜೆ 6.30ಕ್ಕೆ, 12ರಂದು ಅಂಬೇಡ್ಕರ್ ಕೊಲಾಜ್, 13ರಂದು ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ,14ರಂದು ಪಿ ಥದೊಯ್(ಮಣಿಪುರಿ), 15ರಂದು ಮೀಡಿಯಾ, 16ರಂದು ತೃತೀಯ ರತ್ನ (ಮರಾಠಿ), 17ರಂದು ಕಳೆದುಹೋದ ಹಾಡು, 18ರಂದು ಕವನ್ ಆನ್ ಅಂಬೇಡ್ಕರೈಟ್ ಒಪೆರಾ.

**ವನರಂಗ**

ಪ್ರತಿದಿನ ಸಂಜೆ 7ಕ್ಕೆ, 13ರಂದು ದದನ್‌ರಾಜಾ (ಅಸ್ಸಾಮಿ), 14ರಂದು ಸೇಮ್ ಸೇಮ್ ಬಟ್ ಡಿಫರೆಂಟ್(ಇಂಗ್ಲಿಷ್–ಹಿಂದಿ), ದಿ ಫೈಯರ್ (ತುಳು), 16ರಂದು ಆಳಿದ ಮಾಸ್ವಾಮಿಗಳು, 17ರಂದು ಕಿವುಡ ಮಾಡಿದ ಕಿತಾಪತಿ(ಕಂಪನಿ ನಾಟಕ), 18ರಂದು ರುಮು ರುಮು ರುಮು.

**ಕಿರುರಂಗಮಂದಿರ**

ಪ್ರತಿ ದಿನ ಸಂಜೆ 7ಕ್ಕೆ, 12ರಂದು ಬ್ಯಾಗ್ ಡಾನ್ಸಿಂಗ್(ಇಂಗ್ಲಿಷ್), ಕುಹೂ(ಮಲೆಯಾಳಂ), 14ರಂದು ಬೆಲ್ಲದ ದೋಣಿ, 15ರಂದು ಈದಿ, 16ರಂದು ಸಿಫಾರ್.

**ಕಲಾಮಂದಿರ**

ಪ್ರತಿದಿನ ಸಂಜೆ 7ಕ್ಕೆ, 12ರಂದು ಮಾಯಾದ್ವೀಪ. 13ರಂದು ರೂಪಾಂತರ, 14ರಂದು ಸೂರ್ಯ ಚಂದ್ರ, 15ರಂದು ತಾರಾಸ್ ಟ್ರಯೋ(ಇಂಗ್ಲಿಷ್–ಹಿಂದಿ), 16ರಂದು ಅಂಬೇಡ್ಕರ್ ಕ ಬಚ್ಚನ್(ಹಿಂದಿ), 17ರಂದು ಕಿಷ್ಕಿಂಧ(ತಮಿಳು).

ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ.ಮಹದೇವಪ್ಪ ಪುಸ್ತಕ, ಕರಕುಶಲ ಮೇಳ ಉದ್ಘಾಟಿಸುವರು. ಶಿವರಾಜ್ ಎಸ್.ತಂಗಡಗಿ ರಂಗಸಂಚಿಕೆ ಬಿಡುಗಡೆ ಮಾಡುವರು. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಾಬಾ ಸಾಹೇಬ್ ಛಾಯಾಚಿತ್ರ ಪ್ರದರ್ಶನ ಉದ್ಘಾಟಿಸುವರು. ಸಂಸದ ಸುನಿಲ್ ಬೋಸ್ ಚಿತ್ರಕಲಾ ಪ್ರದರ್ಶನ ಅನಾವರಣ ಮಾಡುವರು. ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸುವರು ಎಂದು ಮಾಹಿತಿ ನೀಡಿದರು. ಜ. 12ರಂದು ಬೆಳಗ್ಗೆ 10.30ಕ್ಕೆ ಮಕ್ಕಳ ಬಹುರೂಪಿಗೆ ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ ಚಾಲನೆ ನೀಡಲಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಸದಸ್ಯೆ ಡಾ.ಜಾಹೀದಾ, ರಂಗ ಸಮಾಜದ ಸದಸ್ಯರಾದ ಡಾ.ಕೆ.ರಾಮಕೃಷ್ಣಯ್ಯ, ಮಹಾಂತೇಶ್ ಗಜೇಂದ್ರಗಡ ಭಾಗವಹಿಸಲಿದ್ದಾರೆ ಎಂದರು.

### ಸಂಗೀತ ಸ್ಮೃತಿ

ಬಾಬಾ ಸಾಹೇಬ್ ಸಂಗೀತ ಸ್ಮೃತಿ ಅಂಬೇಡ್ಕರ್ ಗೀತೆಗಳ ವಿಶೇಷ ಕಾರ್ಯಕ್ರಮ ರೂಪಿಸಿದ್ದೇವೆ. ಜ. 12ರಂದು ವನರಂಗದಲ್ಲಿ ಎಚ್.ಜನಾರ್ಧನ್(ಜನ್ನಿ), ಗೊಲ್ಲಹಳ್ಳಿ ಶಿವಪ್ರಸಾದ್, ದವಾನಂದ ವರಪ್ರಸಾದ್ ಮತ್ತು ತಂಡದವರು. 17ರಂದು ಸಂಜೆ 6ಕ್ಕೆ ಕಿರುರಂಗಮಂದಿರದಲ್ಲಿ ಅನಿರುದ್ಧ ವಂಕರ್ ಮತ್ತು ತಂಡ, 18ರಂದು ಸಂಜೆಗೆ ಪಿಚ್ಚಳ್ಳಿ ಶ್ರೀನಿವಾಸ್ ಮತ್ತು ಸಂಗಡಿಗರು. ಸಂಜೆ 7 ಗಂಟೆಗೆ ಕಲಾಮಂದಿರದಲ್ಲಿ ಹೆಸರಾಂತ ಗಾಯಕಿ ಗಿನ್ನಿ ಮಾಹಿ ಮತ್ತು ತಂಡದವರ ಗಾಯನ ಏರ್ಪಡಿಸಲಾಗಿದೆ ಎಂದು ಹೇಳಿದರು.

### ಬಣ್ಣಗಳಲ್ಲಿ ಭೀಮಾಯಾನ

ರಂಗಾಯಣದ ಆವರಣದಲ್ಲಿ ಬಣ್ಣಗಳಲ್ಲಿ ಭೀಮಯಾನ ಶೀರ್ಷಿಕೆಯಡಿ ಕಲಾವಿದರಾದ ಸ್ಮದುಲ್, ಶ್ರೀದರ್ಶನ್, ಮಿನಲ್, ಪೃಥ್ವಿ ಡಿ, ರಂಗನಾಥ್ ಅವರು ಕೃತಿಗಳನ್ನು ರಚಿಸಲಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಡಾ.ಬಿ.ಆರ್.ಅಂಬೇಡ್ಕರ್ ತರಬೇತಿ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರದ ಗೌರವ ಸಲಹೆಗಾರ ಬಸವರಾಜ ದೇವನೂರು, ಹಿರಿಯ ಪ್ರಾಧ್ಯಾಪಕ ಡಾ. ಜೆ.ಸೋಮಶೇಖರ್, ಡಾ.ಎಸ್.ನರೇಂದ್ರ ಕುಮಾರ್, ಕನ್ನಡ ಮತ್ತುಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ರಂಗ ಸಮಾಜದ ಸದಸ್ಯ ಸುರೇಶ್ ಬಾಬು, ಚಲನಚಿತ್ರೋತ್ಸವ ಸಮಿತಿ ಸಂಚಾಲಕ ಕೆ. ಮನು, ಕಲಾವಿದರ ಶಶಿಕಲಾ ಬಿ.ಎನ್, ಕೆ.ಆರ್. ನಂದಿನಿ, ಗೀತಾ ಮೋಂಟಡ ಮುಂತಾದವರಿದ್ದರು.

> ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಮೈಸೂರು ರಂಗಾಯಣ ಮತ್ತು ಕಲಾಮಂದಿರ ನವೀಕರಣಕ್ಕೆ ಅನುದಾನ ದೊರೆತಿದೆ. ಶೀಘ್ರದಲ್ಲಿಯೇ ಕಾಮಗಾರಿಗಳು ಆರಂಭವಾಗಲಿವೆ.
> –ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಜಂಟಿ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

> ಬಹುರೂಪಿ ವಿಚಾರ ಸಂಕಿರಣದಲ್ಲಿ ಅಂಬೇಡ್ಕರರ ಕುರಿತಾದ 6 ಪುಸ್ತಕಗಳ ಹೊರ ತಂದಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಬಿಡುಗಡೆ ಮಾಡಲಿದ್ದಾರೆ.
> –ಬಸವರಾಜ್ ದೇವನೂರು

### 17,18ರಂದು ರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು: ಬಹುರೂಪಿ ಬಾಬಾ ಸಾಹೇಬ್ ಸಮತೆಯೆಡೆಗೆ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಜ.17 ಮತ್ತು 18ರಂದು ಕಿರುರಂಗಮಂದಿರದಲ್ಲಿ ಹಮ್ಮಿಕೊಳ್ಳ ಲಾಗಿದೆ ಎಂದುಡಾ.ಎಸ್.ನರೇಂದ್ರಕುಮಾರ್ ತಿಳಿಸಿದರು. 17ರಂದು ಬೆಳಗ್ಗೆ 10.30ಕ್ಕೆ ದಿ ವೈರ್ ಸಂಸ್ಥಾಪಕ ಸಂಪಾದಕ ಸಿದ್ಧಾರ್ಥ್ ವರ ದರಾ ಜನ್ ವಿಚಾರ ಸಂಕಿರಣ ಉದ್ಘಾಟಿಸುವರು. ಸಚಿವ ಮಹದೇವಪ್ಪ, ಮೈಸೂರು ವಿವಿ ಕುಲ ಪತಿ ಪ್ರೊ.ಎನ್.ಕೆ.ಲೋಕನಾಥ್, ಎಂಎಲ್‌ಸಿ ಡಾ. ಯತಿಂದ್ರ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಇಲಾಖೆ ಆಯುಕ್ತ ಡಾ.ಕೆ.ರಾಕೇಶ್ ಕುಮಾರ್ ಭಾಗವಹಿಸಲಿದ್ದಾರೆ. ಜ.18ರಂದು ಸಂ.5 ಗಂಟೆಗೆ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಸಮಾರೋಪ ನುಡಿಗಳನ್ನಾಡುವರು ಎಂದರು.

# ದಾಖಲೆ ಬರೆದ ಸಿಎಂ: ದಲಿತಮಹಾಸಭಾ ಸಂಭ್ರಮಾಚರಣೆ



ಮೈಸೂರು: ಸುಧೀರ್ಘ ಮುಖ್ಯಮಂತ್ರಿ ಆಗಿ ಆಡಳಿತ ಮುಂದುವರೆಸಿ ಸಿದ್ದರಾಮಯ್ಯ ಆಡಳಿತ ನೀಡುತ್ತಿರುವುದಕ್ಕೆ ಮೈಸೂರಿನಲ್ಲಿ ದಲಿತ ಮಹಸಭಾ ಸಂಭ್ರಮಾಚರಣೆ ಮಾಡಿದರು.


ನಗರದ ಚಿಕ್ಕಗಡಿಯಾರದಲ್ಲಿ ಭಿತ್ತಿಪ್ರದರ್ಶಿಸಿ ಸಿಹಿ ಹಂಚಿ ಸಂಭ್ರಮಿಸಿದ ಮಹಸಭಾ ಕಾರ್ಯಕರ್ತರು ವಿವಿಧ ಘೋಷಣೆ ಕೂಗಿ ಸಂಭ್ರಮಿಸಿದರು. ಈ ವೇಳೆ ಮಾತನಾಡಿದ ದಲಿತಾ ಮಹಾಸಭಾ ಅಧ್ಯಕ್ಷ ಎಸ್. ರಾಜೇಶ್ ಮಾತನಾಡಿ, ಸಾಮಾಜಿಕ ನ್ಯಾಯದ ತತ್ವದಡಿಯಲ್ಲಿ ಆಡಳಿತ ನೀಡುತ್ತಿರುವ ಸಿಎಂ ಸಿದ್ದರಾಮಯ್ಯ ಹೊಸ ದಾಖಲೆ ನಿರ್ಮಿಸಿದ್ದಾರೆ. ಕ್ಷೀರಭಾಗ್ಯ, ಗ್ಯಾರಂಟಿ ಯೋಜನೆಗಳಂತಹ ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಅದರಲ್ಲೂ ಹಿಂದುಳಿದ ಸಮುದಾಯಗಳನ್ನು ಸಾಮಾಜಿಕವಾಗಿ ಮುಂದೆ ತರುವಲ್ಲಿ ಸಿದ್ದರಾಮಯ್ಯ ಅವರ ಚಿಂತನಾತ್ಮಕ ಬಜೆಟ್ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ಅಂಶದಲ್ಲಿದೆ. ಇದೇ ಕಾರಣಕ್ಕಾಗಿ ಅವರು ಅಹಿಂದ ನಾಯಕರೆನಿಸಿಕೊಂಡಿದ್ದಾರೆಂದರು.

ಎಐಸಿಸಿ ಎಸ್ಸಿ ಘಟಕದ ಕೃಷ್ಣರಾಜ ಕ್ಷೇತ್ರದ ಉಸ್ತುವಾರಿ ರಾಜಶೇಖರ್ ಮರಿದೇವಯ್ಯ, ಲೋಕೇಶ್ ಮಾದಾಪುರ, ರವಿಕಾಳೇಗೌಡ, ಮೋಹನ್ ಕುಮಾರ್, ಸಿದ್ದರಾಜು, ಸುನೀಲ್ ನಾರಾಯಣ, ಮೈಸೂರು ಬಸವಣ್ಣ, ಶಿಂಷಾ ದಿನೇಶ್, ಎಸ್.ಎ.ರಹೀಂ ಇನ್ನಿತರರು ಉಪಸ್ಥಿತರಿದ್ದರು.

## ನೂತನ ದಿನದರ್ಶಿಕೆ ಬಿಡುಗಡೆ

ಮೈಸೂರು: ನಗರದ ಎನ್.ಆರ್.ಮೊಹಲ್ಲಾದಲ್ಲಿನ ಉಪ್ಪಾರ ಸಂಘವು ಹೊರತಂದಿರುವ 2026ನೇ ಸಾಲಿನ ನೂತನ ದಿನದರ್ಶಿಕೆಯನ್ನು ನರಸಿಂಹರಾಜ ಕ್ಷೇತ್ರದ ಶಾಸಕರಾದ ತನ್ವೀರ್ ಸೇಠ್ ಅವರು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಉದಯ್ ಕುಮಾರ್, ಕಾಂಗ್ರೆಸ್ ಮುಖಂಡ ಎಂ.ಎನ್.ಮಹದೇವ್, ಸಂಘದ ಗೌರವಾಧ್ಯಕ್ಷ ನಾಗರಾಜು, ಅಧ್ಯಕ್ಷ ಸಿ.ಗೋವಿಂದರಾಜು, ಉಪಾಧ್ಯಕ್ಷ ಕಾರಾಪುರ ಮಹೇಶ್, ಕಾರ್ಯದರ್ಶಿಯಾದ ಸಿದ್ದರಾಜು, ಸಹಕಾರ್ಯದರ್ಶಿ ಮಾಸ್ಟರ್ ಶಿವು, ಖಜಾಂಚಿ ಸಿದ್ದರಾಜುಗೊಂಬೆ, ನಿರ್ದೇಶಕ ಪಾಪಣ್ಣ, ಯಜಮಾನರುಗಳಾದ ಎಂ.ಮಹದೇವ್, ನಾಗಣ್ಣ, ಕೆಸ್ತೂರು ಮಹದೇವ್ ಸೇರಿದಂತೆ ಹಲವರು ಇದ್ದರು.



ಮೊದಲ ಪುಟದಿಂದ

## ಬಟ್ಟೆಬಿಚ್ಚಿ ಮಹಿಳೆ ‘ಹೈಡ್ರಾಮ ಸೃಷ್ಟಿ’

ಸೇರಿ ಒಟ್ಟು 9 ಪ್ರಕರಣಗಳು ದಾಖಲಾಗಿವೆ ಎಂದು ವಿವರಿಸಿದರು.

ಮತಪಟ್ಟಿಯಲ್ಲಿ ಮತದಾರರ ಹೆಸರು ಡಿಲಿಟ್ ಮಾಡಿಸಿರುವುದು, ಮಹಿಳೆಯೊಬ್ಬರ ಕತ್ತು ಹಿಸುಕಲು ಹೋಗಿದ್ದು, ಖಾಸಗಿ ಅಂಗಕ್ಕೆ ಹೊಡೆದಿದ್ದು, ಮತ್ತಿತರ ದೂರುಗಳ ಸಾಕ್ಷ್ಯ ಸಿಕ್ಕದ ಮೇಲೆ ಅರೆಸ್ಟ್ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಮಹಿಳೆಯನ್ನ ವ್ಯಾನ್ ಒಳಗೆ ಹತ್ತಿಸುತ್ತಿದ್ದಂತೆ ಆಕೆಯೇ ಖುದ್ದಾಗಿ ಬಟ್ಟೆಯನ್ನ ಬಿಚ್ಚಿದ್ದಾಳೆ. ಅಲ್ಲದೇ ನಮ್ಮ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾಳೆ. ಕಲಾವತಿ ಚಂದಾವರ್ಕರ್, ಶಕುಂತಲಾ, ರೇಖಾ ಮತ್ತು ಮಾರ್ಗರೇಟ್ ಅನ್ನುವವರಿಗೆ ಕಚ್ಚಿ ಘಾಸಿಗೊಳಿಸಿದ್ದಾಳೆ. ಓರ್ವ ಸಿಬ್ಬಂದಿಗೆ ಹೊಟ್ಟೆ ಭಾಗಕ್ಕೆ ರಕ್ತ ಬರುವಂತೆ ಕಚ್ಚಿದ್ದಾಳೆ. ಅಲ್ಲದೆ, ಆಕೆಯ ಜೊತೆಗಿದ್ದ ಸಹೋದರ ಇದನ್ನು ವಿಡಿಯೋ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದಾನೆ. ವಿಡಿಯೋ ಮಾಡಿ ವೈರಲ್ ಮಾಡಿದವರ ವಿರುದ್ಧವೂ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು.

ಈ ಹಿಂದಿನ ಪ್ರಕರಣಗಳಲ್ಲಿ ಮಹಿಳೆಯ ನಡವಳಿಕೆಗಳ ಬಗ್ಗೆ ಮಾಹಿತಿದ್ದ ಕೇಶ್ವಾಪುರ ಪೊಲೀಸರು ಮಹಿಳೆಯನ್ನ ಬಂಧಿಸಲು ಹೆಚ್ಚುವರಿ ಮಹಿಳಾ ಸಿಬ್ಬಂದಿ ಕರೆಸಿಕೊಂಡಿದ್ದಾರೆ. ಪೊಲೀಸರು ವಶಕ್ಕೆ ಪಡೆದು ಬಂಧಿಸುವಾಗ ಆಕೆ ಬೆತ್ತಲೆ ಆಗಿರಲಿಲ್ಲ. ವ್ಯಾನ್ ಹತ್ತಿದ ಬಳಿಕ ಬಟ್ಟೆ ಆಕೆಯೇ ಬಿಚ್ಚಿದ್ದಾಳೆ. ಮಹಿಳೆ ಹಾಗೂ ಪುರುಷ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದಾಳೆ ಎಂದು ಹೇಳಿದರು.

ಒಂದು ವೇಳೆ ಪೊಲೀಸರು ಮಾಡಿದ್ದರೆ, ಅರೆಸ್ಟ್ ಆದ ಮೇಲೆ ಮೆಡಿಕಲ್ ಮಾಡಿಸ್ತೀವಿ. ಆಗಲಾದರೂ ವೈದ್ಯರ ಬಳಿ ಹೇಳೋಕೆ ಅವಕಾಶ ಇತ್ತು. ನಂತರ ಮ್ಯಾಜಿಸ್ಟ್ರೇಟ್ ಬಳಿಯೂ ಹೇಳಿಲ್ಲ. ಆಕೆ ಬಟ್ಟೆ ಬಿಚ್ಚಿದ್ದಾಗ ಪೊಲೀಸರೇ ಸ್ಥಳೀಯರ ಸಹಾಯದಿಂದ ಬೇರೆ ಬಟ್ಟೆ ಹಾಕಿಸಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

# ರೋಟರಿ ಕಣ್ಣಿನ ಆಸ್ಪತ್ರೆಗೆ ಜಾಗ ಕೊಡಿಸುವೆ: ಶಿಲ್ಪಾನಾಗ್



ಚಾಮರಾಜನಗರ, ಸೇವಾ ಕಾರ್ಯ ಮಾಡುತ್ತಿರುವ ರೋಟರಿ ಸಂಸ್ಥೆಯ ಕಣ್ಣಿನ ಆಸ್ಪತ್ರೆಗೆ ಜಿಲ್ಲಾಡಳಿತ ವತಿಯಿಂದ ಜಾಗ ಕೊಡಿಸುವುದಾಗಿ ವರ್ಗಾವಣೆಗೊಂಡ ಜಿಲ್ಲಾಧಿಕಾರಿ ಶಿಲ್ಪಾನಾಗ್ ಹೇಳಿದರು.

ನಗರದ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ರೋಟರಿ ಸಿಲ್ಕ್ ಸಿಟಿ ಹಾಗೂ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ರೋಟರಿ ಸಂಸ್ಥೆಯು ಚಾಮರಾಜನಗರದಲ್ಲಿ ಕಣ್ಣಿನ ಆಸ್ಪತ್ರೆಗೆ ಜಿಲ್ಲಾಡಳಿತ ವತಿಯಿಂದ ಜಾಗ ಕೊಡಿಸುವಂತೆ ಮನವಿ ಮಾಡಿದ್ದಾರೆ. ನಾನು ಬೇರೆಕಡೆ ವರ್ಗಾವಣೆಯಾಗಿದ್ದರು ಕೂಡ ಜಿಲ್ಲಾಡಳಿತದೊಂದಿಗೆ ಸಂಪರ್ಕದಲ್ಲಿದ್ದು, ರೋಟರಿ ಕಣ್ಣಿನ ಆಸ್ಪತ್ರೆಗೆ ಜಾಗ , ಸಿಎಸ್ ಆರ್ ಅನುದಾನ ಮುಂದುವರಿಸುವುದಾಗಿ ಭರವಸೆ ನೀಡಿದರು.


ಯಾರೇ ಆಗಲಿ ಒಂದು ತಂಡವಾಗಿ ಕೆಲಸ ಮಾಡಿದರೆ ಅಭಿವೃದ್ಧಿ ಸಾಧ್ಯವಾಗುತ್ತದೆ. ನಮ್ಮೊಂದಿಗೆ ಎಲ್ಲ ಅಧಿಕಾರಿಗಳು ಒಗ್ಗಟ್ಟಾಗಿ ಕೆಲಸ ಮಾಡಿದ ಕಾರಣದಿಂದ ಜಿಲ್ಲೆಯಲ್ಲಿ. ಅಭಿವೃದ್ಧಿಗಳು ಕಾರ್ಯ ಕ್ರಮಗಳು ಯಶಸ್ವಿಯಾಯಿತು. ಜಿಲ್ಲೆಯಲ್ಲಿ ಉತ್ತಮ ಸೇವೆ ಸಲ್ಲಿಸಿದ ಆತ್ಮತೃಪ್ತಿ ನನಗಿದೆ. ಚಾಮರಾಜನಗರ ಜಿಲ್ಲೆಯು ನನ್ನ ಅಚ್ಚುಮೆಚ್ಚಿನ ಜಿಲ್ಲೆಯಾಗಿದ್ದು, ಇದನ್ನು ಮುಂದುವರೆದ ಜಿಲ್ಲೆಯಾಗಿ ನೋಡಬೇಕು ಆಗಾಗಿ ನಾನು ರಾಜ್ಯಮಟ್ಟದಲ್ಲಿದ್ದರು ಜಿಲ್ಲೆಗೆ ವಿಶೇಷ ಒತ್ತು ನೀಡುವುದಾಗಿ ತಿಳಿಸಿದರು.

ರೋಟರಿ ಸಂಸ್ಥೆಯ ಜಿಲ್ಲಾ ಸಹಾಯಕ ಗೌರರ್ ದೊಡ್ಡರಾಯಪೇಟೆ ಗಿರೀಶ್ ಮಾತನಾಡಿ, ಜಿಲ್ಲೆಯ ಅಭಿವೃದ್ಧಿ ಪಡಿಸಿದ ಸಾಲಿನಲ್ಲಿ ಹಿಂದಿನ ಜಿಲ್ಲಾಧಿಕಾರಿ ಹರ್ಷಗುಪ್ತ ನಂತರ ಶಿಲ್ಪಾನಾಗ್ ಅವರು ಹೆಚ್ಚಿನ ಒತ್ತು ನೀಡಿ ಹೆಸರುವಾಸಿಯಾಗಿದ್ದರು. ಸರ್ಕಾರಿ ಸೇವೆಯಲ್ಲಿ. ನಿವೃತ್ತಿ, ವರ್ಗಾವಣೆ , ಶಿಲ್ಪಾನಾಗ್ ಅವರು ಜಿಲ್ಲೆಯ ಅಭಿವೃದ್ಧಿಗಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಮುಂದಿನ ದಿನಗಳಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಬರುವಂತ ಅವಕಾಶ ದೊರೆಯಲಿ ಎಂದು ಆಶಿಸಿದರು.

ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರ ಮಾತನಾಡಿ, ಚಾಮರಾಜನಗರ ಜಿಲ್ಲೆಯಲ್ಲಿ 25 ವರ್ಷದಿಂದ ಅನೇಕ ಜಿಲ್ಲಾಧಿಕಾರಿಗಳು ಬಂದು ಸೇವೆ ಸಲ್ಲಿಸಿ ಹೋಗಿದ್ದಾರೆ. ಅದರಲ್ಲಿ ಕೆಲವು. ಅಧಿಕಾರಿಗಳು ನೆನಪಿನಲ್ಲಿ ಉಳಿಸುವ ಸೇವೆ ಸಲ್ಲಿಸಿ ಹೋಗುತ್ತಾರೆ ಅ ಸಾಲಿನಲ್ಲಿ... ಹರ್ಷಗುಪ್ತ, ಅವರು ಬರುತ್ತಾರೆ. ಅವರು ಜನಮಾನಸದಲ್ಲಿ ಉಳಿಯುವ ಕೆಲಸ. ಮಾಡಿದ್ದಾರೆ ಎಂದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಪ್ರಭಾಕರ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬದನಗುಪ್ಪೆ, ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶ ಮಾಡಿದರು. ಅಲ್ಲಿಗೆ.. ಯಾರು ಕೈಗಾರಿಕೋದ್ಯಮಿಗಳು ಬರುತ್ತಿರಲಿಲ್ಲ. ಶಿಲ್ಪಾನಾಗ್ ಅವರು ಜಿಲ್ಲಾಧಿಕಾರಿಯಾಗಿ ಜಿಲ್ಲೆಗೆ ಬಂದ ಮೇಲೆ ಸರ್ಕಾರದೊಂದಿಗೆ ಮಾತುಕತೆ ನಡೆಸಿ ಜಿಲ್ಲೆಗೆ ಕೈಗಾರಿಕೋದ್ಯಮಿಗಳು ಬರುವಂತೆ ಮಾಡಿ ಕೈಗಾರಿಕಾ ಬೆಳವಣಿಗೆ ಅವಕಾಶ ಮಾಡಿಕೊಟ್ಟರು ಎಂದರು. ಕಾರ್ಯಕ್ರಮದಲ್ಲಿ ರೋಟರಿ ಕಾರ್ಯದರ್ಶಿ ಸಿದ್ದರಾಜು, ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷ ಶಮಿತ್‌ಕುಮಾರ್, ಕಾರ್ಯದರ್ಶಿ ಸಂತೋಷ್, ಅಮೃತಾ ಪ್ರಭಾಕರ್ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

## ಕೃಷ್ಣ ವಂದನ



ಸ್ನೇಹಾ ಆನಂದ್



### ಹೇ ಕೃಷ್ಣಾ!

ಕೂಸನು ಕಂಡಿರಾ,
ಬಾಲಕೃಷ್ಣನ ಕಂಡಿರಾ,
ಗೊಲ್ಲನ ಕಂಡೀರಾ,
ಯದುಕುಲ ತಿಲಕನ ಕಂಡಿರಾ!

ದೇವಕಿ ಉದರದಿ ಜನಿಸಿತು ಕೂಸು,
ಯಮುನಾ ಶರದಿಯ ದಾಟಿತು ಕೂಸು!
ಗೋಕುಲದೆಡೆಗೆ ನಡೆಯಿತು ಕೂಸು,
ಯಶೋದೆಯ ಮಡಿಲಲಿ ಬೆಳೆದ ಕೂಸು!

ವಿಷದ ಹಾಲನು ಉಂಡಿತು ಕೂಸು,
ಹಿಡಿಯ ಮಣ್ಣನು ಮುಕ್ಕಿತು ಕೂಸು!
ಜಗವನೇ ಬಾಯೊಳು ತೋರಿತು ಕೂಸು,
ಬೆಣ್ಣೆ ಚೋರನೆಂಬ ಹೆಸರಿನ ಕೂಸು!

ಕಂಸ ಮಾವನ ಕೊಂದಿತು ಕೂಸು,
ಸರ್ಪದ ಹೆಡೆಯನು ಮೆಟ್ಟಿತು ಕೂಸು!
ಬಲಿಯ ಶಿರವನ್ನು ಒತ್ತಿದ ಕೂಸು,
ಹೇಮ ಗಿರೀಶನೆಂಬ ಪ್ರೇಮದ ಕೂಸು!

# ಸಂಚಾರಿ ನಿಯಮಗಳನ್ನು ಪಾಲಿಸಿ

## ನ್ಯಾಯಾಧೀಶ ಈಶ್ವರ ಸಲಹೆ | ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ



ಚಾಮರಾಜನಗರ, ಪ್ರತಿಯೊಂದು ಜೀವವೂ ಅಮೂಲ್ಯವಾಗಿದ್ದು, ಜೀವಗಳ ರಕ್ಷಣೆ ಹಾಗೂ ರಸ್ತೆ ಸುರಕ್ಷತೆಗಾಗಿ ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ ಅವರು ಸಲಹೆ ಮಾಡಿದರು.

ನಗರದ ಪ್ರಾದೇಶಿಕ ಸಾರಿಗೆ ಕಚೇರಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪೊಲೀಸ್, ಪ್ರಾದೇಶಿಕ ಸಾರಿಗೆ ಇಲಾಖೆ ಹಾಗೂ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ '37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಜನವರಿ–2026'ರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಸ್ತೆ ಸುರಕ್ಷತೆ ಎಂದರೆ ರಸ್ತೆಯಲ್ಲಿ ಸಂಚರಿಸುವ ಪ್ರತಿಯೊಬ್ಬರು ಸುರಕ್ಷತೆ ಕಾಪಾಡಿಕೊಳ್ಳುವುದೇ ಆಗಿದೆ. ವಾಹನಗಳು ಹೆಚ್ಚಾದಷ್ಟು ಅಪಘಾತಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ರಸ್ತೆ ಸುರಕ್ಷತಾ ಸಂಚಾರ ನಿಯಮಗಳನ್ನು ಪಾಲಿಸದಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಕೆಲವರಿಗೆ ಸಂಚಾರಿ ನಿಯಮಗಳ ಅರಿವು ಇದ್ದರೂ ಪಾಲನೆಯಲ್ಲಿ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಅಪಘಾತಗಳು ಅಕಸ್ಮಿಕವೇ ಹೊರತು ಉದ್ದೇಶಪೂರ್ವಕವಲ್ಲ. ಅಪಘಾತದಿಂದ ವ್ಯಕ್ತಿಯ ಕುಟುಂಬ ಬೀದಿಗೆ ಬರಲಿದೆ. ಈ ನಿಟ್ಟಿನಲ್ಲಿ ವಾಹನ ಚಾಲನೆ ಮಾಡುವ ಪ್ರತಿಯೊಬ್ಬರಿಗೂ ತಾಳ್ಮೆ ಹಾಗೂ ಎಚ್ಚರಿಕೆಯಿಂದ ಇರಬೇಕಾಗಿದೆ ಎಂದರು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದನ್ವಯ ಸಾರ್ವಜನಿಕರಿಗೆ ರಸ್ತೆ ಸುರಕ್ಷತೆಯ ಜಾಗೃತಿ ಮೂಡಿಸಲು ಪ್ರತಿವರ್ಷ ಜನವರಿ ಮಾಹೆ ಅಂತ್ಯದವರೆಗೂ ವಿವಿಧ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ವಾಹನ ಚಾಲಿಸುವ ಪ್ರತಿಯೊಬ್ಬರು ಚಾಲನಾ ಪರವಾನಗಿ, ವಿಮಾ ಪಾಲಿಸಿ, ವಾಹನ ನೊಂದಣಿ ಪತ್ರ, ವಾಯುಮಾಲಿನ್ಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು. ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಹಾಗೂ ಕಾರು ಚಾಲಕರು ಸೀಟ್ ಬೆಲ್ಟ್ ಧರಿಸಿರಬೇಕು ಎಂದು ಹೇಳಿದರು.

ನಿಗದಿತ ಮಿತಿಯಲ್ಲಿ ವಾಹನ ಚಾಲಿಸಬೇಕು. ಹೆದ್ದಾರಿಗಳಲ್ಲಿ ಇಂಡಿಕೇಟರ್ ಹಾಕಬೇಕು. ಕುಡಿದ ಅಮಲಿನಲ್ಲಿ ವಾಹನ ಚಲಾಯಿಸಬಾರದು. ಸಿಗ್ನಲ್ ಜಂಪ್ ಹಾಗೂ ತ್ರಿಬಲ್ ರೈಡಿಂಗ್ ಮಾಡಬಾರದು. ನೋ ಪಾರ್ಕಿಂಗ್ ಸ್ಥಳದಲ್ಲಿ ವಾಹನಗಳನ್ನು ನಿಲ್ಲಿಸಬಾರದು. ರಸ್ತೆ ಅಪಘಾತಗಳನ್ನು ತಡೆಯಲು ಪ್ರಜ್ಞಾವಂತ ನಾಗರಿಕರು ಪೊಲೀಸರೊಂದಿಗೆ ಸಹಕರಿಸಬೇಕು ಎಂದು ನ್ಯಾಯಾಧೀಶರಾದ ಈಶ್ವರ ಅವರು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಾದೇಶಿಕ ಸಾರಿಗೆ ಅಧಿಕಾರಿ ಗಾಯತ್ರಿ ಅವರು ಹೆಚ್ಚಾಗುತ್ತಿರುವ ರಸ್ತೆ ಅಪಘಾತಗಳ ಪರಿಣಾಮಕಾರಿ ತಡೆಗೆ ಸಾರಿಗೆ ಇಲಾಖೆ ವತಿಯಿದ ಪ್ರತಿವರ್ಷ ಜನವರಿ ತಿಂಗಳಿನಲ್ಲಿ ಸಂತೆ, ಜಾತ್ರೆ, ರೈಲು ಹಾಗೂ ಬಸ್ ನಿಲ್ದಾಣದಂತಹ ಹೆಚ್ಚು ಜನಸಂದಣಿ ಇರುವ ಸ್ಥಳದಲ್ಲಿ ರಸ್ತೆ ಸುರಕ್ಷತೆ ಹಾಗೂ ಸಂಚಾರಿ ನಿಯಮಗಳ ಅರಿವು ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. 2024ರಲ್ಲಿ 769 ಅಪಘಾತ ಪ್ರಕರಣಗಳಲ್ಲಿ 256 ಜನ ಮೃತರಾಗಿದ್ದು, 1130 ಮಂದಿ ಗಾಯಗೊಂಡಿದ್ದಾರೆ. 2025ರಲ್ಲಿ 821 ಪ್ರಕರಣಗಳಲ್ಲಿ 242 ಜನ ಮೃತರಾಗಿದ್ದು, 1274 ಮಂದಿ ಗಾಯಗೊಂಡಿದ್ದಾರೆ. ಒಟ್ಟಿನಲ್ಲಿ ಚಾಮರಾಜನಗರವನ್ನು ಅಪಘಾತ ಮುಕ್ತ ಜಿಲ್ಲೆಯನ್ನಾಗಿಸಲು ಸಾರ್ವಜನಿಕರು ಸೇರಿದಂತೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದರು.

ಶಾಲಾ ಶಿಕ್ಷಣ ಇಲಾಖೆಯ ವಿಷಯ ಪರಿವೀಕ್ಷಕರಾದ ಗಿರೀಶ್ ಅವರು ಹಿಂದೆ ಪ್ರತಿ ಮನೆಗಳಲ್ಲಿ ಸೈಕಲ್‌ಗಳಿತ್ತು. ಬದಲಾದ ಇಂದಿನ ದಿನಗಳಲ್ಲಿ 2–3 ಸ್ಕೂಟರ್ ಹಾಗೂ ಕಾರುಗಳನ್ನು ಹೊಂದುವುದು ಜನರಿಗೆ ಸಾಮಾಜಿಕ ಪ್ರತಿಷ್ಠೆಯಾಗಿದೆ. ವಾಹನಗಳು ಹೆಚ್ಚಾದಂತೆ ಅಪಘಾತಗಳು ಹೆಚ್ಚಾಗುವುದು ಸರ್ವೇ ಸಾಮಾನ್ಯವಾಗಿದೆ. ಅವಸರವೇ ಅಪಘಾತಕ್ಕೆ ಕಾರಣವಾಗಿದೆ. 18 ವರ್ಷದೊಳಗಿನ ಮಕ್ಕಳಿಗೆ ವಾಹನ ಚಲಾಯಿಸುವಂತೆ ಪೋಷಕರೇ ಪ್ರೇರೇಪಿಸುವಂತಹ ವಾತಾವರಣ ಸೃಷ್ಠಿಯಾಗಿದೆ. ಇದು ಸಲ್ಲದು. ರಸ್ತೆ ಸುರಕ್ಷತೆಗೆ ಅನೇಕ ಸಂಚಾರಿ ನಿಯಮಗಳಿದ್ದರೂ ಅವುಗಳ ಪಾಲನೆಯಾಗುತ್ತಿಲ್ಲ. ಇದು ದುರಂತವೇ ಸರಿ. ಪ್ರಾಥಮಿಕ ಹಂತದಿಂದಲೇ ಮಕ್ಕಳಿಗೆ ರಸ್ತೆ ಸುರಕ್ಷತಾ ನಿಯಮಗಳ ಬಗ್ಗೆ ತಿಳಿಹೇಳಬೇಕು ಎಂದು ಹೇಳಿದರು. ಇದೇ ವೇಳೆ ರಸ್ತೆ ಸುರಕ್ಷತೆಯ ಸಂಚಾರಿ ನಿಯಮಗಳ ಜಾಗೃತಿ ಕುರಿತ ಪೋಸ್ಟರ್ ಹಾಗೂ ಭಿತ್ತಿಪತ್ರಗಳನ್ನು ಗಣ್ಯರು ಬಿಡುಗಡೆಗೊಳಿಸಿದರು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಪುಟ್ಟಗೌರಮ್ಮ, ಹಿರಿಯ ಮೋಟಾರು ವಾಹನ ನಿರೀಕ್ಷಕರಾದ ಯೋಗೇಶ್, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತತರಾದ ಶಾಂತಮ್ಮ, ಪಟ್ಟಣದ ಸಂಚಾರಿ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಹನುಮಂತ ಉಪ್ಪಾರ್, ಆರೋಗ್ಯ ಇಲಾಖೆಯ ಸಂತೋಷ್, ಮೋಟಾರು ವಾಹನ ನಿರೀಕ್ಷಕಿ ರಶ್ಮಿ, ಪ್ರಾದೇಶಿಕ ಸಾರಿಗೆ ಇಲಾಖೆಯ ಅಧೀಕ್ಷಕರಾದ ಕಮರಶೆಟ್ಟಿ, ದೀಪಾ, ರೋಟರಿ ಸಿಲ್ಕ್‌ಸಿಟಿ ಮಾಜಿ ಅಧ್ಯಕ್ಷರಾದ ಮಾಣಿಕ್‌ಚಂದ್ ಶಿರ್ವಿ, ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ ಮಹದೇವಸ್ವಾಮಿ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## 2 ಸಾವಿರ ಮಂದಿಗೆ ನಾಟಿ ಕೋಳಿ ಬಿರಿಯಾನಿ ವಿತರಣೆ



ಗುಂಡ್ಲುಪೇಟೆ: ಸಿದ್ದರಾಮಯ್ಯ ದೀರ್ಘಾವಧಿ ಸಿ.ಎಂ.ಆದ ಹಿನ್ನೆಲೆ ಕುರುಬ ಸಮುದಾಯ ಹಾಗೂ ಅಹಿಂದ ವರ್ಗದ ವತಿಯಿಂದ ಪಟ್ಟಣದಲ್ಲಿ ಎರಡು ಸಾವಿರ ಮಂದಿಗೆ ನಾಟಿಕೋಳಿ ಬಿರಿಯಾನಿ ವಿತರಣೆ ಮಾಡಲಾಯಿತು.

ಪಟ್ಟಣದಲ್ಲಿ ನಿರ್ಮಾಣದ ಹಂತದಲ್ಲಿರುವ ಕನಕ ಭವನದ ಮುಂಭಾಗ ಪೆಂಡಾಲ್ ಹಾಕಿ ನಾಟಿಕೋಳಿ ಬಿರಿಯಾನಿ ವಿತರಿಸಿ ಸಿದ್ದರಾಮಯ್ಯ ಪರ ಜಯ ಘೋಷಣೆ ಕೂಗಿ ಸಂಭ್ರಮಾಚರಣೆ ಮಾಡಿದ ವೇಳೆ ಮಾತನಾಡಿದ ತಾಲೂಕು ಕುರುಬ ಸಂಘದ ಅಧ್ಯಕ್ಷ ಜಿ.ಎಲ್ ರಾಜು ಮುಖ್ಯಮಂತ್ರಿ ಸಿದ್ದರಾಮಯ್ಯ ಅಹಿಂದ ನಾಯಕರಾಗಿ ಡಿ.ದೇವರಾಜ ಅರಸು ದಾಖಲೆ ಮುರಿದಿದ್ದಾರೆ.ಅನ್ನ ಭಾಗ್ಯಕೊಟ್ಟು ರಾಜ್ಯದ ಜನರ ಹಸಿವನ್ನು ನೀಗಿಸಿದ್ದಾರೆ. ಸಿದ್ದರಾಮಯ್ಯ ಅವರು ಪೂರ್ಣಾವಧಿ ಸಿ.ಎಂ ಆಗಿ ಮುಂದುವರೆಯಬೇಕು 2028ರ ಚುನಾವಣೆಯು ಅವರ ನೇತೃತ್ವದಲ್ಲಿಯೇ ನಡೆಯಬೇಕು ಎಂದು ಹೇಳಿದರು. ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್ ನಂಜಪ್ಪ ಮಾತನಾಡಿ, ಬಡವರ ಆಶಾಕಿರಣ ಸಿ.ಎಂ.ಸಿದ್ದರಾಮಯ್ಯ ಅಹಿಂದ ನಾಯಕರಾಗಿ ಜನಮನ್ನಣೆ ಗಳಿಸಿದ್ದಾರೆ. ಐದು ವರ್ಷ ಸಿ.ಎಂ.ಆಗಿ ಪೂರೈಸಬೇಕು ಎಂಬುದು ಜನರ ಅಭಿಲಾಷೆಯಾಗಿದೆ.ಹೈಕಮಾಂಡ್ ಐದು ವರ್ಷ ಅಧಿಕಾರ ನಡೆಸಲು ಅನುವು ಮಾಡಿಕೊಡಬೇಕು ಎಂದು ಒತ್ತಾಯಿಸಿದರು.ಈ ಸಂಧರ್ಭದಲ್ಲಿ ಕುರುಬ ಸಮುದಾಯದ ತಾಲೂಕು ಉಪಾಧ್ಯಕ್ಷ ಸ್ವಾಮಿ, ಹೊಸೂರು ಶಿವಣ್ಣ, ತಾಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಹೆಚ್.ಎನ್ ಬಸವರಾಜು, ಅಣ್ಣಯ್ಯ, ಹೊಸೂರು ನಾಗರಾಜು, ಬಸವರಾಜು ರಘು, ಜಿ.ಕೆ.ಎನ್ ವಿಶ್ವ,ಸಂದೀಪ್ ಕುಮಾರ್, ಶಶಿಕುಮಾರ್, ಪ್ರಮೋದ್ ಕವ್ವ, ಸಾಗರ್,ಮನು,ಮಹದೇವು,ಅರುಣ್ ಗೌಡ, ವಿಶ್ವಾಸ್,ಮಡಹಳ್ಳಿ ಮಣಿ, ಸಾಹುಲ್ ಹಮೀದ್,ಕಲ್ಲಿಗೌಡನಹಳ್ಳಿ ಬಸವರಾಜು,ಪುನೀತ್ ಸೇರಿದಂತೆ ಇತರರು ಇದ್ದರು.

## ಬೆಳವಾಡಿ ಸರ್ಕಾರಿ ಶಾಲೆಯ ನೂತನ ಗ್ರಂಥಾಲಯ ಲೋಕಾರ್ಪಣೆ




ಮೈಸೂರು: ಯುನಿಲಾಗ್ ಮತ್ತು ಕಲಿಸು ಫೌಂಡೇಶನ್ ನ ಸಾಮಾಜಿಕ ಸಹಭಾಗಿತ್ವ ಕಾರ್ಯಕ್ರಮದಡಿಯಲ್ಲಿ ಬೆಳವಾಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಗ್ರಂಥಾಲಯವನ್ನು ಉದ್ಘಾಟಿಸಲಾಯಿತು.

ಇದೆ ಸಂಧರ್ಭದಲ್ಲಿ ಮಾತನಾಡಿದ ಕಲಿಸು ಫೌಂಡೇಶನ್ ನ ಸಿಇಓ ನಿಕಿಲೇಶ್, ಸರ್ಕಾರಿ ಶಾಲೆಗಳ ಉನ್ನತಿಗೆ ನಮ್ಮ ಸಂಸ್ಥೆ ಹಲವಾರು ವರ್ಷಗಳಿಂದ ಶ್ರಮಿಸುತ್ತಿದೆ. ನಮ ಮುಖ್ಯ ಉದ್ದೇಶ ಬಡ ಮಕ್ಕಳು ಮತ್ತು ಸರ್ಕಾರಿ ಶಾಲೆ , ನವ ಭಾರತ ನಿರ್ಮಾಣಕ್ಕಾಗಿ ಗ್ರಾಮೀಣ ಭಾಗದ ಸರ್ಕಾರಿ ಶಾಲೆಯ ಮಕ್ಕಳಿಗೆ ಉತ್ತಮ ವ್ಯಾಸಂಗ ಅವಶ್ಯಕವಾಗಿದೆ. ಆದ್ದರಿಂದ ನಾವು ಹೆಚ್ಚು ಸರ್ಕಾರಿ ಶಾಲೆಗಳಯನ್ನೆ ಮುಖ್ಯ ಗುರಿಯಾಗಿ ಇಟ್ಟುಕೊಂಡಿದ್ದೇವೆ ನಮ್ಮ ಸಾಕಷ್ಟು ಸಂಸ್ಥೆಗಳು ಬೆನ್ನೆಲುಬಾಗಿ ನಿಂತಿವೆ ಅವರಿಗೆಲ್ಲ ನಾವು ಧನ್ಯವಾದ ಅರ್ಪಿಸುತ್ತೇವೆ ಎಂದರು. ಮುಖ್ಯ ಅತಿಥಿಗಳಾಗಿ ಯುನಿಲಾಗ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುಚಿತ್ ಬಾಚಳ್ಳಿ, ಯುನಿಲಾಗ್ ಸಿಇಓ ಮತ್ತು ವ್ಯವಸ್ಥಾಪಕ ನಿರ್ದೇಶಕ ಕ್ರಿಶ್ ಸುಬ್ರಮಣಿಯನ್, ಆಡಮ್ ಕುಸುಮಾನೋ, ಸೌಮ್ಯ ಪ್ರಕಾಶ್, ಏಸ್ ರೋಸೆನ್‌ಸ್ಟೈನ್, ನೋಹ್ ಕೇಸ್, ರಾಮಚಂದ್ರ ರಾಜೇ ಅರಸ್, ನಿಖಿಲೇಶ್ ಎಂಎಂ, ಶಾಲೆಯ ಮುಖ್ಯೋಪಾಧ್ಯಾಯಿನಿ ಇಂದಿರಮ್ಮ ಸೇರಿ ಹಲವರು ಉಪಸ್ಥಿತರಿದ್ದರು.

## ನೂತನ ಡಿಸಿ ಶ್ರೀರೂಪಗೆ ಸನ್ಮಾನ

ಚಾಮರಾಜನಗರ, ನೂತನ ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಶ್ರೀರೂಪ ಅವರನ್ನು ನಮ್ಮ ಕರ್ನಾಟಕ ಸೇನೆ ವತಿಯಿಂದ ಸನ್ಮಾನಿಸಲಾಯಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸೇನೆಯ ಜಿಲ್ಲಾಧ್ಯಕ್ಷ ಜಿಲ್ಲಾಧ್ಯಕ್ಷ ಸುರೇಶ್ ನಾಯಕ ಅವರ ನೇತೃತ್ವದಲ್ಲಿ ಭೇಟಿ ಮಾಡಿ ಶಾಲು ಹೊದಿಸಿ, ಹಾರ ಹಾಕಿ, ಹಣ್ಣಿನ ಬುಟ್ಟಿ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸೇನೆಯ ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ಸಂಗೀತಾ ಸುರೇಶ್, ತಾಲೂಕು ಅಧ್ಯಕ್ಷ ಗಿರೀಶ್ ನಾಯಕ, ಪ್ರಧಾನ ಕಾರ್ಯದರ್ಶಿ ಗಿರೀಶ್ ಗೌಡ, ಟೌನ್ ಅಧ್ಯಕ್ಷ ಮುದಸೀರ್, ಉಪಾಧ್ಯಕ್ಷ ರವಿಕುಮಾರ್ ಇತರರು ಹಾಜರಿದ್ದರು.



## ನೂತನ ಜಿಲ್ಲಾಧಿಕಾರಿಗಳಿಗೆ ಸನ್ಮಾನ



ಚಾಮರಾಜನಗರ, ನೂತನ ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಶ್ರೀರೂಪ ಅವರನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ಸ್ವಾಗತಿಸಿ, ಸನ್ಮಾನಿಸಲಾಯಿತು. ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಸಿ.ಎನ್.ರೇಣುಕಾದೇವಿ ಅವರ ನೇತೃತ್ವದಲ್ಲಿ ನೂತನ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಸನ್ಮಾನಿಸಲಾಯಿತು.

**ಕ್ಯಾಲೆಂಡರ್ ಬಿಡುಗಡೆ**

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯು ಹೊರತಂದಿರುವ 2026 ನೇ ಸಾಲಿನ ವಾರ್ಷಿಕ ಕ್ಯಾಲೆಂಡರನ್ನು ನೂತನ ಜಿಲ್ಲಾಧಿಕಾರಿ ಶ್ರೀರೂಪ ಬಿಡುಗಡೆ ಮಾಡಿ ಶುಭ ಕೋರಿದರು. ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭರತ್ ಭೂಷಣ್, ಖಜಾಂಚಿ ಶಿವಕುಮಾರಯ್ಯ,ರಾಜ್ಯ ಪರಿಷತ್ ಸದಸ್ಯ ನಟರಾಜು, ಕಾರ್ಯಾಧ್ಯಕ್ಷ ಮಹಾದೇವಸ್ವಾಮಿ, ಹಿರಿಯ ಉಪಾಧ್ಯಕ್ಷ ಎಂ.ಡಿ.ಮಹದೇವಯ್ಯ, ಉಪಾಧ್ಯಕ್ಷ ನಾರಾಯಣಸ್ವಾಮಿ, ರವಿಕುಮಾರ್, ಕೆ.ರಾಚಯ್ಯ, ಸೋಮಶೇಖರ್ ಮಹೇಶ ಚಂದ್ರ, ಸಿ.ಎಂ.ಮುರುಗೇಶ್ ಕುಮಾರ್, ರಾಜು ಎಸ್.ಜಿ, ಸಿ.ಕೆ.ವಾಸು ಇತರರು ಹಾಜರಿದ್ದರು.

### ಕಾರ್ಯಕರ್ತರಿಗೆ ಕರೆ

# ಸ್ಥಳೀಯ ಸಂಸ್ಥೆ ಚುನಾವಣೆಗೆ ಸಜ್ಜಾಗಿ : ಕೆ.ಎಂ.ಕೃಷ್ಣನಾಯಕ



ಎಚ್.ಡಿ.ಕೋಟೆ: ಸ್ಥಳೀಯ ಸಂಸ್ಥೆ ಚುನಾವಣೆಗೆ ಬಿಜೆಪಿ ಜೊತೆ ಜೆಡಿಎಸ್ ಮೈತ್ರಿ ಇರೋದಿಲ್ಲ. ತಾಲೂಕು, ಜಿಲ್ಲಾ ಪಂಚಾಯತ್ ಚುನಾವಣೆಗೆ ನಿಲ್ಲುವವರು ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಪಕ್ಷ ಸಂಘಟನೆಗೆ ಹೆಚ್ಚು ಒತ್ತು ಕೊಡಿ ಎಂದು ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ಕರೆ ನೀಡಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಹೆಚ್ ಡಿ ಕೋಟೆ –ಸರಗೂರು ತಾಲೂಕಿನ ನಿಖಿಲ್ ಕುಮಾರ ಸ್ವಾಮಿ ಅಭಿಮಾನಿಗಳ ಬಳಗದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದರು. ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡರು ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ ಜೊತೆ ಮೈತ್ರಿ ಇರಲ್ಲ ಎಂದು ಎರಡು ಬಾರಿ ಸ್ಪಷ್ಟಪಡಿಸಿದ್ದಾರೆ. ಹೀಗಾಗಿ ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಸೇರಿದಂತೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ ಜೊತೆ ಮೈತ್ರಿ ಇರೋದಿಲ್ಲ. ಎಲ್ಲಿಯವರೆಗೆ ಈ ಮೈತ್ರಿ ಮುಂದುವರೆಯುತ್ತೆ ಎಂಬುದು ಕೂಡ ಗೊತ್ತಿಲ್ಲ. ಹೀಗಾಗಿ ಚುನಾವಣೆಗೆ ಸ್ಪರ್ಧಿಸುವವರು ಮೈತ್ರಿ ಬಗ್ಗೆ ತಲೆಕೆಡಿಸಿಕೊಳ್ಳದೆ ಪಕ್ಷ ಸಂಘಟಿಸುವತ್ತ ಗಮನಹರಿಸಬೇಕು. ಮೈತ್ರಿ ಇದೆ ಅಂತೇಳಿ ಮೈಮರೆತು ಕುಳಿತುಕೊಂಡರೆ ನಿಮಗೆ ಕಷ್ಟವಾಗಲಿದೆ. ಈ ಬಾರಿ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಜೆಡಿಎಸ್ ನಾಲ್ಕು ಕ್ಷೇತ್ರ ಗೆಲ್ಲಬಹುದು. ಈ ಹಿಂದೆ ಸ್ವತಂತ್ರವಾಗಿ ನಿಂತು ಮೂರರಿಂದ ನಾಲ್ಕು ಕ್ಷೇತ್ರಗಳನ್ನು ಗೆದ್ದಿರುವ ಇತಿಹಾಸ ಇದೆ. ಈ ಬಾರಿಯೂ ಕನಿಷ್ಠ ನಾಲ್ಕು ಕ್ಷೇತ್ರ ಗೆಲ್ಲುವ ನಿಟ್ಟಿನಲ್ಲಿ ಪಕ್ಷ ಸಂಘಟನೆಗೆ ಹೆಚ್ಚಿನ ಆದ್ಯತೆ ಕೊಡಿ. ಮೈತ್ರಿ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ಖಡಾ ಖಂಡಿತವಾಗಿಯೂ ಈ ಬಾರಿ ಮೈತ್ರಿ ಇರುವುದಿಲ್ಲ. ಮಾರ್ಚ್, ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಚುನಾವಣೆ ಬರಬಹುದು. ಚುನಾವಣೆ ಎದುರಿಸಲು ಎಲ್ಲರೂ ಸಿದ್ಧರಾಗಿರಿ. ಪಕ್ಷದಿಂದ ದೂರ ಸರಿದಿರುವ ಸಮುದಾಯಗಳನ್ನು ಮತ್ತೆ ಪಕ್ಷಕ್ಕೆ ಕರೆತರುವ ಕೆಲಸ ಮಾಡಿ. ಪಕ್ಷದೊಳಗೆ ಇರುವ ಸಮುದಾಯದ ಮುಖಂಡರ ಮೂಲಕ, ಆಯಾಯ ಸಮುದಾಯದವ ರನ್ನು ಪಕ್ಷಕ್ಕೆ ಕರೆತನ್ನಿ. ಒಂದೇ ಸಮುದಾಯಕ್ಕೆ ಜೆಡಿಎಸ್ ಸೀಮಿತವಾಗಿದೆ ಎಂಬ ವಿಪಕ್ಷಗಳ ಆರೋಪವನ್ನು ಸುಳ್ಳು ಮಾಡಿ ಎಂದು ಕಾರ್ಯಕರ್ತರಿಗೆ ಕೆ.ಎಂ. ಮನವಿ ಮಾಡಿದರು.


**ಹೆಚ್ ಡಿ ಕೋಟೆಗೆ ನಿಖಿಲ್ ಆಗಮನ**

ಜೆಡಿಎಸ್ ಸದಸ್ಯತ್ವ ಅಭಿಯಾನ ಅಂಗವಾಗಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಹೆಚ್ ಡಿ ಕೋಟೆ ತಾಲೂಕಿಗೆ ಆಗಮಿಸಲಿದ್ದಾರೆ. ಈ ವೇಳೆ ಸರಿಸುಮಾರು 10 ಸಾವಿರ ಮಹಿಳೆಯರನ್ನು ಕಾರ್ಯಕ್ರಮಕ್ಕೆ ಕರೆದುಕೊಂಡು ಬಂದು ಜೆಡಿಎಸ್ ಸದಸ್ಯತ್ವ ನೋಂದಣಿ ಮಾಡಿಸಬೇಕು. ಅವರನ್ನೇ ವೇದಿಕೆ ಮೇಲೆ ಕೂರಿಸಿ ಇತಿಹಾಸ ಸೃಷ್ಟಿಸಬೇಕು. ರಾಜ್ಯದಲ್ಲಿ ಎಲ್ಲೂ ಕೂಡ ಬರೀ ಮಹಿಳೆಯರನ್ನೇ ಕರೆತಂದು ಸದಸ್ಯತ್ವ ನೋಂದಣಿ ಮಾಡಿಸಿಲ್ಲ. ಎಲ್ಲ ಕಡೆಯೂ ಪುರುಷರೇ ಅತಿಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿಯಾಗಿದ್ದಾರೆ. ಆದರೆ ನಾವು 10 ಸಾವಿರ ಮಹಿಳೆಯರನ್ನು ವೇದಿಕೆ ಮೇಲೆ ಕೂರಿಸಿ, ಇತಿಹಾಸ ಸೃಷ್ಟಿ ಮಾಡಬೇಕು ಎಂದು ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ಹೇಳಿದರು. ತಾಲೂಕು ಜೆಡಿಎಸ್ ಅಧ್ಯಕ್ಷ ರಾಜೇಂದ್ರ, ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷ ಗೋಪಾಲ ಸ್ವಾಮಿ ಹಾಗೂ ಎಚ್.ಡಿ.ಕುಮಾರ ಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ರವಿಕುಮಾರ್, ನಿಖಿಲ್ ಕುಮಾರ ಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಅಗಸನಹುಂಡಿ ಹರೀಶ್, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದರು.

## ಮತಪಟ್ಟಿ ಪರಿಷ್ಕರಣೆಯಿಂದ ದಳಕ್ಕೆ ಲಾಭ

ಮತದಾರರ ಮಾಹಿತಿ ಸಂಗ್ರಹ ಮತ್ತು ಗುರುತಿನ ಚೀಟಿ ಪರಿಷ್ಕರಣೆ ವೇಳೆ ಬೂತ್ ಮಟ್ಟದ ಕಾರ್ಯಕರ್ತರು ಹದ್ದಿನ ಕಣ್ಣಿಟ್ಟಿರಬೇಕು. ಈ ಹಿಂದೆ ಬೇರೆ ಜಿಲ್ಲೆ, ಬೇರೆ ರಾಜ್ಯದವರು ಕೆಲಸ ಕಾರ್ಯಗಳಿಗೆ ಆಗಮಿಸಿ, ಇಲ್ಲಿ ಮತ ಚಲಾಯಿಸಿರುವ ಉದಾರಣೆಗಳಿವೆ. ಅಂತಹವರನ್ನು ಪತ್ತೆ ಮಾಡಿ ಅಧ್ಯಕ್ಷರಿಗೆ, ಮುಖಂಡರಿಗೆ ಮಾಹಿತಿ ನೀಡಬೇಕು. ನಾವು ಅದನ್ನು ಡಿಲೀಟ್ ಮಾಡಿಸುವ ಕೆಲಸ ಮಾಡುತ್ತೇವೆ. ಈ ರೀತಿ ಮಾಡುವುದರಿಂದ ಜಿಲ್ಲಾ ಪಂಚಾಯತ್ ಕ್ಷೇತ್ರದಲ್ಲಿ ಕನಿಷ್ಠ 10 ಸಾವಿರ ಮತಗಳು ಕಡಿಮೆಯಾಗುತ್ತೆ. ಇದರಿಂದ ಜೆಡಿಎಸ್ ಹೆಚ್ಚಿನ ಅನುಕೂಲವಾಗಲಿದೆ ಎಂದು ಹೇಳಿದರು. ಪಕ್ಷದಲ್ಲಿ ಸಣ್ಣಪುಟ್ಟ ಗೊಂದಲ, ಭಿನ್ನಾಭಿಪ್ರಾಯ ಸಹಜ. ಎಲ್ಲ ಪಕ್ಷಗಳಲ್ಲೂ ಸರ್ವೆ ಸಾಮಾನ್ಯ. ನಾವು ಇದನ್ನು ಬದಿಗೊತ್ತಿ ಪಕ್ಷ ಸಂಘಟಿಸಿದರೆ, ಎಲ್ಲಾ ಸಮುದಾಯದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಪಕ್ಷಕ್ಕೆ ಬರಮಾಡಿಕೊಂಡರೆ ಹಾಗೂ ಈಗಾಗಲೇ ಪಕ್ಷಕ್ಕೆ ಸೇರ್ಪಡೆಯಾಗಿರುವವರನ್ನು ಗೌರವದಿಂದ ನಡೆಸಿಕೊಂಡರೆ, ನೂರಕ್ಕೆ ನೂರರಷ್ಟು ನಾಲ್ಕು ಜಿಲ್ಲಾ ಪಂಚಾಯತ್ ಗೆದ್ದೇ ಗೆಲ್ಲುತ್ತೇವೆ ಎಂದು ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ವಿಶ್ವಾಸ ವ್ಯಕ್ತಪಡಿಸಿದರು.

# ನಿರ್ಗಮಿತ ಜಿಲ್ಲಾಧಿಕಾರಿಗೆ ಜಿಲ್ಲಾಡಳಿತದಿಂದ ಹೃದಯಸ್ಪರ್ಶಿ ಬೀಳ್ಕೊಡುಗೆ



ಚಾಮರಾಜನಗರ: ಕಳೆದ ಎರಡೂವರೆ ವರ್ಷಗಳ ಕಾಲ ಚೆಲುವ ಚಾಮರಾಜನಗರದ ಜಿಲ್ಲಾಧಿಕಾರಿಯಾಗಿ ಜಿಲ್ಲೆಯ ಅಭಿವೃದ್ಧಿಗೆ ಜನಸ್ನೇಹಿ ಆಡಳಿತ ನೀಡಿದ ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರಿಗೆ ನಗರದಲ್ಲಿಂದು ಜಿಲ್ಲಾಡಳಿತದ ವತಿಯಿಂದ ಹೃದಯಸ್ಪರ್ಶಿ ಬೀಳ್ಕೊಡುಗೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಅಭಿಮಾನದ ಮಹಾಪೂರವೇ ಹರಿಯಿತು.

ಜಿಲ್ಲೆಯ ನೂತನ ಜಿಲ್ಲಾಧಿಕಾರಿ ಶ್ರೀರೂಪ ಹಾಗೂ ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸೇರಿದಂತೆ ಇತರೆ ಗಣ್ಯರನ್ನು ನಾದಸ್ವರ, ಬ್ಯಾಂಡ್‌ಸೆಟ್, ಗೊರವರ ಕುಣಿತ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ನಗರದ ಜಿಲ್ಲಾಡಳಿತ ಭವನದ ಪ್ರವೇಶದ್ವಾರದಲ್ಲಿ ಸ್ವಾಗತಿಸಲಾಯಿತು. ಅಲ್ಲಿಂದ ಜಿಲ್ಲಾ ಪಂಚಾಯತ್ ಕೆ.ಡಿ.ಪಿ. ಸಭಾಂಗಣದವರೆಗೂ ಗಣ್ಯರಿಗೆ ಹೂಮಳೆ ಸುರಿಸುವ ಮೂಲಕ ವೇದಿಕೆಗೆ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ವೇದಿಕೆ ಕಾರ್ಯಕ್ರಮ ಆಯೋಜಿತವಾಗಿದ್ದ ಸಭಾಂಗಣದಲ್ಲಿ ಕಿಕ್ಕಿರಿದು ಸಮಾವೇಶಗೊಂಡಿದ್ದ ಜಿಲ್ಲೆಯ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿ, ಸಿಬ್ಬಂದಿ, ವಿವಿಧ ಸಂಘಸಂಸ್ಥೆಗಳು, ರೈತ, ಕನ್ನಡಪರ ಸಂಘಟನೆಗಳು ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರಿಗೆ ಹಾರ, ತುರಾಯಿ, ಫಲತಾಂಬೂಲ, ಸ್ಮರಣಿಕೆ, ಉಡುಗೊರೆಗಳನ್ನು ನೀಡುವ ಮೂಲಕ ಅಭಿಮಾನಮೆರೆದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಎಲ್ಲರ ಅಭಿಮಾನ, ಸನ್ಮಾನ ಸ್ವೀಕರಿಸಿ ಮಾತನಾಡಿದ ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಇದೊಂದು ಅವಿಸ್ಮರಣೀಯ ಕಾರ್ಯಕ್ರಮವಾಗಿದೆ. ಚಾಮರಾಜನಗರ ಶಾಪಗ್ರಸ್ಥ ಜಿಲ್ಲೆಯಲ್ಲ. ಶೇ. 50ಕ್ಕೂ ಹೆಚ್ಚು ಅರಣ್ಯಪ್ರದೇಶ ಹೊಂದಿರುವ ಗಡಿ ಜಿಲ್ಲೆ, ಕಾವೇರಿ ನದಿ ಹರಿಯುವ ಹಾಗೂ ಶುದ್ಧಗಾಳಿ ಇರುವ ಸುಂದರ ಜಿಲ್ಲೆಯಾಗಿದೆ. ಈ ಮೊದಲು 11 ವರ್ಷಗಳ ಕಾಲ ಬೇರೆಬೇರೆ ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದರೂ ಚಾಮರಾಜನಗರ ನನ್ನ ವೃತ್ತಿಜೀವನದಲ್ಲಿ ವಿಶೇಷ ಅನುಭವ ನೀಡಿದೆ. ಜಿಲ್ಲೆಯ ಜನರ ಪ್ರೀತಿಯನ್ನು ಮರೆಯಲು ಸಾಧ್ಯವಿಲ್ಲ. ಜಿಲ್ಲಾಧಿಕಾರಿ ಎನ್ನುವುದು ಅಧಿಕಾರವಲ್ಲ, ಅದೊಂದು ಅವಕಾಶವಾಗಿದೆ ಎಂದರು.

ಜಿಲ್ಲೆಯಲ್ಲಿ ಉತ್ತಮ ರಸ್ತೆಗಳು, ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯಗಳಿಗೆ ಆದ್ಯತೆ ನೀಡಲಾಗಿದೆ. ಮಹದೇಶ್ವರ ಬೆಟ್ಟದಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳು, ಆರೋಗ್ಯ ಕ್ಷೇತ್ರದಲ್ಲಿ ಪ್ರಗತಿ, ಉಚಿತ ಆಂಬುಲೆನ್ಸ್, 40 ಸರ್ಕಾರಿ ಶಾಲೆಗಳಿಗೆ 7 ಕೋಟಿ ವೆಚ್ಚದಲ್ಲಿ ಕಂಪ್ಯೂಟರ್, ಟ್ಯಾಬ್ ಸೇರಿದಂತೆ ಕಲಿಕಾ ಸಾಮಗ್ರಿಗಳ ವಿತರಣೆ, ಜೈಲಿನ ಖೈದಿಗಳಿಗೆ ಕಂಪ್ಯೂಟರ್ ತರಬೇತಿ, ಎಸ್.ಎಸ್.ಎಲ್.ಸಿ, ಪಿಯುಸಿ ಫಲಿತಾಂಶದಲ್ಲಿ ಸುಧಾರಣೆ, ಜೀತ ವಿಮುಕ್ತರಿಗೆ ಹಾಗೂ ಆಕ್ಸಿಜನ್ ಸಂತ್ರಸ್ಥರಿಗೆ ಪರಿಹಾರ, ಜಮೀನು ಒತ್ತುವರಿ ತೆರವು, ಕೆರೆ ಕಟ್ಟೆ ಅಭಿವೃದ್ಧಿ, ಮಾನವ–ಕಾಡುಪ್ರಾಣಿಗಳ ಸಂಘರ್ಷ ತಡೆ ಸೇರಿದಂತೆ ಹತ್ತು–ಹಲವು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಬಡವರು, ರೈತರು, ಆದಿವಾಸಿಗಳು, ವಿಕಲಚೇತನರು ಸೇರಿದಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗಳ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಪರಿಣಾಮಕಾರಿ ಸಭೆಗಳ ಮೂಲಕ ಜನರ ಕುಂದುಕೊರತೆ ಆಲಿಸಿದ್ದೇನೆ. ಎಲ್ಲಾ ಇಲಾಖೆಗಳು ಒಂದು ಕುಟುಂಬವಿದ್ದಂತೆ. ಎಲ್ಲರೂ ಸೇರಿ ಒಂದು ತಂಡವಾಗಿ, ಸ್ಪೂರ್ತಿಯಿಂದ ಕೆಲಸ ಮಾಡಬೇಕು. ಆಗಮಾತ್ರ ಜಿಲ್ಲೆ ಅಭಿವೃದ್ಧಿಯತ್ತ ಸಾಗಲು ನೆರವಾಗಲಿದೆ. ಜಿಲ್ಲೆಯ ಬಗ್ಗೆ ವಿಶೇಷ ಕಾಳಜಿ ಇದೆ. ಮುಂದಿನ ದಿನಗಳಲ್ಲಿ ಪಶುಸಂಗೋಪನೆ ಹಾಗೂ ರೇಷ್ಮೆ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಈ ನಿಟ್ಟಿನಲ್ಲಿ ಎಲ್ಲರ ಸಹಕಾರಕ್ಕೆ ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಧನ್ಯವಾದ ಅರ್ಪಿಸಿದರು.

ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರು ಸ್ವಾಗತ ಸ್ವೀಕರಿಸಿ ಮಾತನಾಡಿ ಚಾಮರಾಜನಗರ ಉತ್ತಮ ಪರಿಸರ ಹೊಂದಿದ ಜಿಲ್ಲೆಯಾಗಿದೆ. ಜಿಲ್ಲೆಯಲ್ಲಿ ಪಾರದರ್ಶಕ ಹಾಗೂ ಜನಸ್ನೇಹಿ ಆಡಳಿತಕ್ಕೆ ಹೆಚ್ಚು ಒತ್ತು ನೀಡಲಾಗುವುದು. ರೈತರ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಲಾಗುವುದು. ಪ್ರವಾಸೋದ್ಯಮಕ್ಕೆ ಜಿಲ್ಲೆಯಲ್ಲಿ ವಿಪುಲ ಅವಕಾಶಗಳಿವೆ. ಆದಿವಾಸಿಗಳ ಅಭಿವೃದ್ಧಿಗೆ ಕೌಶಲ್ಯ ತರಬೇತಿ ನೀಡಲಾಗುವುದು. ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರ ಕಾರ್ಯ ಯೋಜನೆಗಳನ್ನು ಮುಂದುವರೆಸಲಾಗುವುದು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರು ಮಾತನಾಡಿ ಸರ್ವರನ್ನು ಸೆಳೆಯುವ ಸರಳ–ಸಜ್ಜನಿಕೆ, ಆಕರ್ಷಕ ವ್ಯಕ್ತಿತ್ವ ಹೊಂದಿರುವ ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ಜಿಲ್ಲೆಯಲ್ಲಿ ಪ್ರಯಾಸ್ ಯೋಜನೆ ಅನುಷ್ಠಾನಗೊಳಿಸಿ 35 ಸಾವಿರ ಮಕ್ಕಳಿಗೆ ಸ್ಕ್ರೀನಿಂಗ್ ಮಾಡಿಸಿದ್ದಾರೆ. ಸ್ವಯಂ ಸಂಸ್ಥೆಗಳ ಸಹಕಾರದೊಂದಿಗೆ 22 ಸಾವಿರ ಹೆಣ್ಣುಮಕ್ಕಳನ್ನು ಪ್ರಾಣಸಖಿ ಕಾರ್ಯಕ್ರಮಕ್ಕೆ ಒಳಪಡಿಸಿದ್ದಾರೆ. ಸಮ್ಮಿಲನ ಕಾರ್ಯಕ್ರಮದಡಿ ಇನ್‌ಫೋಸಿಸ್, ಜೆ.ಕೆ. ಟೈರ್, ಟಿ.ವಿ.ಎಸ್. ಕಂಪನಿಗಳ ಸಹಭಾಗಿತ್ವದಲ್ಲಿ ಜಿಲ್ಲೆಯ ರೈತರು, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳ ಅಭಿವೃದ್ಧಿಗೆ ಮುನ್ನುಡಿ ಬರೆದಿದ್ದಾರೆ ಎಂದು ತಿಳಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಉಪ ಕಾರ್ಯದರ್ಶಿ ಶೃತಿ, ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರಘು, ರೈತ ಮುಖಂಡರಾದ ಮಹೇಶ್ ಪ್ರಭು, ಹೊಂಗನೂರು ಬಸವಣ್ಣ, ಹಳ್ಳಿಕೆರೆಹುಂಡಿ ಭಾಗ್ಯರಾಜು, ಬಿ.ಆರ್.ಟಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಪತಿ, ಚಾಮುಲ್ ಎಂ.ಡಿ. ರಾಜ್‌ಕುಮಾರ್, ಕನ್ನಡಪರ ಸಂಘಟನೆಗಳ ಮುಖಂಡರಾದ ಚಾ.ರಂ. ಶ್ರೀನಿವಾಸಗೌಡ, ಚಾ.ಗು. ನಾಗರಾಜು, ಸಮತಾ ಸೊಸೈಟಿ ಅಧ್ಯಕ್ಷರಾದ ದೀಪಾ ಬುದ್ಧೆ, ಜಿಲ್ಲಾ ಬುಡಕಟ್ಟುಗಳ ಅಭಿವೃದ್ಧಿ ಸಂಸ್ಥೆ ಹಾಗೂ ರೋಟರಿ ಸಂಸ್ಥೆ ಪ್ರದಾಧಿಕಾರಿಗಳು ಕಾರ್ಯಕ್ರಮದಲ್ಲಿ ಮಾತನಾಡಿದರು. ಕಾರ್ಯಕ್ರಮದಲ್ಲಿ ರೈತ ಮುಖಂಡರು, ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಪದಾಧಿಕಾರಿಗಳು, ಕನ್ನಡಪರ ಸಂಘಟನೆಗಳ ಹೋರಾಟಗಾರರು ವರ್ಗಾವಣೆಯಾಗಿರುವ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ನೇಮಕಗೊಂಡು ಜಿಲ್ಲೆಯ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಕೊಡುಗೆ ನೀಡಲಿ ಎಂದು ಕೋರಿಕೆ ಮಂಡಿಸಿದರು.

## ಲಂಚ ನೀಡಿ ಅಕ್ರಮವಾಗಿ ವಿದ್ಯುತ್ ಸಂಪರ್ಕ

ಗುಂಡ್ಲುಪೇಟೆ: ಗ್ರಾಮೀಣ ಭಾಗಗಳಲ್ಲಿ ಕೆಇಬಿ ಅಧಿಕಾರಿಗಳಿಗೆ ಲಂಚ ನೀಡಿ ಅಕ್ರಮವಾಗಿ ವಿದ್ಯುತ್ ಸಂಪರ್ಕ ಹೊಂದಿದ್ದಾರೆ ಎಂದು ಕಾಂಗ್ರೆಸ್ ಕಾರ್ಯಕರ್ತ ದೊಡ್ಡತುಪ್ಪೂರು ಲೋಕೇಶ್ ರಾಜ್ ಆರೋಪಿಸಿದ್ದಾರೆ.



ದೊಡ್ಡತುಪ್ಪೂರು ಗ್ರಾಮದಲ್ಲಿ ಕೆಇಬಿ ಅಧಿಕಾರಗಳು ಲಂಚದ ಆಮಿಷಕ್ಕೆ ಒಳಗಾಗಿ ಶೆಡ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದಾರೆ. ಮನೆ ನಿರ್ಮಾಣ ಮಾಡಿರುವವರಿಗೆ ಕಾನೂನು ರೀತ್ಯಾ ವಿದ್ಯುತ್ ಸಂಪರ್ಕ ನೀಡಿ ಎಂದು ಎಷ್ಟೋ ಬಾರಿ ಅರ್ಜಿ ಸಲ್ಲಿಸಿದ್ದರೂ ಸಹ ಇದುವರೆಗೂ ಸಬೂಬು ನೀಡಿ ಸಂಪರ್ಕ ನೀಡಿಲ್ಲ ಎಂದು ಗುಡುಗಿದರು.

ವಿದ್ಯುತ್ ಸಂಪರ್ಕ ಕಲ್ಪಿಸಿದರೇ ಗ್ರಾಮದಲ್ಲಿ ಕಾನೂನು ರೀತಿ ಕ್ರಮವಹಿಸಿ, ಇಲ್ಲವೇ ಲಂಚದ ಆಮಿಷಕ್ಕೆ ಒಳಗಾಗಿ ಕೆಲವು ವ್ಯಕ್ತಿಗಳ ಪರ ಕೆಲಸ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಗ್ರಾಮೀಣ ಭಾಗಗಳಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಮಾಲೀಕರು ಮನೆ ಬಳಕೆಗಾಗಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ. ಹಾಗೂ ಇನ್ನಿತರೆ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಅಕ್ರಮ ಬಳಕೆದಾರರನ್ನು ಪತ್ತೆ ಹಚ್ಚಿ ಹಂತವರ ಮೇಲೆ ನಿಗಾ ವಹಿಸುವಂತೆ ಅಧಿಕಾರಿಗಳಿಗೆ ಒತ್ತಾಯಿಸಿದ್ದಾರೆ.

## ನೂತನ ಜಿಲ್ಲಾಧಿಕಾರಿಗೆ ಅಖಿಲ ಕರ್ನಾಟಕ ಕನ್ನಡ ಮಹಾಸಭಾದಿಂದ ಸನ್ಮಾನ



ಚಾಮರಾಜನಗರ, ನೂತನ ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಶ್ರೀರೂಪ ಅವರನ್ನು ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ವತಿಯಿಂದ , ಸನ್ಮಾನಿಸಲಾಯಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ಅಧ್ಯಕ್ಷ ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ನೂತನ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ, ಹಾರ ಹಾಕಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ಪಣ್ಯದಹುಂಡಿ ರಾಜು, ನಿಜಧ್ವನಿಗೋವಿಂದರಾಜು, ಜಗದೀಶ್, ಹೊಮ್ಮ ಲೋಕೇಶ್, ಮುತ್ತಿಗೆ ಗೋವಿಂದರಾಜ, ರಾ.ಜಗದೀಶ್ ನ್, ಮುತ್ತುರಾಜು, ಶಿವಣ್ಣ ಹೊಸೂರು, ಮಹೇಶ್ ಗೌಡ, ರಾಚಪ್ಪ, ತಾಂಡವಮೂರ್ತಿ, ವೀರಭದ್ರ, ಮೂಡ್ಲುಪುರಪ್ರಕಾಶ್, ಸುರೇಶ್ ಉಪ್ಪಾರ್, ಸುರೇಶ್ ಗೌಡ, ಡಾನ್ಸ್ ಬಸವರಾಜು ಇತರರು ಹಾಜರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಹೆಣ್ಣು ಮಕ್ಕಳ ಶಿಕ್ಷಣದಿಂದ ಅನಿಷ್ಟ ಪದ್ಧತಿ ದೂರ: ಪ್ರೊ.ಗಂಗಾಧರ್

ಮೈಸೂರು: ಹೆಣ್ಣು ಮಕ್ಕಳು ಉನ್ನತ ಶಿಕ್ಷಣ ಪಡೆದು ವಿದ್ಯಾವಂತರಾದಾಗ ಮಾತ್ರವೇ ಸಮಾಜದ ಅನಿಷ್ಠ ಪದ್ಧತಿಗಳು ಹೋಗಲಾಡಿಸಬಹುದು ಎಂದು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಅಭಿಪ್ರಾಯ ಪಟ್ಟರು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿಯ ಸಭಾಂಗಣದಲ್ಲಿ ಬುಧವಾರ ನಡೆದ ಭಾರತದ ಮೊದಲ ಶಿಕ್ಷಕಿ ಅಕ್ಷರದವ್ವ ಮಾತೆ ಸಾವಿತ್ರಿಬಾಯಿ ಪುಲೆ ಅವರ 195ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಬಡ ಹಾಗೂ ಮಧ್ಯಮ ವರ್ಗದ ಕುಟುಂಬದ ಮಕ್ಕಳಿಗೆ ಅದರಲ್ಲೂ ಹೆಣ್ಣು ಮಕ್ಕಳು ಖಾಸಗಿ ಶಾಲೆಯಲ್ಲಿ ಫೀಸ್ ಕೊಟ್ಟು ಓದಲು ಆಗುವುದಿಲ್ಲ. ಮಕ್ಕಳಿಗೆ ನಾವು ಒಳ್ಳೆಯ ಶಿಕ್ಷಣ ನೀಡಲಿಲ್ಲ ಎಂದರೆ ಬಹಳ ದೊಡ್ಡ ಸಮಸ್ಯೆಯನ್ನು ನಾವು ಕಾಣಬೇಕಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ಇಂದಿಗೂ ಕೂಡ ರಾಜ್ಯದ ಬಹುತೇಕ ಕಡೆ ಬಾಲ್ಯ ವಿವಾಹ ಕಂಡು ಬರುತ್ತಿದೆ. ಇವುಗಳನ್ನೆಲ್ಲಾ ಹೋಗಲಾಡಿಸಬೇಕೆಂದರೆ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಬೇಕು. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡದರೆ ಸಮಾಜದ ಅರ್ಧ ಅನಿಷ್ಟ ಪದ್ಧತಿಗಳು ದೂರವಾಗುತ್ತದೆ ಹಾಗೂ ಸಮಾದಲ್ಲಿ ಬೆಳವಣಿಗೆಯನ್ನೂ ಕಾಣಬಹುದು ಎಂದರು.

ಈಗಾಗಲೇ ದೇಶದ ಜನಸಂಖ್ಯೆ 130 ಕೋಟಿ ಮೀರಿದೆ. ಇದಕ್ಕೆ ಕಾರಣ ಹೆಣ್ಣು ಮಕ್ಕಳಿಗೆ ಬೇಗ ಮದುವೆ ಮಾಡುತ್ತಿರುವುದು. ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ನೀಡುವುದರಿಂದ ಅವರಿಗೂ ತಿಳುವಳಿಕೆ ಮೂಡಿ 23 ಅಥವಾ 24 ರಲ್ಲಿ ಮದುವೆ ಮಾಡಿದರೆ ಜನಸಂಖ್ಯೆ ಬೆಳವಣಿಗೆಯನ್ನು ನಿಯಂತ್ರಿಸಬಹುದು ಎಂದು ತಿಳಿಸಿದರು.

ಶಿಕ್ಷಣ ಮತ್ತ ಆರೋಗ್ಯ ಖಾಸಗೀಕರಣವಾಗುತ್ತಿರುವುದರಿಂದ ಗುಣಮಟ್ಟದ ಶಿಕ್ಷಣ ಬಡ ಮಕ್ಕಳಿಗೆ ಸಿಗುವುದು ಕಷ್ಟವಾಗುತ್ತಿದೆ. ಸ್ವಾತಂತ್ರ?ಯ ಬಂದು 75 ವರ್ಷಗಳಾದರೂ ಕೂಡ ನಾವು ಇನ್ನೂ ಅಭಿವೃದ್ಧಿ ಶೀಲ ರಾಷ್ಟ್ರ ಎಂದು ಗುರುತಿಸಿಕೊಳ್ಳುತ್ತಿದ್ದೇವೆ. ಕಾರಣ ನಮಗೆ ಉನ್ನತ ಶಿಕ್ಷಣ ಸಿಗುತ್ತಿಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ .ಹಲಸೆ, ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಪರೀಕ್ಷಾಂಗ ಕುಲಸಚಿವ ಡಾ.ಸಿ.ಎಸ್. ಆನಂದ್ ಕುಮಾರ್, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಎಂ.ರಾಮನಾಥ್ ನಾಯುಡು, ಕಾರ್ಯಕ್ರಮದ ಸಂಯೋಜನಾಧಿಕಾರಿ ಡಾ.ಪಿ.ಮಂಜುನಾಥ್ ಹಾಜರಿದ್ದರು.

## ಸರ್ಕಾರಿ ಪ್ರಾಥಮಿಕ ಶಾಲೆಗೆ ಡಿಸಿ ಅನಿರೀಕ್ಷಿತ ಭೇಟಿ

ಚಾಮರಾಜನಗರ, ಶ್ರೀರೂಪ ಅವರು ತಾಲೂಕಿನ ಬದನಗುಪ್ಪೆಯ ಸರ್ಕಾರಿ ಪ್ರಾಥಮಿಕ ಶಾಲೆಗೆ ಇಂದು ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಿದರು. ಶಾಲೆಯಲ್ಲಿ ಬಿಸಿಯೂಟದ ವ್ಯವಸ್ಥೆ, ಬಿಸಿಯೂಟ ತಯಾರಿಕೆಗೆ ದಸ್ತಾನು ಮಾಡಲಾಗಿದ್ದ ಆಹಾರ ಸಾಮಗ್ರಿಗಳನ್ನು ಪರಿಶೀಲಿಸಿದರು. ಕುಡಿಯುವ ನೀರು, ಶಾಲೆಯ ಸ್ವಚ್ಚತೆಯನ್ನು ಸಹ ವೀಕ್ಷಿಸಿದರು.

ಮಕ್ಕಳ ಹಾಜರಾತಿ, ಬೋಧನಾ ಪ್ರಕ್ರಿಯೆ, ಇನ್ನಿತರ ವ್ಯವಸ್ಥೆಗಳನ್ನು ಪರಿಶೀಲಿಸಿ ಮಾಹಿತಿ ಪಡೆದುಕೊಂಡರು. ಮಕ್ಕಳೊಂದಿಗೆ ಆತ್ಮೀಯವಾಗಿ ಸಂವಾದ ನಡೆಸಿ ಕಲಿಕಾ ಸಾಮರ್ಥ್ಯದ ಬಗ್ಗೆ ತಿಳಿದುಕೊಂಡರು. ಶಾಲೆಯಲ್ಲಿ ಆಗಬೇಕಿರುವ ಮೂಲ ಸೌಲಭ್ಯಗಳ ಕಾಮಗಾರಿ ನಿರ್ವಹಣೆ ಸಂಬಂಧ ಅಗತ್ಯ ಸೂಚನೆಯನ್ನು ನೀಡಿದರು. ಇದಕ್ಕೂ ಮೊದಲು ಮಂಗಳವಾರ ರಾತ್ರಿ ಬೆಂಡರವಾಡಿ ಗ್ರಾಮದ ಬಳಿ ಕೆಎಸ್‌ಆರ್ಟಿಸಿ ಬಸ್ ಮತ್ತು ಲಾರಿ ನಡುವೆ ಸಂಭವಿಸಿದ ಅಪಘಾತದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಅಪಘಾತ ಕುರಿತು ಮಾಹಿತಿ ಪಡೆದರು. ಸಾರ್ವಜನಿಕರು, ವಾಹನ ಸಂಚಾರ ಸುರಕ್ಷತೆಗೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳುವಂತೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.



## ಕೇಂದ್ರ ಸರ್ಕಾರ ಹಲವಾರು ಯೋಜನೆಗಳು

ಚನ್ನಪಟ್ಟಣ: ವಿಕಲಚೇತನರು ಮತ್ತು ಹಿರಿಯ ನಾಗರೀಕರು ಸಮಾಜದ ಮುಖ್ಯಧಾರೆಯಲ್ಲೇ ಉಳಿಯಲು ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಭಾರತೀಯ ಕೃತಕ ಅಂಗಗಳ ಉತ್ಪಾದನಾ ನಿಗಮ (ಎ.ಎಲ್.ಐ.ಎಂ.ಸಿ.ಒ) ಮಾನವನ ಬಾಹ್ಯಾ ದೇಹದ ಕೃತಕ ಅಂಗಗಳು, ಶ್ರವಣ ಸಾಧನಗಳು, ಗಾಲಿ ಕುರ್ಚಿಗಳು ಸೇರಿದಂತೆ ಅಗತ್ಯ ಸಹಾಯಕ ಉಪಕರಣಗಳನ್ನು ಒದಗಿಸುತ್ತಿದೆ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್.ಮಂಜುನಾಥ್ ಹೇಳಿದರು.



ಅವರು ನಗರದ ಸಮುದಾಯ ಭವನದಲ್ಲಿ ಎ.ಎಲ್.ಐ.ಎಂ.ಸಿ.ಒ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಇಲಾಖೆಗಳು ಹಮ್ಮಿಕೊಂಡಿದ್ದ ವಿಕಲಚೇತನರು ಮತ್ತು ಹಿರಿಯ ನಾಗರೀಕರಿಗೆ ಸಾಧನ–ಸಲಕರೆಗಳ ಉಚಿತ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಉಪಕರಣಗಳನ್ನು ವಿತರಿಸುವುದರ ಮೂಲಕ ಅಂಕವಿಕರಲ ಆತ್ಮವಿಶ್ವಾಸವನ್ನು ಸರ್ಕಾರ ಹೆಚ್ಚಿಸುತ್ತಿದೆ. ಸ್ವಾವಲಂಭಿ ಬದುಕಿಗೆ ದಾರಿ ಮಾಡಿ ಕೊಡುತ್ತಿದೆ. ಸಮಾಜದ ಪ್ರತಿಯೊಬ್ಬರು ಸಮಾನ ಅವಕಾಶಗಳೊಂದಿಗೆ ಗೌರವಯುತ ಜೀವನ ನಡೆಸಬೇಕು ಎಂಬುದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸರ್ಕಾರದ ಆಶಯವಾಗಿದೆ ಎಂದರು. ಈ ಕಾರ್ಯಕ್ರಮದಲ್ಲಿ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಪಿ. ಯೋಗೇಶ್ವರ್ ರವರು, ಎ.ಎಲ್.ಐ.ಎಂ.ಸಿ.ಒದ ಅಧಿಕಾರಿ ಶಿಲ್ಪಾ ಪ್ರಿಯದರ್ಶಿನಿ ಮುಂತಾದವರು ಭಾಗವಹಿಸಿದ್ದರು.

## ಭೂಪರಿಹಾರ ಕೊಡಿಸುವಂತೆ ಮನವಿ



ರಾಮನಗರ: ಸ್ಯಾಟಿಲೈಟ್ ಟೌನ್ ರಿಂಗ್ ರೋಡ್ ನಿರ್ಮಾಣಕ್ಕಾಗಿ (ಎಸ್.ಟಿ.ಆರ್.ಆರ್) ಸ್ವಾಧೀನಕ್ಕೆ ಒಳಗಾಗಿರುವ ಭೂಮಿಯ ಮಾಲೀಕರಿಗೆ ಪರಿಹಾರದ ಮೊತ್ತ ಬಿಡುಗಡೆಗೆ ಪ್ರಧಾನ ಮಂತ್ರಿಗಳು ಮತ್ತು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳ ಮೇಲೆ ಒತ್ತಡ ಹೇರಬೇಕು ಎಂದು ಸಂಸದ ಡಾ.ಸಿ. ಎನ್. ಮಂಜುನಾಥ್ ನೇತೃತ್ವದಲ್ಲಿ ಭೂಮಾಲೀಕರು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರಿಗೆ ಮನವಿ ಸಲ್ಲಿಸಿದರು.

ಎಸ್.ಟಿ.ಆರ್. ರಸ್ತೆಗಗೆ ಸ್ವಾಧೀನಗೊಂಡಿರುವ ಭೂಮಿಯ ಮಾಲೀಕರು ಬಹುತೇಕರು ರೈತರೇ ಆಗಿದ್ದಾರೆ. ಪರಿಹಾರವೂ ಇಲ್ಲದೆ, ಭೂಮಿಯೂ ಇಲ್ಲದೆ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ರೈತರ ಪರವಾಗಿ ಕೇಂದ್ರ ಸರ್ಕಾರದ ಬಳಿ ದನಿ ಎತ್ತಲು ಸಂಸದ ಮಂಜುನಾಥ್ ಮನವಿ ಮಾಡಿದರು. ಭೂಸ್ವಾಧೀನಗೊಂಡು ಧೀರ್ಘಕಾಲವಾಗಿದೆ. ಆದರೆ ಇನ್ನು ಪರಿಹಾರ ಬಿಡುಗಡೆಯಾಗಿಲ್ಲ. ಸ್ವಾಧೀನಗೊಂಡ ಭೂಮಿಗೆ ಇಷ್ಟರೊಳಗೆ ಪರಿಹಾರ ತಲುಪಬೇಕಾಗಿತ್ತು. ಆದರೆ ಇನ್ನು ಪರಿಹಾರ ಸಿಕ್ಕಿಲ್ಲ. ರೈತರ ಹಿತಾಸಕ್ತಿಯನ್ನು ಕಾಪಾಡುವ ನಿಟ್ಟಿನಲ್ಲಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಪ್ರಧಾನಿಗಳ ಗಮನಕ್ಕೆ ತರಬೇಕು ಎಂದು ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಎಚ್.ಡಿ.ದೇವೇಗೌಡರು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಿ ಶೀಘ್ರ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂಬ ಭರವಸೆ ನೀಡಿದರು.

## ಹೆದ್ದಾರಿ ಮಾರ್ಗದಲ್ಲಿ ಟಿಪ್ಪರ್‌ಗಳ ಹಾವಳಿ

ಗುಂಡ್ಲುಪೇಟೆ: ಪಟ್ಟಣದ ಹೊರವಲಯದ ಕೂತನೂರು ಗುಡ್ಡದಿಂದ ದಿನಕ್ಕೆ ನೂರಾರು ಟಿಪ್ಪರ್‌ಗಳು ಅಧಿಕ ಭಾರ ತುಂಬಿಕೊಂಡು ರಾಷ್ಟ್ರೀಯ ಹೆದ್ದಾರಿ ಮಾರ್ಗವಾಗಿ ನಂಜನಗೂಡು ಮಾರ್ಗದ ಕ್ರಷರ್‌ಗಳಿಗೆ ಅದಿಕ ಭಾರದ ಬಿಳಿಕಲ್ಲು ತುಂಬಿಕೊಂಡು ಸಾಗುತ್ತಿದ್ದು ವಾಹನ ಸವಾರರು ಪ್ರಾಣ ಕೈಯಲ್ಲಿ ಹಿಡಿದು ಸಾಗುವ ದುಸ್ಥಿತಿ ಎದುರಾಗಿದೆ ಎಂದು ಇದರ ಬಗ್ಗೆ ಆಡಲಿತ ವ್ಯವಸ್ಥೆ ಕೈಕಟ್ಟಿ ಕುಳಿತ್ತಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ.



ಅದಿಕ ಭಾರದ ವಾಹನಗಳು ರಾಜಾರೋಷವಾಗಿ ಸಂಚರಿಸುತ್ತಿದ್ದರು, ಆರ್ ಟಿಓ ಇಲಾಖೆ, ಪೊಲೀಸ್ ಇಲಾಖೆ, ಗಣಿಮತ್ತು ಭೂ ವಿಜ್ಞಾನ ಇಲಾಖೆ ಕಣ್ಣ ಮುಚ್ಚಿ ಕುಳಿತಿದೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಟಿಪ್ಪರ್‌ಗಳ ಅತಿವೇಗ ಮತ್ತು ಅಧಿಕ ಭಾರದ ಲಾರಿಗಳ ಚಾಲನೆಯದ ಅಪಘಾತವಾದರೆ ಮೇಲ್ಕಂಡ ಇಲಾಖೆಯೇ ಜವಾಬ್ದಾರಿ ಹೊರಬೇಕು ಎಂದು ತಾಲ್ಲೂಕು ವೀರಶೈವ ಮಹಾಸಭಾ ನಿರ್ದೇಶಕ ನಂದೀಶ್ ಹೆಚ್ ಎಂ ಆಕ್ರೋಶ ಹೊರಹಾಕಿದರು.

ಈ ವಿಚಾರದ ಬಗ್ಗೆ ಸಾಕಷ್ಟು ಸಾರ್ವಜನಿಕರಿಂದ ವಾಹನ ಸವಾರರಿಂದ ಆಕ್ರೋಶ ಕೇಳಿ ಬರುತಿದ್ದರು ಕೆಲವು ಟಿಪ್ಪರ್ ಗಳು ನಂಬರ್ ಪ್ಲೇಟ್ ಇಲ್ಲದಿದ್ದರೂ ನಂಬರ್ ಕಾಣಿಸದಿದ್ದರೂ ಅಧಿಕಾರಿಗಳು ಮೌನಕ್ಕೆ ಶರಣಾಗಿದ್ದಾರೆ ಕಣ್ಣಾರೆ ಅಧಿಕ ಭಾರದ ಟಿಪ್ಪರ್ ಗಳು ಓಡಾಡುತ್ತಿದ್ದರು ಸುಮ್ಮನಿರುವುದು ಯಾಕೆ ಎಂದು ಪ್ರಶ್ನಿಸಿದರು.

ಕೇರಳಕ್ಕೆ ರಾಜ್ಯದ ಸಂಪತ್ತು ಸರಾಗವಾಗಿ ನೂರಾರು ಟಿಪ್ಪರದ ಗಳ ಮೂಲಕ ಸಾಗಾಣೆಯಾಗುತಿದ್ದರು ಯಾರು ಪ್ರಶ್ನಿಸುವ ಕೆಲಸ ಮಾಡುತ್ತಿಲ್ಲ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಆರ್ ಟಿಓ ಇಲಾಖೆಯ ಮೌನವೇಕೆ ಎಂದು ಬೇಸರ ಹೊರಹಾಕಿದ್ದಾರೆ.

### ಕರ್ನಾಟಕ ಸ್ಟೇಟ್ ಟೈಲರ್ ಅಸೋಸಿಯೇಷನ್

# 3ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ

ಎಚ್.ಡಿ.ಕೋಟೆ: ಕರ್ನಾಟಕ ಸ್ಟೇಟ್ ಟೈಲರ್ ಅಸೋಸಿಯೇಷನ್ ಶ್ರೀ ವಿನಾಯಕ ಟೈಲರ್ ಗಳ ಸಂಘದ ಸಂಯುಕ್ತಾಶ್ರಯದಲ್ಲಿ ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲೋಕಿನ ಹಂಪಾಪುರ ಹಾಗೂ ಹೊಮ್ಮರಗಳ್ಳಿ ವಲಯದಲ್ಲಿ ಕರ್ನಾಟಕ ಸ್ಟೇಟ್ ಟೈಲರ್ ಅಸೋಸಿಯೇಷನ್‌ನ 3ನೇ ವರ್ಷದ ವಾರ್ಷಿಕೋತ್ಸವ ನಡೆಯಿತು.



ಹಂಪಾಪುರದ ಜಯಲಕ್ಷ್ಮಮ್ಮ ನರಸಿಂಹೇಗೌಡ ಫಂಕ್ಷನ್ ಹಾಲ್ ನಲ್ಲಿ ಆಯೋಜಿಸಲಾಗಿದ್ದ 3ನೇ ವರ್ಷದ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಕೆ.ಆರ್.ಪೇಟೆ ಕ್ಷೇತ್ರ ಸಮಿತಿಯ ತಾಲೂಕು ಅಧ್ಯಕ್ಷ ಎಚ್.ಕೆ.ಮಂಜುನಾಥ್ ಮಾತನಾಡಿ, ಕರ್ನಾಟಕ ಸ್ಟೇಟ್ ಟೈಲರ್ ಅಸೋಸಿಯೇಷನ್ ರಾಜ್ಯದಲ್ಲಿ ಒಂದೇ ನೊಂದಾಯಿತ ಸಂಘಟನೆಯಾಗಿದ್ದು, ಅಸಂಘಟಿತ ವಲಯದಲ್ಲಿ ಮೊದಲನೇ ಸಾಲಿನಲ್ಲಿರುವ ಟೈಲರ್ ವೃತ್ತಿ ಬಾಂಧವರಿಗೆ ಕಾರ್ಮಿಕ ಮಂಡಳಿಯು ಸ್ಮಾರ್ಟ್ ಕಾರ್ಡ್ ಸೌಲಭ್ಯವನ್ನು ನೀಡುತ್ತಿದೆ. ಅರ್ಹ ಕಾರ್ಮಿಕರು ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ, ಸ್ಮಾರ್ಟ್ ಕಾರ್ಡ್ ಪಡೆದುಕೊಂಡು ಮಂಡಳಿಯು ನೀಡುವ ಅಪಘಾತ ಪರಿಹಾರ, ಸಹಜ ಮರಣ ಪರಿಹಾರ ಹಾಗೂ ಅಂತ್ಯಕ್ರಿಯೆ ವೆಚ್ಚ ಸೌಲಭ್ಯವನ್ನು ಪಡೆದುಕೊಳ್ಳುವಂತೆ ಮಾಹಿತಿ ನೀಡಿದರು.

ಮೈಸೂರು ಜಿಲ್ಲಾಧ್ಯಕ್ಷ ಶಿವಕುಮಾರ್,ಕರ್ನಾಟಕ ಸ್ಟೇಟ್ ಟೈಲರ್ ಅಸೋಸಿಯೇಶನ್ ಅಧ್ಯಕ್ಷ ಸಿದ್ದೇಗೌಡ ,ಕಾರ್ಯದರ್ಶಿ ಮೂರ್ತಿ, ಕೆ.ಆರ್.ಪೇಟೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಲೋಕೇಶ್, ಮಾವುತ ಚಿತ್ರದ ಖಳನಾಯಕ ಕೈಲಾಸ್ ಕುಬೇರ್, ಪತ್ರ ಬರಹಗಾರರಾದ ನರಸಿಂಹೇಗೌಡ, ಸವಿತ ಸಮಾಜದ ಮುಖಂಡರಾದ ಕಾಂತರಾಜ ಶೆಟ್ಟಿ, ರವೀಂದ್ರ ಪ್ರಸಾದ್, ಉಪಾಧ್ಯಕ್ಷಶ್ರೀನಿವಾಸ್ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಪ್ರಭು, ಖಜಾಂಚಿ ಮಹೇಶ್. ಎಂ, ಸಂಘಟನಾ ಕಾರ್ಯದರ್ಶಿ ವೀರಭದ್ರ ನಾಯಕ,ವೆಂಕಟೇಶ್, ಟೈಲರ್ ವೃತ್ತಿ ಬಾಂಧವರು

ಸೇರಿದಂತೆಸಂಘದಪದಾಧಿಕಾರಿಗಳು,ಸದಸ್ಯರುಗಳು ಸೇರಿದಂತೆ ಹಲವರು ಇದ್ದರು.

# ಕೆಆರ್ ಎಸ್ ಹಿನ್ನೀರಿನ ಒತ್ತುವರಿ ಪ್ರದೇಶದ ತೆರವಿಗೆ ಮಹತ್ವದ ಸಭೆ



**ಶ್ರೀರಂಗಪಟ್ಟಣ :** ಕೆ.ಆರ್.ಎಸ್ ಅಣೆಕಟ್ಟಿನ ಹಿನ್ನೀರಿನ ಪ್ರದೇಶದಲ್ಲಿ ಒತ್ತುವರಿಯನ್ನು ತೆರವುಗೊಳಿಸಲು ಕೂಡಲೇ ಸರ್ವೆ ಕಾರ್ಯ ಪ್ರಾರಂಭಿಸುವ ಬಗ್ಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು

ಕೆ.ಆರ್.ಎಸ್. ಅಣೆಕಟ್ಟು ರಾಜ್ಯದ ಪ್ರಮುಖ ಜಲಸಂಪನ್ಮೂಲವಾಗಿದ್ದು, ಮೈಸೂರು, ಮಂಡ್ಯ ಸೇರಿದಂತೆ ಹಲವು ಜಿಲ್ಲೆಗಳ ಕುಡಿಯುವ ನೀರು, ಕೃಷಿ ಮತ್ತು ವಿದ್ಯುತ್ ಉತ್ಪಾದನೆಗೆ ಅವಶ್ಯಕವಾಗಿದೆ.

ಶಾಸಕ ಎ.ಬಿ ರಮೇಶ್ ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ, ಇವರು ಜಂಟಿಯಾಗಿ ಕೆ.ಆರ್ ಸಾಗರ ಅಣೆಕಟ್ಟೆಯ ಹಿನ್ನೀರಿನ ಪ್ರದೇಶಗಳಲ್ಲಿ ಒತ್ತುವರಿ ಪ್ರಕರಣಗಳು ಹೆಚ್ಚುತ್ತಿದ್ದು ಅವುಗಳನ್ನು ತೆರವುಗೊಳಿಸುವ ಸಂಬಂಧ ಉಪ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದರ ಮೇರೆಗೆ, ಉಪ ಮುಖ್ಯಮಂತ್ರಿಯವರು ಈ ಸಂಬಂಧ ಸರ್ವೆ ಮಾಡಿ ಒತ್ತುವರಿಯನ್ನು ಕೂಡಲೇ ತೆರವು ಮಾಡಿಸಿ ಗಡಿ ಕಲ್ಲುಗಳನ್ನು ನೆಟ್ಟು ವರದಿಯನ್ನು ನೀಡುವಂತೆ ಆದೇಶಿಸಿದ ಹಿನ್ನೆಲೆಯಲ್ಲಿ ಈ ಸಭೆ ನಡೆಸಲಾಗಿದೆ

**ಸಭೆಯ ನಿರ್ಧಾರಗಳು:** ಉಪವಿಭಾಗಾಧಿಕಾರಿ, ಪಾಂಡವಪುರ ಉಪವಿಭಾಗ, ಪಾಂಡವಪುರ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ.

ಅಣೆಕಟ್ಟಿನ ಹಿನ್ನೀರಿನ ಪ್ರದೇಶದಲ್ಲಿ ಅನಧಿಕೃತವಾಗಿ ನಡೆದಿರುವ ಒತ್ತುವರಿಗಳು ಜಲಾಶಯದ ಸಂಗ್ರಹ ಸಾಮರ್ಥ್ಯವನ್ನು ಕಡಿಮೆ ಮಾಡುತ್ತಿದ್ದು, ಮಳೆಗಾಲದಲ್ಲಿ ಪ್ರವಾಹದ ಅಪಾಯವನ್ನು ಹೆಚ್ಚಿಸುತ್ತಿದೆ. ಇದರಿಂದ ಸಾರ್ವಜನಿಕ ಆಸ್ತಿ ಹಾನಿಯಾಗುವ ಜೊತೆಗೆ ಪರಿಸರ ಸಮತೋಲನಕ್ಕೂ ಧಕ್ಕೆಯಾಗುತ್ತಿದೆ.

ಒತ್ತುವರಿ ಇರುವ ನಿಖರ ಸ್ಥಳಗಳು, ವ್ಯಾಪ್ತಿ ಹಾಗೂ ಸ್ವರೂಪವನ್ನು ಗುರುತಿಸಲು ತಕ್ಷಣ ಸರ್ವೆ ಕಾರ್ಯ ಪ್ರಾರಂಭಿಸುವುದು ಅತ್ಯಂತ ಅವಶ್ಯಕವಾಗಿರುವುದರಿಂದ, ಜಲಸಂಪನ್ಮೂಲ ಇಲಾಖೆ, ಭೂ ದಾಖಲೆ ಇಲಾಖೆಗಳು ಸಮನ್ವಯದೊಂದಿಗೆ ಕೂಡಲೇ ಸರ್ವೆ ಕಾರ್ಯ ಆರಂಭಿಸಿ, ಸರ್ವೆ ಮೂಲಕ ಭೂಮಿ ಮತ್ತು ಖಾಸಗಿ ಭೂಮಿಯ ಗಡಿ ರೇಖೆಗಳನ್ನು ಸ್ಪಷ್ಟಪಡಿಸಿ, ಕಾನೂನುಬಾಹಿರವಾಗಿ ಆಕ್ರಮಿಸಲಾದ ಪ್ರದೇಶಗಳನ್ನು ದಾಖಲಿಸಿ, ನಿಖರತೆಯುಳ್ಳ ವರದಿಯನ್ನು ನೀಡುವಂತೆ ಸೂಚಿಸಿದರು.

ಕೆ.ಆರ್.ಎಸ್. ಅಣೆಕಟ್ಟಿನ ಹಿನ್ನೀರಿನ ಪ್ರದೇಶವನ್ನು ಸಂರಕ್ಷಿಸುವ ಉದ್ದೇಶದಿಂದ, ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಕಾರ್ಯೋನ್ಮುಖರಾಗುವಂತೆ ತಿಳಿಸಿದರು. ಸದರಿ ಸಭೆಯಲ್ಲಿ ಭೂದಾಖಲೆಗಳ ಉಪ ನಿರ್ದೇಶಕರು, ಉಪವಿಭಾಗಾಧಿಕಾರಿ, ಪಾಂಡವಪುರ ಉಪವಿಭಾಗ, ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ನಿಯಮಿತ, ತಹಶೀಲ್ದಾರ್, ಶ್ರೀರಂಗಪಟ್ಟಣ, ಪಾಂಡವಪುರ ಹಾಗೂ ಕೆ.ಆರ್.ಪೇಟೆ ತಾಲ್ಲೂಕುರವರು ಹಾಜರಿದ್ದರು.

## ತರಬೇತಿ ಕಾರ್ಯಗಾರ

**ಮಡಿಕೇರಿ:** ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿ?ತ್ (ಕೆಸಿಟಿಯು), ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ (ಟೆಕ್ಸಾಕ್), ಬೆಂಗಳೂರು, ಜಿಲ್ಲಾ ಕೈಗಾರಿಕಾ ಕೇಂದ್ರ, ಮಡಿಕೇರಿ, ಇವರ ಸಂಯುಕ್ತ ಆಶ್ರಯದಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ ರೈಸಿಂಗ್ ಅಂಡ್ ಎಕ್ಸಲರೇಟಿಂಗ್ ಎಂಎಸ್‌ಎಂಇ ಫರ್‌ಫಾರ್ಮೆನ್ಸ್ (ರ್‍ಯಾಂಪ್) ರಡಿ ಜೀರೋ ಡಿಫೆಕ್ಟ್ ಅಂಡ್ ಜೀರೋ ಇಫೆಕ್ಟ್ ಮತ್ತು ಎಲ್‌ಇಎಎನ್ ಯೋಜನೆ ಕುರಿತು ಕುಶಾಲನಗರದ ಪಾಳ್ಯಂ ಎಮರಾಲ್ಡ್ ಸಭಾಂಗಣದಲ್ಲಿ ಎಂಎಸ್‌ಎಂಇ ಉದ್ದಿಮೆದಾರರಿಗೆ ಒಂದು ದಿನದ ಅರಿವು ಕಾರ್ಯಾಗಾರ ಬುಧವಾರ ನಡೆಯಿತು.

ಕಾರ್ಯಾಗಾರವನ್ನು ಕುಶಾಲನಗರ ಕೂಡ್ಲೂರು ಕೈಗಾರಿಕಾ ಪ್ರದೇಶದ ಉದ್ದಿಮೆದಾರರ ಸಂಘದ ಅಧ್ಯಕ್ಷರಾದ ಪ್ರವೀಣ್ ಎ.ಎನ್. ಅವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಡಿಕೇರಿ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರಾದ ಬಿ.ಆರ್. ನಾಗೇಂದ್ರಪ್ರಸಾದ್, ಅವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಬೆಂಗಳೂರು ಟೆಕ್ಸಾಕ್ ಮುಖ್ಯ ಸಲಹೆಗಾರರು ಹಾಗೂ ಸಿಇಓ ಸಿದ್ದರಾಜು ಅವರು ರ್‍ಯಾಂಪ್ ಯೋಜನೆಯ ಬಗ್ಗೆ ಪ್ರಸ್ತಾವಿಕ ಭಾ?ಣವನ್ನು ಮಾಡಿದರು.

ಸಭೆಯಲ್ಲಿ ಮುಖ್ಯ ಅಥಿತಿಗಳಾಗಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರಾದ ಕೆ. ಹನುಮಂತರಾಯ, ಲೀಡ್ ಬ್ಯಾಂಕ್ ಮುಖ್ಯ ವ್ಯವಸ್ಥಾಪಕರಾದ ಗಂಗಾಧರ್ ನಾಯಕ್ ಪಿ., ಕೆ.ಎಸ್. ಎಫ್.ಸಿ, ಅಧಿಕಾರಿಗಳು, ಜಿಲ್ಲಾ ಕೈಗಾರಿಕಾ ಕೇಂದ್ರದ ಉಪ ನಿರ್ದೇಶಕರಾದ ಸಿ.ಎನ್.ರಘು ಉಪಸ್ಥಿತರಿದ್ದರು. ಜೀರೋ ಡಿಫೆಕ್ಟ್ ಅಂಡ್ ಜೀರೋ ಇಫೆಕ್ಟ್ ಮತ್ತು ಎಲ್‌ಇಎಎನ್ ಯೋಜನೆಯ ಕಾರ್ಯಾಗಾರದ ಬಗ್ಗೆ ಮಾನವ ಸಂಪನ್ಮೂಲ ವ್ಯಕ್ತಿಯಾಗಿ ಬೆಂಗಳೂರು ಕ್ರಿಯಟಿವ್ ಇಂಪೆಕ್ಸ್ ಶ್ರೀಕಾಂತ್ ಬಿ. ವಿವರವಾದ ತಾಂತ್ರಿಕ ಉಪನ್ಯಾಸ ನೀಡಿದರು.

## ನಗರಸಭೆ ವ್ಯಾಪ್ತಿಯ ಆಸ್ತಿಯ ಮಾಲೀಕರ ಗಮನಕ್ಕೆ ಇ-ಖಾತೆ ಪಡೆದುಕೊಳ್ಳಲು ಮನವಿ

**ಮಡಿಕೇರಿ:** ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಪ್ರತಿ ಆಸ್ತಿಯ ಇ-ಖಾತಾ, ಬಿ-ಖಾತಾ ಸೃಜಿಸುವುದು ಸರ್ಕಾರ ಕಡ್ಡಾಯಗೊಳಿಸಿದಂತೆ ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ಪ್ರತಿ ಆಸ್ತಿಯ ಮಾಲೀಕರುಗಳು ಆಸ್ತಿಯ ಮಾಲೀಕತ್ವದ ದಾಖಲೆಗಳನ್ನು ನಗರಸಭೆಗೆ ಸಲ್ಲಿಸಿ ಇ-ಖಾತಾ ಪಡೆದುಕೊಳ್ಳಲು ಪತ್ರಿಕಾ ಪ್ರಕಟಣೆ, ಆಟೋ ಪ್ರಚಾರ, ನಗರದ ಪ್ರಮುಖ ಸ್ಥಳಗಳಲ್ಲಿ ಇ-ಖಾತಾ, ಬಿ-ಖಾತಾ ಪಡೆಯುವ ಬಗ್ಗೆ ಮತ್ತು ಇ-ಖಾತಾ, ಬಿ-ಖಾತಾ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ವಿವರ ಇರುವ ಫ್ಲೇಕ್ಸ್‌ಗಳ ಅಳವಡಿಕೆ ಮತ್ತು ಸ್ಥಳೀಯ ಚಾನೆಲ್‌ಗಳಲ್ಲಿ ಸುದ್ದಿಯಾಗಿ ಪ್ರಚಾರ ಹಾಗೂ ನಗರಸಭೆ ಸಿಬ್ಬಂದಿಗಳು ಪ್ರತಿ ವಾರ್ಡ್, ಪ್ರತಿ ಮನೆಗೆ ಖುದ್ದಾಗಿ ಭೇಟಿ ನೀಡಿ ಇ-ಖಾತಾ ಮಾಡಿಸಿಕೊಳ್ಳದೆ ಇರುವವರಿಗೆ ದಾಖಲೆ ನೀಡಿ ಇ-ಖಾತಾ ಪಡೆಯಲು ತಿಳಿಸಿ ದಾಖಲೆ ನೀಡಿದವರಿಗೆ ಇ-ಖಾತಾ ಸೃಜಿಸಿ ನೀಡುವ ಕೆಲಸವನ್ನು ನಗರಸಭೆಯಿಂದ ಕೈಗೊಂಡಿದ್ದಾರೆ.

ಮಡಿಕೇರಿ ನಗರ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳಲ್ಲಿ ಇನ್ನೂ ಕೂಡ 3036 ಆಸ್ತಿಯ ಮಾಲೀಕರುಗಳು ಇ-ಖಾತಾ, ಬಿ-ಖಾತಾ ಪಡೆಯಲು ಅವಶ್ಯವಿರುವ ದಾಖಲೆಗಳನ್ನು ಆಸ್ತಿತೆರಿಗೆ ಪಾವತಿಯ ವಿವರದೊಂದಿಗೆ ನಗರಸಭೆಗೆ ಸಲ್ಲಿಸದೆ ಇರುವುದರಿಂದ ಶೇ.100 ರಷ್ಟು ಪ್ರಗತಿ ಸಾಧಿಸಲು ಸಾಧ್ಯವಾಗದೇ ಇರುತ್ತದೆ.

ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸ್ವತ್ತಿನ ಮಾಲೀಕರುಗಳು, ಇ-ಖಾತಾ ಪಡೆಯದೆ ಇರುವವರು ಇ-ಖಾತಾ, ಬಿ-ಖಾತಾ ಪಡೆಯಲು ಸರ್ಕಾರ ಹೊಸದಾಗಿ ತಂತ್ರಾಂಶ ಚಾಲನೆಗೆ ತಂದಿದೆ. ಅದರಂತೆ ಇ-ಖಾತಾ ಪಡೆಯದ ಸ್ವತ್ತಿನ ಮಾಲೀಕರು ಜಚಿಭೆಣಖು. ಇಚಿಡಿಟಚಿಣಚಿಇಚಿ.ರಡಿತ.ಟಿ ವೆಬ್‌ಸೈಟ್‌ಗೆ ಹೋಗಿ ಸಿಟಿಜನ್ ಲಾಗಿನ್‌ನಲ್ಲಿ ತಮ್ಮ ಮೊಬೈಲ್ ನಂಬರ್ ಹಾಕಿ, ಇ-ಖಾತಾ, ಬಿ-ಖಾತಾ ಪಡೆಯಲು ಅವಶ್ಯವಿರುವ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಮುಂದುವರಿಸಿದಲ್ಲಿ ನಗರಸಭೆಯಿಂದ ನಿಯಮನುಸಾರ ದಾಖಲೆ ಅನುಸಾರ ಇ-ಖಾತಾ, ಬಿ-ಖಾತಾ ಸೃಜಿಸಿ ನೀಡಲಾಗುವ ವ್ಯವಸ್ಥೆ ಜಾರಿಯಲ್ಲಿದ್ದು, ಈ ಕ್ರಮವನ್ನು ತಾವೆ ಕೈಗೊಳ್ಳಬಹುದಾಗಿದೆ.

ಇಲ್ಲದಿದ್ದಲ್ಲಿ ಇ-ಖಾತಾ, ಬಿ-ಖಾತಾಕ್ಕೆ ಅವಶ್ಯವಿರುವ ದಾಖಲೆಗಳನ್ನು ನಗರಸಭೆಗೆ ಸಲ್ಲಿಸಬೇಕು. ನಗರಸಭೆ ದಾಖಲೆ ಅಪ್‌ಲೋಡ್ ಮಾಡಿ ನಿಮ್ಮಿಂದ ಒಟಿಪಿ ಪಡೆದು ಮುಂದಿನ ಕ್ರಮವಹಿಸಿ ಇ-ಖಾತಾ ಸೃಜಿಸಿ ಕೊಡಲಾಗುವುದು.

ಸ್ವತ್ತಿನ ದಾಖಲೆ ತಂತ್ರಾಂಶದ ಮೂಲಕ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳುವಿಕೆ, ಆಸ್ತಿ ತೆರಿಗೆ ಪಾವತಿಗೆ ಕಚೇರಿಗೆ ಬಾರದೇ ತಾವೇ ಲೆಕ್ಕಚಾರ ಮಾಡಿ ಪಾವತಿಸುವ ಸರಳ ವಿಧಾನ ಮಾಡಲು ಎಲ್ಲಾ ಆಸ್ತಿಗಳ ಇ-ಖಾತಾ ಮಾಡುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಇ-ಖಾತಾ ಪಡೆಯದೇ ಇರುವವರು ನಗರಸಭೆಯಿಮದ ಇ-ಖಾತಾಕ್ಕೆ ದಾಖಲೆ ಸಲ್ಲಿಸಿ ಕಡ್ಡಾಯವಾಗಿ ಪಡೆದುಕೊಳ್ಳುವಂತೆ ನಗರಸಭೆ ಪೌರಾಯುಕ್ತರಾದ ಎಚ್.ಆರ್.ರಮೇಶ್ ಅವರು ಕೋರಿದ್ದಾರೆ.

## ಜ.12 ರಂದು ವಿಶೇಷಚೇತನ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಕ್ರೀಡಾಕೂಟ

**ಮಡಿಕೇರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ವತಿಯಿಂದ 2025-26ನೇ ಸಾಲಿನ ಕೊಡಗು ಜಿಲ್ಲಾ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ 14 ಮತ್ತು 17 ವರ್ಷದೊಳಗಿನ ಜಿಲ್ಲಾ ಮಟ್ಟದ ವಿಶೇಷಚೇತನ ವಿದ್ಯಾರ್ಥಿಗಳ ಕ್ರೀಡಾಕೂಟದ ಉದ್ಘಾಟನಾ ಸಮಾರಂಭವು ಜನವರಿ, 12 ರಂದು ಬೆಳಗ್ಗೆ 10.30 ಗಂಟೆಗೆ ಕುಶಾಲನಗರ ಸರ್ಕಾರಿ ಪದವಿ ಪೂರ್ವ ಕಾಲೇಜಿ(ಪ್ರೌಢ ಶಾಲಾ ವಿಭಾಗ)ನಲ್ಲಿ ನಡೆಯಲಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಬಸವರಾಜು ಅವರು ತಿಳಿಸಿದ್ದಾರೆ.

## ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ



**ಮಡಿಕೇರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ವತಿಯಿಂದ 2025-26ನೇ ಸಾಲಿನ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಶಾಲಾ/ ಕಾಲೇಜುಗಳ ಕೊಡಗು ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮವು ಜನವರಿ, 13 ರಂದು ಬೆಳಗ್ಗೆ 10 ಗಂಟೆಗೆ ಕುಶಾಲನಗರ ಸರ್ಕಾರಿ ಪದವಿ ಪೂರ್ವ ಕಾಲೇಜು(ಪ್ರೌಢ ಶಾಲಾ ವಿಭಾಗ)ನಲ್ಲಿ ನಡೆಯಲಿದೆ. ಗಣ್ಯರು ಪಾಲ್ಗೊಳ್ಳಲಿದ್ದಾರೆ.

## 'ರಾಷ್ಟ್ರೀಯ ಇಂಧನ ಸಂರಕ್ಷಣಾ ಸಪ್ತಾಹ

# ಇಂಧನ ಸಂರಕ್ಷಣಾ ದಿನಾಚರಣೆ

**ಮಂಡ್ಯ:** ತಾಲ್ಲೂಕಿನ ಸಿದ್ದಯ್ಯನ ಕೊಪ್ಪಲು ಗೇಟ್ ಸುಂಡಹಳ್ಳಿ ಯ ಕಾವೇರಿ ಇನ್ಸಿಟ್ಯೂಟ್ ಆಫ್ ಟೇಕ್ನಾಲ ಜಿ ಮತ್ತು ಬೆಂಗಳೂರಿನ ಕೆ. ಆರ್. ಡಿ. ಇ. ಎಲ್ ನ ಸಹಯೋಗದಲ್ಲಿ ಬುಧವಾರ 'ರಾಷ್ಟ್ರೀಯ ಇಂಧನ ಸಂರಕ್ಷಣಾ ಸಪ್ತಹ ಮತ್ತು ಇಂಧನ ಸಂರಕ್ಷಣಾ ದಿನಾಚರಣೆ 2025' ಆಚರಿಸಲಾಯಿತು

ಮುಖ್ಯ ಅತಿಥಿಗಳಾಗಿ ಬ್ಯುರೋ ಆಫ್ ಎನರ್ಜಿ ಎಫಿಸಿಎನ್ಸಿಯ ಎನರ್ಜಿ ಆಡಿಟರ್ ಶಶಿಧರ್ ಧಾರೇಶ್ವರ್ ರವರು ಭಾಗವಹಿಸಿದ್ದರು.

ಶಶಿಧರ್ ಧಾರೇಶ್ವರ್ ರವರು ಉದ್ಘಾಟನಾ ಭಾಷಣ ಮಾಡಿ ಇಂಧನ ಸಂರಕ್ಷಣೆ ಮತ್ತು ಎನರ್ಜಿ ಎಫಿಸಿಎನ್ಸಿಗಳಿಗಿರುವ ವ್ಯತ್ಯಾಸವನ್ನು ವಿವರಿಸಿದರು.

ಇಂಧನ ಸಂರಕ್ಷಣೆ ಬಗ್ಗೆ ಎಲ್ಲರಿಗೂ ತಿಳಿದಿರಬೇಕು ಇಂಧನ ಪೋಲು ಮಾಡಬಾರದು ಎಂದು ತಿಳಿಸಿದರು.

ಗ್ಲೋಬಲ್ ವಾರ್ಮಿನ್ಸ್ ಗೆ ಕಾರಣ ವಾದ ಇಂಗಾಲದ ಡೈ ಆಕ್ಸೈಡ್ ನ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಇಂಧನ ಉಳಿತಾಯದ ಪ್ರಾಮುಖ್ಯತೆಯನ್ನು ವಿವರಿಸಿದರು. ಎಲೆಕ್ಟ್ರಿಕಲ್ ಮತ್ತು ಫಾಸಿಲ್ ಇಂಧನ ಉಳಿತಾಯ ಮಾಡುವುದು ನವಿಕರಿಸಬಹುದಾದ ಇಂಧನ ಗಳ ಪಾತ್ರ ಮತ್ತು ಪ್ರಾಮುಖ್ಯತೆ ಯ ಬಗ್ಗೆ ವಿವರಿಸಿದರು.ಎಲೆಕ್ಟ್ರನಿಕ್ ತ್ಯಾಜ್ಯಗಳನ್ನು ವಿಲೇವಾರಿ ಮಾಡುವ ವಿಧಾನಗಳ ಬಗ್ಗೆ ತಿಳಿಸಿದರು. ಪ್ಲಾಸ್ಟಿಕ್ ನ ದುಪರಿಣಾಮಗಳನ್ನು ತಿಳಿಸಿಕೊಟ್ಟರು.

ವೇಸ್ಟ್ ಮೇ ನೇಜ್ಮೆಂಟ್ ನ ಪ್ರಾಮುಖ್ಯತೆಯನ್ನು ಹೇಳಿದರು. ವಿದ್ಯಾರ್ಥಿಗಳು ಇಂಧನ ಸಂರಕ್ಷಣೆಗಾಗಿ ಕಿರುಕಾಣಿಕೆ ನೀಡಬೇಕು. ಸಮಾಜದಲ್ಲಿ ಜನರಿಗೆ ತಿಳುವಳಿಕೆ ನೀಡಬೇಕೆಂದು ಹೇಳಿದರು. ಸಿ. ಐ. ಟಿ ಕಾಲೇ ಜಿನ ಪ್ರಾಶುಪಾಲರಾದ ಡಾ. ಶ್ರೀಕಂಠಪ್ಪ ರವರು ಮಾತನಾಡಿ ವಿಶ್ವ ದಲ್ಲಿ ಇಂಧನ ನಿಯಂತ್ರಣ ಕ್ಕಾಗಿ ಯುದ್ಧ ಗಳು ನಡೆಯುತ್ತಿವೆ. ಫಾಸಿಲ್ ಇಂಧನ ಗಳು ಕ್ಷೀ ಣಿಸುತ್ತಿರುವುದರಿಂದ ಆಸಾಂಪ್ರದಾಯಕ ಇಂಧನ ಗಳು ಪ್ರಾಮುಖ್ಯತೆ ಯನ್ನು ಪಡೆದುಕೊಳ್ಳುತ್ತಿವೆ. ವಿದ್ಯಾರ್ಥಿಗಳಿಗೆ ಇಂಧನ ಉಳಿತಾಯ ಮಾಡುವಂತೆ ಹೇಳಿದರು.

ಸಿ. ಐ. ಆರ್. ಟಿ ಕಾರ್ಯದರ್ಶಿ ಡಾ.ಗಂಗಾಧರಗೌಡ ರವರು ಮಾತನಾಡಿ ಒಂದು ಲೀಟರ್ ಪೆಟ್ರೋಲ್ ಅನ್ನು ನಂದಿಸಿದಾಗ 15 ಕೆ. ಜಿ ಗಾಳಿ ಯನ್ನು ಸುಡುತ್ತೇವೆ. ಆ ಗಾಳಿಯಲ್ಲಿ 3.5 ಕೆ. ಜಿ ಆಮ್ಲಜನಕ ಇರುತ್ತದೆ. ಇದನ್ನು ಇಂಗಾಲದ ಡೈ ಆ ಕ್ಸ ಯ್ ಡ್ ಆಗಿ ಪಾರಿವರ್ತಿಸುತ್ತೇವೆ. ಇದರಿಂದ. ಪರಿಸರ ಮಾಲಿನ್ಯ ವಾಗುತ್ತದೆ. ಹೀಗೆ ಇಂಧನ ಬಳಸಿದರೆ ಮುಂದಿನ ಪೀಳಿಗೆಗೆ ಇಂಧನವೇ ಇರುವುದಿಲ್ಲ ಎಂದರು ಇಂದಿನ ದಿನಗಳಲ್ಲಿ ಇಂಧನ ಸಂರಕ್ಷಣೆ ಯ ಬಗ್ಗೆ ಅರಿವು ಮೂಡಿಸುವುದು ತುಂಬಾ ಅಗತ್ಯ ವಾಗಿದೆ ಎಂದು ತಿಳಿಸಿ ದರು. ಸಿ. ಐ. ಆರ್. ಟಿ ಅಧ್ಯಕ್ಷ ರಾದ ಡಾ. ಸಂಗಮೇಶ್ವರ ರವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಅತಿ ಮುಖ್ಯ ವಾದ ಕಾರ್ಯಕ್ರಮ ವನ್ನು ಈ ದಿನ ಆಯೋಜಿಸಲಾಗಿದೆ. ನಾನು ಎಲ್ಲ ವಿದ್ಯಾರ್ಥಿಗಳಿಗೆ ಈ ಬಗ್ಗೆ ಕಾರ್ಯತತ್ಪರರಾಗಬೇಕು. ಅತಿ ಕಡಿಮೆ ಇಂಧನ ಬಳಸಬೇಕು ಮತ್ತು ಈ ಸಂಬಂಧ ಸಂಪನ್ಮೂಲ ವ್ಯಕ್ತಿ ಗಳಿಂದ ಒಳ್ಳೆಯ ಐಡಿಯಾ ಗಳನ್ನು ಪಡೆದು ಈ ನಿಟ್ಟಿನಲ್ಲಿ ಇಂಧನ ಸಂರಕ್ಷಣೆ ಮಾಡಬೇಕೆಂದು ತಿಳಿಸಿದರು.

ಕಾರ್ಯಕ್ರಮ ದಲ್ಲಿ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಸಿದ್ದರಾಜು ರವರು ಉಪಸ್ಥಿತರಿದ್ದರು.



## ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನ ನೂತನ ಅಧ್ಯಕ್ಷರಾಗಿ ಆಯ್ಕೆ

**ಕೆ.ಆರ್.ನಗರ:** ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ದೊಡ್ಡಸ್ವಾಮೇಗೌಡರನ್ನು ವಿಶ್ವ ಕರ್ಮ ಸಮಾಜದ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಪುಟ್ಟಸ್ವಾಮಾಚಾರ್, ಪುಟ್ಟಣ್ಣಯ್ಯ, ಚಂದ್ರಾ ಚಾರ್, ಕ್ಷೇತ್ರಪಾಲ, ವೇದಾಂತಚಾರ್, ಶಂಕರಚಾರ್, ಕೆ.ಎನ್.ತುಳಸಿಕುಮಾರ್, ಬಸವರಾಜು, ಸ್ವಾಮಾಚಾರ್, ಕುಮಾರಚಾರ್ ಇದ್ದರು.



## ನೂತನ ದಿನದರ್ಶಿಕೆ ಬಿಡುಗಡೆ



**ಮೈಸೂರು:** ನಗರದ ಎನ್.ಆರ್. ಮೊಹಲ್ಲಾದಲ್ಲಿನ ಉಪ್ಪಾರ ಸಂಘವು ಹೊರತಂದಿರುವ 2026ನೇ ಸಾಲಿನ ನೂತನ ದಿನದರ್ಶಿಕೆಯನ್ನು ನರಸಿಂಹರಾಜ ಕ್ಷೇತ್ರದ ಶಾಸಕರಾದ ತನ್ವೀರ್ ಸೇಠ್ ಅವರು ಅವರ ನಿವಾಸದಲ್ಲಿ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಉದಯ್ ಕುಮಾರ್, ಮೈಸೂರು ನಗರ ಕಾಂಗ್ರೆಸ್ ಮುಖಂಡ ಎಂ.ಎನ್.ಮಹದೇವ್, ಸಂಘದ ಗೌರವಾಧ್ಯಕ್ಷ ನಾಗರಾಜು, ಅಧ್ಯಕ್ಷ ಸಿ.ಗೋವಿಂದರಾಜು, ಉಪಾಧ್ಯಕ್ಷ ಕಾರಾಪುರ ಮಹೇಶ್, ಕಾರ್ಯದರ್ಶಿ ಸಿದ್ದರಾಜು, ಸಹಕಾರ್ಯದರ್ಶಿ ಮಾಸ್ಟರ್ ಶಿವು, ಖಜಾಂಚಿ ಸಿದ್ದರಾಜುಗೊಂಬೆ, ನಿರ್ದೇಶಕ ಪಾಪಣ್ಣ, ಯಜಮಾನರುಗಳಾದ ಎಂ.ಮಹದೇವ್, ನಾಗಣ್ಣ, ಕೆಸ್ತೂರು ಮಹದೇವ್ ಸೇರಿದಂತೆ ಹಲವರು ಇದ್ದರು.

# ಭಗವದ್ಗೀತೆಯಲ್ಲಿ ಮನೋವೈಜ್ಞಾನಿಕತೆ



| ಮಾಧುರಿ ದೇಶಪಾಂಡೆ, ಬೆಂಗಳೂರು

ಭಗವದ್ಗೀತೆ ಮನುಕುಲದ ಅತೀ ಹೆಚ್ಚು ಪ್ರಚಲಿತವಿರುವ ಉತ್ತಮ ಆಧ್ಯಾತ್ಮ ರಚನೆಯಾಗಿದೆ. ಮಹಾಭಾರತದ ಯುದ್ಧದ ಸಂದರ್ಭದಲ್ಲಿ ತನ್ನವರನ್ನು ನೋಡಿ ಮನಸ್ಸನ್ನು ಚಂಚಲ ಮಾಡಿಕೊಂಡು ಯುದ್ಧವನ್ನು ಮಾಡುವುದನ್ನು ಬಿಡಬೇಕು ಎಂಬ ಮನಸ್ಸಿನ ಗ್ಲಾನಿಯಲ್ಲಿದ್ದ ಅರ್ಜುನನಿಗೆ ಶ್ರೀಕೃಷ್ಣ ಪರಮಾತ್ಮನ ಉಪದೇಶವೇ ಈ ಗ್ರಂಥವಾಗಿದೆ. ಪ್ರಪಂಚದ ಮೊದಲ ಮನೋವಿಜ್ಞಾನಿ ಶ್ರೀಕೃಷ್ಣ ಪರಮಾತ್ಮ ಅಅವನು ಮನುಕುಲಕ್ಕೆ ಮಾರ್ಗದರ್ಶನ ಮಾಡಿ ಆತ್ಮ, ಪರಮಾತ್ಮ, ಕರ್ಮ, ಜ್ಞಾನ, ಭಕ್ತಿ ಮೊದಲಾದ ಜೀವನಕ್ಕೆ ಅತೀ ಅವಶ್ಯವಿರುವ ವಿಚಾರಗಳನ್ನು ಉಪದೇಶಿಸಿ ಯಾವ ಸಂದರ್ಭದಲ್ಲಿ ಮೋಹಕ್ಕೆ ಒಳಗಾಗಬಾರದು ಮನಸ್ಸನ್ನು ಹೇಗೆ ಸ್ಥಿತಪ್ರಜ್ಞತೆಯನ್ನು ಕಾಪಾಡಿಕೊಂಡು ಮನಸಿನ ಗೊಂದಲಗಳನ್ನು ಪರಿಹರಿಸಿಕೊಳ್ಳಬೇಕು ಎಂಬುದು ತನ್ನ ಉಪದೇಶದಿಂದ ಮೊದಲ ಮನೋವಿಜ್ಞಾನಿಯಾಗಿದ್ದಾನೆ. ಮನುಷ್ಯನ ಮನಸ್ಸು ಅತೀ ಸೂಕ್ಷ್ಮ ಮತ್ತು ಗೊಂದಲಗಳ ಗೂಡು ಅವನು ಎಷ್ಟೇ ಬುದ್ದಿವಂತನಗಿರಲಿ ಅಥವಾ ಶೂರವೀರನಿರಲಿ ಕೆಲವು ಸಂದರ್ಭಗಳಲ್ಲಿ ಮಾನಸಿಕ ಒತ್ತಡ ಗೊಂದಲ ಮತ್ತು ಇಬ್ಬಂದಿಗೆ ಒಳಗಾಗುತ್ತಾನೆ. ಅಂತದದ್ದೇ ಸಂದರ್ಭ ಶ್ರೀಕೃಷ್ಣ ಪರಮಾತ್ಮನ ಸ್ನೇಹಿತ ಭಾವನಾದ ಅರ್ಜುನನಿಗೆ ಬಂದೊದಗಿದಾಗ ಅವನಿಗೆ ಸರಿಯಾದ ಮಾರ್ಗ ತೋರಿಸಿ ತನ್ನ ಕರ್ತವ್ಯವನ್ನು ಮಾಡಲು ಪ್ರೇರೇಪಿಸಿದ ಶ್ರೀ ಕೃಷ್ಣ ಪರಮಾತ್ಮ ಮನುಕುಲದ ಮೊದಲ ಮನೋವೈದ್ಯನಾಗಿದ್ದಾನೆ.

ಅರ್ಜುನನ ಪರಿಸ್ಥಿತಿ ಇಂದಿಗೂ ಕೂಡ ಬಹುತೇಕ ಜನರಲ್ಲಿ ಬರುತ್ತದೆ. ಸಂಬಂಧಗಳ ನಡುವೆ ಕೆಲಸ ಮತ್ತು ಸಂಬಂಧಗಳ ನಡುವೆ, ನ್ಯಾಯ ಅನ್ಯಾಯ , ನೀತಿ ಅನೀತಿಗಳ ನಡುವೆ ಆಯ್ಕೆ ಬಂದಾಗ ಯಾರನ್ನು ಅಥವಾ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಹಾಗೂ ಯಾವ ವಿಷಯದ ಆಧಾರದ ಮೇಲೆ ನಮ್ಮ ಆಯ್ಕೆಯಾಗಿರಬೇಕೆಂಬುದನ್ನು ಭಗವದ್ಗೀತೆ ಬಹಳ ವಿಷದವಾಗಿ ನಮಗೆ ತಿಳಿಸುತ್ತದೆ.



ಗೊಂದಲದ ಪರಿಸ್ಥಿತಿಗಳಲ್ಲಿ ಮನುಷ್ಯನು ಆತ್ಮವಿಶ್ವಾಸವನ್ನು ಮರೆತು, ಎದುರಿಗೆ ಬಂದ ಸಮಸ್ಯೆಯ ಬಗಗೆ ಭಾವನಾತ್ಮಕವಾಗಿ ಅಥವಾ ಮೋಹದ ದೃಷ್ಠಿಯಿಂದ ನೋಡಿದಾಗ ಸಮಸ್ಯೆಯನ್ನು ನೀಡುತ್ತಿರುವವರು ನ್ಮಮರೇ ಆಗಿರುತ್ತಾರೆ. ಆದರೆ ನ್ಯಾಯ ಮತ್ತು ಧರ್ಮದ ಪರವಾಗಿ ನಿಂತು ನಮ್ಮ ಕರ್ತವ್ಯ ಮಾಡಬೇಕು ಎಂಬುದೇ ಭಗವದ್ಗೀತೆಯ ಸಾರವಾಗಿದ್ದು ಮನುಕುಲಕ್ಕೆ ಪರಮಾತ್ಮ ನೀಡಿದ ಉತ್ತಮ ಸಂದೇಶ ಹಾಗೂ ಮಾರ್ಗದರ್ಶಕ ಗ್ರಂಥವಾಗಿದೆ.

ಭಗವದ್ಗೀತೆಯಲ್ಲಿ 18 ಅಧ್ಯಾಯಗಳು ಮತ್ತು 700 ಶ್ಲೋಕಗಳಿವೆ. ಇಲ್ಲಿ ಬಂಧುತ್ವದ ಮೋಹ ಮತ್ತು ಗೊಂದಲದಲ್ಲಿ ಮುಳುಗಿದ್ದ ಅರ್ಜುನನನ್ನು ಅವನ ಆತ್ಮ ವಿಶ್ವಾಸ ಹಾಗೂ ಆತ್ಮತತ್ವವನ್ನು ಎಚ್ಚರಿಸುವ ಮಹಾನ್ ಕಾರ್ಯವನ್ನು ಯುದ್ಧ ಭೂಮಿಯ ನಡುವೆ ಪರಮಾತ್ಮ ಮಾಡುತ್ತಾನೆ. ಫಲಾಫಲಗಳ ಅಪೇಕ್ಷೆ ಮಾಡದೇ ನ್ಮಮ ಕರ್ತವ್ಯವನ್ನು ಮಾಡಬೇಕು ಎನ್ನುವುದು ಭಗವದ್ಗೀತೆಯ ಮತ್ತೊಂದು ಮಹತ್ವದ ಸಂದೇಶವಾಗಿದ್ದು ಇದು ಕೂಡ ನಮ್ಮ ಮನಸ್ಸನ್ನು ಸದೃಢವಾಗಿರುವಂತೆ .ಆಸೆ ಮೋಹ ಮತ್ತು ಫಲಾಪೇಕ್ಷೆಗಳು ಮನಸ್ಸಿನ ತುಮುಲಗಳಿಗೆ ಕಾರಣ ಸಮಚಿತ್ತದಿಂದ ಇರುವಂತೆ ನಮ್ಮ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡರೆ ನಮಗೇ ಉಪಯೋಗ ಎಂಬ ಮಾತನನ್ನು ಸ್ಪಷ್ಟವಾಗಿ ತಿಳಿಸುತ್ತಾರೆ. ಮನುಷ್ಯನಾಗಿ ಹುಟ್ಟಿದ ಮೇಲೆ ಕರ್ಮವನ್ನು ಮಾಡಲೇ ಬೇಕು, ಯಾವುದೇ ಕೆಲಸ ಮಾಡುವಾಗ ಆ ಕೆಲಸಗಳ ಬಗೆಗೆ ಪರಮಾತ್ಮನ ಬಗೆಗೆ ಸರಿಯಾದ ಜ್ಞಾನ ಹೊಂದಿದ್ದೇ ಮಾಡಬೇಕು. ಜ್ಞಾನದಿಂದ ಮನುಷ್ಯನಲ್ಲಿ ವಿವೇಚನಾ ಶಕ್ತಿಯು ಬರುತ್ತದೆ. ವಿವೇಕದಿಂದ ಮಾಡಿದ ಕೆಲಸಗಳು ಫಲಪ್ರದವೂ ಜಯಶಾಲಿಯೂ ಆಗಿರುತ್ತವೆ. ಕರ್ಮವನ್ನು ಮಾಡಬೇಕು ಆದರೆ ಫಲಾಪೇಕ್ಷೆಯನ್ನು ಬಿಟ್ಟು ತ್ಯಾಗಮಯಿಯಾಗಿರಬೇಕು. ಎಲ್ಲ ಸಮಯದಲ್ಲೂ ನಾವು ಮಾಡಿದ ಕೆಲಸದ ಫಲವನ್ನು ನಾವೇ ಉಣ್ಣಬೇಕೆಂದುದು ಇರುವುದಿಲ್ಲ ತ್ಯಾಗಕ್ಕೂ ಮಹತ್ವವಿದೆ ಎಂಬಹುದನ್ನು ಪರಮಾತ್ಮನು ತಿಳಿಸಿದ್ದಾನೆ.

ಆತ್ಮತತ್ವ ಎಂದರೆ ಮನುಷ್ಯ ಜೀವದ ಉದ್ದೇಶ ಏನು ಯಾವ ಕಾರಣಕ್ಕಾಗಿ ನಮ್ಮ ಜನ್ಮ ಆಗಿದೆ ಎಂಬುದನ್ನು ಅರಿತು ಅದರ ಸಾರ್ಥಕತೆಗಾಗಿ ನಾವು ಬದುಕಬೇಕೆಂದು ಪರಮಾತ್ಮ ಹೇಳುತ್ತಾನೆ. ಪಡೆದ ಜ್ಞಾನದಿಂದ ಯಾರೆಲ್ಲ ಪರಮಾತ್ಮನನ್ನು ಸೇರಲು ಅವನ ಶರಣು ಹೋಗುತ್ತಾರೆಯೋ ಅವರಿಗೆ ಜೀವನದ ಎಲ್ಲ ಅನುಭವಗಳು ಮತ್ತು ಉತ್ತಮ ಫಲಗಳು ದೊರೆಯುತ್ತವೆ. ಎಂಬುದನ್ನು ಪರಮಾತ್ಮ ಹೇಳಿದ್ದಾನೆ. ಪ್ರಪಂಚ ಕ್ಷರವಾದುದು ಅಕ್ಷರವಾದ ಪರಮಾತ್ಮನ ಬಗೆಗೆ ತಿಳಿದು ಅವನು ತೋರಿದ ಮಾರ್ಗದಲ್ಲಿ ನಡೆದಾಗ ಜೀವನ ಸಾರ್ಥಕ ಪಡೆಯುತ್ತವೆ.

ಪ್ರಪಂಚದ ಎಲ್ಲ ಜೀವಗಳಲ್ಲಿಯೂ ಪರಮಾತ್ಮನ ಸನ್ನಿಧಾನ ಮತ್ತು ಅಂಶ ಇರುವುದರಿಂದ ಎಲ್ಲರಿಗೂ ಗೌರವ ನೀಡಬೇಕು. ಜೀವನಚಕ್ರದಲ್ಲಿ ಹುಟ್ಟು ಮತ್ತು ಸಾವು ಎರಡೂ ಅನಿವಾರ್ಯವಾದುದು ಆತ್ಮ ನಿರಂತರ ಪರಮಾತ್ಮ ಎಲ್ಲ ಆತ್ಮಗಳ ನಿಯಾಮಕ, ಆತ್ಮ ಮತ್ತು ದೇಹ ಎರಡ ನಡುವೆ ವ್ಯತ್ಯಾಸ ಇದೆ. ದೇಹ ಈಗಷ್ಟೇ ಗುರುತಿಸಲ್ಪಡುವಂತದ್ದು ಆತ್ಮ ನಿತ್ಯ ನಿರಂತರ

ಮಾನವ ಜನ್ಮದಲ್ಲಿ ಹುಟ್ಟಿದ ಮೇಲೆ ದಯೆ, ಸಹನೆ ಮತ್ತು ಉತ್ತಮಗುಣಗಳನ್ನು ನಿತ್ಯದಲ್ಲಿ ಅಳವಡಿಸಿಕೊಳ್ಳುವುದು ಬಹಳ ಮುಖ್ಯ ಎಂಬ ಮೊದಲಾದ ಸೂಕ್ಷ್ಮ ವಿಚಾರಗಳನ್ನು ಪರಮಾತ್ಮ ತಿಳಿಸಿಕೊಡುತ್ತಾನೆ. ತನ್ನ ವಿಶ್ವರೂಪವನ್ನು ತೋರಿಸಿ ಭಕ್ತಿಯ ಮಹತ್ವ ಶಕ್ತಿಯನ್ನು ಕೂಡ ತೋರಿಸುತ್ತಾನೆ. ಮನುಷ್ಯನ ಕರ್ತವ್ಯಗಳು ಮಹತ್ವವಾದ ಇಪ್ಪತ್ತುಗುಣಗಳನ್ನು ಸ್ವಯಂ ಪ್ರಶಂಸೆ ಮಾಡಿಕೊಳ್ಳದೇ ಇರುವುದು, ಡಂಭಾಚಾರದ ನಡವಳಿಕೆ ಇಲ್ಲದೇ ಇರುವುದು, ಅಹಿಂಸೆ, ಎಲ್ಲರೊಂದಿಗೂ ತಾಳ್ಮೆಯಿಂದ ಇರುವುದು, ಸತ್ಯ ನಿಷ್ಠೆಗಳಿಂದ ಬದುಕುವುದು, ಗುರು ಹಿರಿಯರ ಸೇವೆಯನ್ನು ಮಶಡುವುದು, ಮಾನಸಿಕ ಹಾಗೂ ದೈಹಿಕ ಶುದ್ಧತೆಯನ್ನು ಕಾಪಾಡಿಕೊಳ್ಳುವುದು, ಸದಾಚಾರದ ನಡೆಯನ್ನು ಅನುಸರಿಸಿ ನಡೆ ನುಡಿಗಳಿಂದ ಸತ್ಯಸಂಧರು ಮತ್ತು ಆದರ್ಶಪ್ರಾಯರಾಗಿರುವುದು, ಲೌಕಿಕ ಸುಖ ಮತ್ತು ಆಸೆಗಳ ಬೆನ್ನುಹತ್ತಿ ಹೋಗದಿರುವುದು, ಅಹಂಕಾರವನ್ನು ತ್ಯಜಿಸುವುದು, ತಾಪತ್ರಯಗಳನ್ನು ವ್ಯಾಧಿಗಳನ್ನು ಸಹಿಸಿ ನಡೆಯುವುದು, ಮನೆ ಮಕ್ಕಳು ಮೊದಲಾದ ಮೋಹಕ್ಕೆ ಕಾರಣವಾದ ಸಂಬಂಧ ವ್ಯಾಮೋಹಕ್ಕೆ ಒಳಗಾಗದೇ ಇರುವುದು. ಕಷ್ಟ ಸುಖಗಳನ್ನು ಸಮಚಿತ್ತದಿಂದ ಸ್ವೀಕಾರ ಮಾಡುವುದು, ಸಮಾಜದಲ್ಲಿ ಉತ್ತಮಗುಣಗಳನ್ನು ಹೊಂದಿ ಆದರ್ಶಪ್ರಾಯರಾಗಿ ನಡೆದು ಎಲ್ಲರಿಗೂ ಮಾದರಿಯಾಗುವಂತೆ ಬದುಕುವುದು , ಯಾವುದೇ ವಿಷಯ, ವಸ್ತು ಅಥವಾ ಸಂಬಂಧಗಳ ಬಗೆಗೆ ರಾಗ ಅಥವಾ ದ್ವೇಷ ಭಾವನೆಇಲ್ಲದೇ ಸ್ಥಿತ ಪ್ರಜ್ಞತೆಯನ್ನು ಕಾಪಾಡಿಕೊಂಡು ಆಧ್ಯಾತ್ಮಿಕ ಜ್ಞಾನ ಪಡೆದು ಪರಮಾತ್ಮನಲ್ಲಿ ಮೊರೆ ಹೋಗುವುದು ಇಂತಹ ಅನೇಕ ಗುಣಗಳನ್ನು ಪಡೆಯುವ ಬಗೆಗೆ ಮತ್ತು ಜೀವನವನ್ನು ಉತ್ತಮ ಹಾಗೂ ತೃಪ್ತಿಕವನ್ನಾಗಿ ಮಾಡಿಕೊಳ್ಳುವ ವಿಚಾರವನ್ನು ಭಗವದ್ಗೀತೆ ಉತ್ತಮ ವ್ಯಕ್ತಿತ್ವದ ವಿಕಸನಕ್ಕೆ ಮಾರ್ಗದರ್ಶಿಯಾಗಿದೆ.

ಲೋಕದಲ್ಲಿರುವ ಗುಣತ್ರಯಗಳಾದ ಸಾತ್ವಿಕ, ರಾಜಸ ಮತ್ತು ತಾಮಸಗುಣಗಳುಳ್ಳ ಜನರು ಮತ್ತು ಅವರ ನಡವಳಿಕೆಗಳು ಹಾಗೂ ನಾವು ಯಾರಲ್ಲಿ ಹೇಗೆ ಇರಬೇಕು ಎಂಬುದನ್ನು ತಿಳಿಸಿ , ಅಂತಿಮವಾಗಿ ಎಲ್ಲರೂ ಮಾಡುವುದು ಆನಂದ ಹಾಗೂ ಮೋಕ್ಷಕ್ಕಾಗಿಯೇ ಆ ಮೋಕ್ಷವನ್ನು ಹೇಗೆ ಪಡೆಯುವುದೆಂದು ಭಗವದ್ಗೀತೆಯಲ್ಲಿ ವಿಸ್ತೃತವಾಗಿ ಶ್ರೀ ಕೃಷ್ಣ ಪರಮಾತ್ಮ ತಿಳಿಸುತ್ತಾನೆ. ಸಾತ್ವಿಕತೆಯ ಮಹತ್ವ ಸಾತ್ವಿಕ ಮನದಿಂದ ಮಾಡಿದ ಕಾರ್ಯಗಳ ಯಶಸ್ಸು ಹೀಗೆ ತಾಮಸಿಕ ಗುಣದಿಂದ ಆಗುವ ಹಾನಿಗಳನ್ನು ಹೇಳುತ್ತಾರೆ.

ಮನುಷ್ಯನ ಮನಸ್ಸಿನ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ವಿಚಾರ ಹಾಗೂ ಸಂವೇದನೆಗಳ ಬಗೆಗೆ ಸೊಗಸಾಗಿ ಹೇಳಿರುವ ಭಗವದ್ಗೀತೆ ಮನೋವೈಜ್ಞಾನಿಕ ವಿಚಾರವನ್ನು ಧಾರ್ಮಿಕ ಹಾಗೂ ಆಧ್ಯಾತ್ಮಿಕ ಚಿಂತನೆಯೊಂದಿಗೆ ಜನರ ಬದುಕಿನ ಆನಂದ ಪಡೆಯುವ ಮಾರ್ಗದರ್ಶಕವಾದ ಪವಿತ್ರ ಗ್ರಂಥವಾಗಿದೆ.

# ಮಂಡ್ಯ ನಗರದ ಅಭಿವೃದ್ಧಿಗೆ 200 ಕೋಟಿ ರೂ. ವೆಚ್ಚ : ಶಾಸಕ ರವಿಕುಮಾರ್‌ಗೌಡ ಗಣಿಗ



**ಮಂಡ್ಯ :** ನಾನು ಶಾಸಕನಾಗಿ ಆಯ್ಕೆ ಯಾದ ನಂತರ ಮಂಡ್ಯ ನಗರ ಅಭಿವೃದ್ಧಿಗೆ 200 ಕೋಟಿ ರೂ. ವೆಚ್ಚ ಮಾಡಲಾಗಿದೆ, ಮುಂದಿನ ದಿನಗಳಲ್ಲಿ ಮಂಡ್ಯನಗರವನ್ನು ಇನ್ನಷ್ಟು ಆಕರ್ಷಣೀಯವಾಗಿ ರೂಪಿಸಲಾಗುವುದು? ಎಂದು ಎಂದು ಶಾಸಕ ರವಿಕುಮಾರ್‌ಗೌಡ ಗಣಿಗ ತಿಳಿಸಿದರು.

ಮಂಡ್ಯನಗರದ ಹೊಸಹಳ್ಳಿ ಸರ್ಕಾರಿ ಶಾಲಾ ಆವರಣದಲ್ಲಿ ಕಾಂಗ್ರೆಸ್ ಮುಖಂಡ ಹೊಸಹಳ್ಳಿ ಶ್ರೀಕಾಂತ್(ಜೆಕೆ) ಮತ್ತು ಗೆಳೆಯರು ಆಯೋಜಿಸಿದ್ದ ಶಾಸಕ ರವಿಕುಮಾರ ಗೌಡ ಗಣಿಗ ಅವರ ಹುಟ್ಟುಹಬ್ಬ ಪ್ರಯುಕ್ತ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ ಮತ್ತು ಮಂಡ್ಯ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲಾ ಅಡುಗೆ ಸಿಬ್ಬಂದಿಗಳಿಗೆ ಸಮವಸ್ತ್ರ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.ಮಾದರಿ ಮಂಡ್ಯ ನಗರ ರೂಪಿಸುವುದು, ಹೊಸ ಬದಲಾವಣೆ ತರುವ ನಿಟ್ಟಿನಲ್ಲಿ ಸಾಗರೋಪಾದಿಯಲ್ಲಿ ಅಭಿವೃದ್ಧಿ ಕಾರ್ಯ ಸಾಗುತ್ತಿದೆ, 3ನೇ ವಾರ್ಡಿನಲ್ಲಿ ಮಳೆ ಬಂದ್ರೆ ಭಾರಿ ಸಮಸ್ಯೆಯಾಗುತ್ತಿತ್ತು, ಈಗ ಎಷ್ಟೇ ಮಳೆ ಸುರಿದರೂ ತೊಂದರೆಯಾಗದಂತೆ ಅಭಿವೃದ್ಧಿ ಪಡಿಸಲಾಗಿದೆ ಎಂದರು.ಇದೇ ಹೊಸಹಳ್ಳಿ ರಸ್ತೆ ಎಷ್ಟುವರ್ಷದಿಂದ ಗುಂಡಿ ಬಿದ್ದಿತ್ತು, ಈಗ ಉತ್ತಮ ರಸ್ತೆ ಆಗಿದೆ, ನಿಮ್ಮ ಹೊಸಹಳ್ಳಿ ವೃತ್ತವನ್ನು ವಿದೇಶಿ ಮಾದರಿಯ ವೃತ್ತದ ರೀತಿ ಮಾಡಲು ನೀಲನಕ್ಷೆ ರೆಡಿಯಾಗಿದೆ, ಆಟೋ ನಿಲ್ದಾಣದವರು ಬೋರ್ಡ್ ಹಾಕೊಂಡು ನಿಂತರವರೇ ತೆಗಿಬೇಕು ಎಂದು ಹೇಳಿದ್ದೇವೆ, ಅಭಿವೃದ್ಧಿಗೆ ಸಹಕಾರ ನೀಡಬೇಕು.ಮಂಡ್ಯ ನಗರಕ್ಕೆ ಹೊಸ ರೂಪ ನೀಡಲಾಗುವುದು, ಮದುವೆಗೆ ಹಣ್ಣು ಕೊಡೋರು ಮತ್ತು ತರೋರು ಸಂಭ್ರಮದಿಂದ ಮದುವೆ ಮಾಡಿಕೊಡುಷ್ಟು ಹೊಸಬದಲಾವಣೆಯಾಗುತ್ತದೆ ಎಂದರು. ಸಾರ್ವಜನಿಕ ಜೀವನದಲ್ಲಿರುವ ನನಗೆ ನನ್ನ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಲು ಮುಜುಗರವಾಗುತ್ತದೆ, ಚಿಕ್ಕ ಮಕ್ಕಳಂತೆ ಕೇಕ್ ಕಟ್ ಮಾಡಿ ಸಂಭ್ರಮಿಸೋದನ್ನು ನಿಲ್ಲಿಸಿದ್ದೇವೆ, ಇನ್ನೇನಿದ್ದರೂ ಸಮಾಜ ಮುಖಿಯಾಗಿ ಹುಟ್ಟು ಹಬ್ಬ ಆಚರಿಸುವರಿಗೆ ಮಾತ್ರ ಡೇಟ್ ಕೊಡ್ತಿತ್ತಿನಿ, 1 ಕೋಟಿ ರೂ.ಖರ್ಚು ಮಾಡಿ, ಮಂಡ್ಯ ಜಿಲ್ಲಾದ್ಯಂತ ಹಿತೈಷಿಗಳು ಫ್ಲೆಕ್ಸ್, ಬಂಟಿಂಗ್ಸ್, ವಿವಿಧ ಸೇವಾ ಚಟುವಟಿಕೆ ಮಾಡಿದ್ದಾರೆ ಅವರ ಪ್ರೀತಿಗೆ ಅಭಿಮಾನಕ್ಕೆ ಗೌರವ ಕೊಡ್ತಿನಿ ಎಂದರು.

ಇಂದು ಹೊಸಹಳ್ಳಿಯಲ್ಲಿ ಯುವನಾಯಕ ಹೊಸಹಳ್ಳಿ ಶ್ರೀಕಾಂತ್(ಜೆಕೆ) ಸಂಯುಕ್ತ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ ಮತ್ತು ಮಂಡ್ಯ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲಾ ಅಡುಗೆ ಸಿಬ್ಬಂದಿಗಳಿಗೆ ಸಮವಸ್ತ್ರ ವಿತರಣೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಶಾಸಕ ಸ್ವಾಗತವನ್ನು ಅದ್ದೂರಿ ಯಾಗಿ ಪುಷ್ಪವೃಷ್ಠಿ ಮತ್ತು ಬೆಲ್ಲದಾರತಿಯೊಂದಿಗೆ ಬರಮಾಡಿ ಕೊಂಡು, ದೊಡ್ಡ ದೊಡ್ಡ ಹೂವಿನ ಹಾರಹಾಕಿ ಅಭಿನಂದಿಸಲಾಯಿತು. ಕಾರ್ಯ ಕ್ರಮದಲ್ಲಿ ಮನ್ಮುಲ್ ಅಧ್ಯಕ್ಷ ಶಿವಕುಮಾರ್ ಉಮ್ಮಡಹಳ್ಳಿ, ಶ್ರೀಕಾಂತ್(ಜೆಕೆ), ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ನಗರಸಭಾ ಸದಸ್ಯರಾದ ಪವಿತ್ರ ಬೋರೇಗೌಡ, ಮಂಜು, ಎಸ್ಪಿ ಶೋಭಾರಾಣಿ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಶಿವಲಿಂಗೇಗೌಡ, ಕಾಂಗ್ರೆಸ್ ಮುಖಂಡ ಹೊಸಹಳ್ಳಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಶೇಖರ್, ಬಿಇಓ ಮಹದೇವು, ಜಿಲ್ಲಾ ಸರ್ಕಾರಿ ನೌಕರರಸಂಘದ ಅಧ್ಯಕ್ಷ ಕೆ.ನಾಗೇಶ್ ಸೇರಿದಂತೆ ಹಲವು ಸ್ಥಳೀಯ ಮುಖಂಡರು ಹಾಜರಿದ್ದರು.

# ಜ.8 ಮತ್ತು 9 ರಂದು ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಕಾಲೇಜು ಸಭಾಂಗಣದಲ್ಲಿ ಕಾರ್ಯಾಗಾರ

**ಮಡಿಕೇರಿ :** ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ ಸಹಯೋಗದಲ್ಲಿ ವಿಧಿವಿಜ್ಞಾನ ಶಾಸ್ತ್ರ ವಿಭಾಗ ವತಿಯಿಂದ ?ತುರ್ತು ಆರೈಕೆಯಲ್ಲಿ ವೈದ್ಯಕೀಯ ಕಾನೂನು ಅಗತ್ಯತೆಗಳು ಮತ್ತು ಮೂಲಭೂತ ಜೀವ ಬೆಂಬಲ ಕುರಿತ? ಕಾರ್ಯಗಾರವು ಜನವರಿ, 8 ಮತ್ತು 9 ರಂದು ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ಜನವರಿ 8 ರಂದು ಬೆಳಗ್ಗೆ 10 ಗಂಟೆಗೆ ಕಾರ್ಯಗಾರಕ್ಕೆ ಚಾಲನೆ ದೊರೆಯಲಿದ್ದು, ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಮತ್ತು ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಮಂತರ್ ಗೌಡ, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾದ ಡಾ.ಲೋಕೇಶ್, ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ.ವಿಶಾಲ್ ಕುಮಾರ್, ವೈದ್ಯಕೀಯ ಅಧೀಕ್ಷರಾದ ಡಾ.ಸೋಮಶೇಖರ್, ಜಿಲ್ಲಾ ಸರ್ಜನ್ ಡಾ.ನಂಜುಂಡಯ್ಯ, ಡಾ.ಅಭಿನಂದನ್, ಡಾ.ಧನಂಜಯ್ ಕುಮಾರ್, ಡಾ.ಮೋಹನ್ ಅಪ್ಪಾಜಿ, ಡಾ.ಉಮೇಶ್ ಬಾಬು, ಡಾ.ಕೇದಾರನಾಥ, ಡಾ.ಪುರುಷೋತ್ತಮ, ಕೆ.ಎಂ.ರೋಹಿಣಿ ಬಸವರಾಜು, ಡಾ.ಸುಮುಖ್ ಎ.ಟಿ. ಇತರರು ಪಾಲ್ಗೊಳ್ಳಲಿದ್ದಾರೆ.

# ವೀಗನಿಸಂ- ಪ್ರಪಂಚದಲ್ಲಿ ವೇಗವಾಗಿ ಬೆಳೆಯುತ್ತಿರುವ ಜೀವನ ಶೈಲಿ




ಮಾನವ ನಾಗರಿಕತೆಯು ಇಂದು ಒಂದು ಮಹತ್ವದ ಘಟ್ಟದಲ್ಲಿದೆ. ನಾವು ತಿನ್ನುವ ಆಹಾರ, ಧರಿಸುವ ಬಟ್ಟೆ ಮತ್ತು ಬಳಸುವ ವಸ್ತುಗಳು ಕೇವಲ ನಮ್ಮ ವೈಯಕ್ತಿಕ ಆಯ್ಕೆಗಳಾಗಿ ಉಳಿದಿಲ್ಲ; ಅವು ಈ ಭೂಮಿಯ ಭವಿಷ್ಯವನ್ನು ನಿರ್ಧರಿಸುವ ಶಕ್ತಿಗಳಾಗಿವೆ. ಈ ನಿಟ್ಟಿನಲ್ಲಿ 'ವೀಗನಿಸಂ' (Veganism) ಎನ್ನುವುದು ಕೇವಲ ಆಹಾರಕ್ಕೆ ಸಂಬಂಧಿಸಿದ ನಿರ್ಧಾರವಲ್ಲ, ಬದಲಿಗೆ ಅದು ಪ್ರಕೃತಿ ಮತ್ತು ಪ್ರಾಣಿ ಸಂಕುಲದೊಂದಿಗೆ ನಮಗಿರಬೇಕಾದ ಸಂಬಂಧವನ್ನು ಮರು ವ್ಯಾಖ್ಯಾನಿಸುವ ಒಂದು ಕ್ರಾಂತಿಕಾರಿ ಜೀವನಶೈಲಿ. ಇಂದು ಜಗತ್ತಿನಾದ್ಯಂತ ಸದ್ದು ಮಾಡುತ್ತಿರುವ ಈ ಪದ್ಧತಿಯು ಮಾನವನ ನಾಗರಿಕತೆ, ಪರಿಸರ ಕಾಳಜಿ ಮತ್ತು ಜೀವ ಕಾರುಣ್ಯದ ಹೊಸ ಆಯಾಮವಾಗಿ ಬೆಳೆಯುತ್ತಿದೆ.

- **ಇತಿಹಾಸದ ಪುಟಗಳಲ್ಲಿ 'ಜೀವ ಕಾರುಣ್ಯ'ದ ಬೇರುಗಳು :** 'ವೀಗನಿಸಂ' ಎಂಬ ಪದವು ಆಧುನಿಕವಾಗಿ ಕಂಡರೂ, ಇದರ ತತ್ವಗಳು ಮನುಷ್ಯನ ಇತಿಹಾಸದಷ್ಟೇ ಹಳೆಯವು. ಕ್ರಿ.ಪೂ 500ರ ಅವಧಿಯಲ್ಲೇ ಭಾರತೀಯ ಉಪಖಂಡದಲ್ಲಿ ಆಹಾರ ಮತ್ತು ಅಹಿಂಸೆಯ ಬಗ್ಗೆ ಗಂಭೀರ ಚಿಂತನೆಗಳು ನಡೆದಿದ್ದವು.
- **ಹಿಂದೂ ಧರ್ಮ:** ವೇದ ಮತ್ತು ಉಪನಿಷತ್ತುಗಳಲ್ಲಿ 'ಅಹಿಂಸಾ ಪರಮೋ ಧರ್ಮಃ' ಎಂಬ ಘೋಷವಾಕ್ಯವು ಸಸ್ಯಹಾರದ ಅಡಿಪಾಯ ಹಾಕಿತು. ಪಶುಗಳನ್ನು ದೇವತೆಯ ರೂಪದಲ್ಲಿ ಕಾಣುವ ಸಂಪ್ರದಾಯವು ಪ್ರಾಣಿ ಹಿಂಸೆಯನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿತು.
- **ಜೈನ ಧರ್ಮ:** ಜೈನ ಧರ್ಮವು ಅಹಿಂಸೆಯನ್ನು ಅತ್ಯಂತ ಸೂಕ್ಷ್ಮವಾಗಿ ಪಾಲಿಸುತ್ತದೆ. ಕೇವಲ ಮಾಂಸಹಾರವಲ್ಲದೆ, ಭೂಮಿಯ ಒಳಗಿರುವ ಗೆಡ್ಡೆ ಗೆಣಸುಗಳನ್ನು ತಿನ್ನುವುದರಿಂದಲೂ ಸಣ್ಣ ಜೀವಿಗಳಿಗೆ ತೊಂದರೆಯಾಗಬಹುದು ಎಂಬ ಕಾಳಜಿ ಇವರದ್ದು.
- **ಬೌದ್ಧ ಧರ್ಮ:** ಬುದ್ಧನು "ಎಲ್ಲಾ ಜೀವಿಗಳು ಸುಖವಾಗಿರಲಿ" ಎಂಬ ಮೈತ್ರೀ ಭಾವನೆಯನ್ನು ಬೋಧಿಸಿದನು. ಇದು ಸಸ್ಯಾಹಾರಕ್ಕೆ ದೊಡ್ಡ ಪ್ರೇರಣೆ ನೀಡಿತು.
- **ಪಾಶ್ಚಿಮಾತ್ಯ ಮತ್ತು ಆಧುನಿಕ ಇತಿಹಾಸ:** ಪಾಶ್ಚಿಮಾತ್ಯ ಜಗತ್ತಿನಲ್ಲಿ ಪೈಥಾಗೋರಸ್‌ನಂತಹ ತತ್ವಜ್ಞಾನಿಗಳು ಪ್ರಾಣಿ ದಯೆಯ ಬಗ್ಗೆ ಮಾತನಾಡಿದ್ದರು. ಆದರೆ, ವೀಗನಿಸಂಗೆ ಒಂದು ಸಾಂಸ್ಥಿಕ ರೂಪ ಸಿಕ್ಕಿದ್ದು 1944ರಲ್ಲಿ. ಬ್ರಿಟನ್‌ನ ಡೊನಾಲ್ಡ್ ವ್ಯಾಟ್ಸನ್ ಮತ್ತು ಅವರ ಸ್ನೇಹಿತರು 'ವೀಗನ್' ಎಂಬ ಪದವನ್ನು ಸೃಷ್ಟಿಸಿದರು. 'ವೆಜಿಟೇರಿಯನ್' ಪದದ ಮೊದಲ ಮೂರು ಮತ್ತು ಕೊನೆಯ ಎರಡು ಅಕ್ಷರಗಳನ್ನು ಸೇರಿಸಿ 'ವೀಗನ್' ಎಂಬ ಪದ ರೂಪಿಸಲಾಯಿತು. ಇದು ಸಸ್ಯಾಹಾರದ ಆರಂಭ ಮತ್ತು ಅಂತ್ಯ ಎಂಬ ಅರ್ಥವನ್ನು ನೀಡುತ್ತದೆ. 1944ರಲ್ಲಿ 'ವೀಗನ್ ಸೊಸೈಟಿ' ಸ್ಥಾಪನೆಯಾದಾಗ, ಅದು ಕೇವಲ ಆಹಾರಕ್ಕೆ ಸೀಮಿತವಾಗದೆ ಪ್ರಾಣಿಗಳ ಮೇಲಿನ ದೌರ್ಜನ್ಯ ಮುಕ್ತ ಜೀವನಶೈಲಿಯಾಗಿ ಅಧಿಕೃತವಾಗಿ ಮಾರ್ಪಟ್ಟಿತು.
- **ಸಸ್ಯಾಹಾರ (Vegetarian) ಮತ್ತು ವೀಗನಿಸಂ (Veganism) ನಡುವಿನ ವ್ಯತ್ಯಾಸ :** ಅನೇಕರು ಸಸ್ಯಾಹಾರ ಮತ್ತು ವೀಗನಿಸಂ ನಡುವೆ ಗೊಂದಲಕ್ಕೊಳಗಾಗುತ್ತಾರೆ. ಸಸ್ಯಾಹಾರಿಗಳು ಮಾಂಸ ಸೇವಿಸದಿದ್ದರೂ ಹಾಲು, ಮೊಸರು, ತುಪ್ಪ ಮತ್ತು ಜೇನುತುಪ್ಪದಂತಹ ಪ್ರಾಣಿಜನ್ಯ ಉತ್ಪನ್ನಗಳನ್ನು ಬಳಸುತ್ತಾರೆ. ಆದರೆ ವೀಗನಿಸಂ ಈ ಚೌಕಟ್ಟನ್ನು ಮೀರಿ ನಿಲ್ಲುತ್ತದೆ.



ವೀಗನಿಸಂನ ಮೂಲ ತರ್ಕವೆಂದರೆ "ಹಸುವಿನ ಹಾಲಿನ ಮೇಲೆ ಮೊದಲ ಹಕ್ಕು ಅದರ ಕರುವಿನದ್ದು". ಮಾನವನು ಇನ್ನೊಂದು ಪ್ರಾಣಿಯ ಹಾಲನ್ನು ಕಸಿದುಕೊಳ್ಳುವುದು ನೈಸರ್ಗಿಕವಾಗಿ ಸರಿಯಲ್ಲ ಎಂಬುದು ಇದರ ವಾದ. ವೀಗನಿಸಂ ಕೇವಲ ಆಹಾರಕ್ಕೆ ಸೀಮಿತವಾಗದೆ, ದೈನಂದಿನ ಜೀವನದ ಪ್ರತಿಯೊಂದು ಆಯ್ಕೆಯಲ್ಲೂ ಅಹಿಂಸೆಯನ್ನು ಹುಡುಕುತ್ತದೆ. ಇದು ಮನುಷ್ಯ ಕೇಂದ್ರಿತ ಆಲೋಚನೆಯಿಂದ 'ಜೀವ ಸಂಕುಲ ಕೇಂದ್ರಿತ' ಆಲೋಚನೆಗೆ ಹೊರಳುವ ಜೀವನ ಶೈಲಿಯಾಗಿದೆ.

- **ಪರಿಸರ ನ್ಯಾಯ ಮತ್ತು ಭೂಮಿಯ ಉಳಿವಿನ ಹಾದಿ:** ವೀಗನಿಸಂ ಕೇವಲ ಪ್ರಾಣಿ ಪ್ರೇಮವಲ್ಲ, ಅದು ಭೂಮಿಯನ್ನು ಉಳಿಸುವ 'ಪರಿಸರ ನ್ಯಾಯ'ವೂ ಹೌದು. ಇಂದಿನ ಪಶುಸಂಗೋಪನೆ ಉದ್ಯಮವು ಪರಿಸರದ ಮೇಲೆ ಗಂಭೀರ ಪರಿಣಾಮ ಬೀರಿದೆ:

ನೀರಿನ ಉಳಿತಾಯ: ಒಂದು ಕೆಜಿ ಮಾಂಸವನ್ನು ಉತ್ಪಾದಿಸಲು ಸುಮಾರು 15,000 ಲೀಟರ್ ನೀರು ಬೇಕಾಗುತ್ತದೆ, ಆದರೆ ಅಷ್ಟೇ ಪ್ರಮಾಣದ ಧಾನ್ಯ ಬೆಳೆಯಲು ಬೇಕಾಗುವ ನೀರು ತೀರಾ ಕಡಿಮೆ.

ಭೂಮಿಯ ಬಳಕೆ: ಮಾಂಸಕ್ಕಾಗಿ ಪ್ರಾಣಿಗಳನ್ನು ಸಾಕಿ ಅವುಗಳಿಗೆ ಆಹಾರ ಒದಗಿಸಲು ವಿಶಾಲವಾದ ಕಾಡುಗಳನ್ನು ನಾಶಪಡಿಸಿ ಮೇವು ಬೆಳೆಯಲಾಗುತ್ತಿದೆ. ವೀಗನ್ ಆಹಾರ ಪದ್ಧತಿಯು ಭೂಮಿಯ ಮೇಲಿನ ಒತ್ತಡವನ್ನು ಶೇ. 75 ರಷ್ಟು ಕಡಿಮೆ ಮಾಡಬಲ್ಲದು ಎಂದು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಂಶೋಧನೆ ತಿಳಿಸಿದೆ.

ಹಸಿರುಮನೆ ಅನಿಲ: ಜಾಗತಿಕ ತಾಪಮಾನ ಏರಿಕೆಗೆ ಕಾರಣವಾಗುವ ಅನಿಲಗಳಲ್ಲಿ ಶೇ. 14 ಕ್ಕಿಂತ ಹೆಚ್ಚು ಪಾಲು ಪಶುಸಂಗೋಪನೆಯಿಂದಲೇ ಬರುತ್ತದೆ.

- **ಜಾಗತಿಕ ಚಳುವಳಿ ಮತ್ತು ಆಧುನಿಕ ಪ್ರವೃತ್ತಿ :** ಇಂದು ವೀಗನಿಸಂ ಜಾಗತಿಕವಾಗಿ ಒಂದು ದೊಡ್ಡ ಸಂಚಲನ ಮೂಡಿಸಿದೆ. 2004 ರಲ್ಲಿ ಆರಂಭವಾದ 'ವೀಗನರಿ' (Veganuary) ಅಭಿಯಾನವು ಪ್ರತಿ ವರ್ಷ ಜನವರಿ ತಿಂಗಳಲ್ಲಿ ಲಕ್ಷಾಂತರ ಜನರನ್ನು ವೀಗನ್ ಜೀವನದತ್ತ ಆಕರ್ಷಿಸುತ್ತಿದೆ. ಈ ಬದಲಾವಣೆಗೆ ಪೂರಕವಾಗಿ ಬೆಂಗಳೂರು ಸೇರಿದಂತೆ ಜಗತ್ತಿನ ಪ್ರಮುಖ ನಗರಗಳಲ್ಲಿ ವೀಗನ್ ಸಂಸ್ಕೃತಿ ಬೆಳೆಯುತ್ತಿದೆ.



| ಸ್ವಾಮಿನಾಥನ್
9880041516

ಅನೇಕ ಸೆಲೆಬ್ರಿಟಿಗಳು, ಕ್ರೀಡಾಪಟುಗಳು ಉದಾಹರಣೆಗೆ ವಿರಾಟ್ ಕೊಹ್ಲಿ, ಸೆರೆನಾ ವಿಲಿಯಮ್ಸ್ ಅಂತಹವರು ವೀಗನ್ ಜೀವನಶೈಲಿಯನ್ನು ಅಪ್ಪಿಕೊಂಡಿರುವುದು ಯುವ ಪೀಳಿಗೆಗೆ ದೊಡ್ಡ ಪ್ರೇರಣೆ ನೀಡಿದೆ. ಇದು ಕೇವಲ ಒಂದು ಫ್ಯಾಷನ್ ಆಗಿ ಉಳಿಯದೆ, ಒಂದು ಜವಾಬ್ದಾರಿಯುತ ನಾಗರಿಕತೆಯ ಗುರುತಾಗಿ ಬೆಳೆಯುತ್ತಿದೆ.

- **ಎದುರಾಗುವ ಸವಾಲುಗಳು ಮತ್ತು ಸಾಮಾಜಿಕ ಬದಲಾವಣೆ:** ಯಾವುದೇ ಹೊಸ ಬದಲಾವಣೆ ಬಂದಾಗ ಸವಾಲುಗಳು ಸಾಮಾನ್ಯ. ವೀಗನ್ ಆಗುವ ದಾರಿಯಲ್ಲಿ ಪ್ರಮುಖವಾಗಿ 'ಸಾಮಾಜಿಕ ಒತ್ತಡ' ಎದುರಾಗುತ್ತದೆ. ಹಬ್ಬ ಅಥವಾ ಸಮಾರಂಭಗಳಲ್ಲಿ "ಹಾಲು ಬಿಟ್ಟರೆ ಶಕ್ತಿ ಬರುವುದಿಲ್ಲ" ಎಂಬ ಪುರಾತನ ನಂಬಿಕೆಗಳು ಅಡ್ಡಿಯಾಗಬಹುದು. ಆದರೆ, ಆಧುನಿಕ ವಿಜ್ಞಾನವು ಸಸ್ಯಜನ್ಯ ಪ್ರೋಟೀನ್‌ಗಳ ಶಕ್ತಿಯನ್ನು ಸಾಬೀತುಪಡಿಸಿದೆ.

ವೀಗನಿಸಂ ಎಂದರೆ ಎಲ್ಲವನ್ನೂ ಒಂದೇ ದಿನದಲ್ಲಿ ಬಿಡುವುದಲ್ಲ. ಅದು ಪ್ರತಿ ಹೆಜ್ಜೆಯಲ್ಲೂ ನಾವು ಮಾಡುವ ಜಾಗೃತ ಆಯ್ಕೆ. ನಮ್ಮ ಹಿರಿಯರು ಪ್ರಕೃತಿಯೊಂದಿಗೆ ನಡೆಸುತ್ತಿದ್ದ ಸಾಮರಸ್ಯದ ಬದುಕನ್ನು ನಾವು ಹೊಸ ಕಾಲದ ಅರಿವಿನೊಂದಿಗೆ ಮರುಶೋಧಿಸುತ್ತಿದ್ದೇವೆ. ಇದು ನಾಲಿಗೆಯ ರುಚಿಯನ್ನು ಮೀರಿದ, ಆತ್ಮದ ತೃಪ್ತಿಯ ಹಾದಿ.

**ನಾಳೆ ವೀಗನ್ ಆಹಾರ , ಉಡುಪು ಮತ್ತು ಫ್ಯಾಷನ್ನಗಳ ಬಗ್ಗೆ ಚರ್ಚಿಸೋಣ**

# ಬದುಕಿನ ಬಣ್ಣಗಳ ಅರಿವು





| ವೀಣಾ ಹೇಮಂತ್‌ಗೌಡ ಪಾಟೀಲ್

ಸದಾ ಕಾಲೇಜು, ಸ್ನೇಹಿತರು, ಪ್ರೀತಿಸಿದ ಹುಡುಗಿ ಎಂದು ಬಿಂದಾಸ್ ಆಗಿ ಓಡಾಡುತ್ತಿದ್ದ ಮೊಮ್ಮಗನನ್ನು ಕಂಡು ಆತನ ಅಜ್ಜಿ ತಾತನಿಗೆ ತುಸು ಹೆಚ್ಚೇ ಬೇಸರವಾಗಿತ್ತು. ಅವರ ಏಕೈಕ ಪುತ್ರ ಮತ್ತು ಸೊಸೆ ಅಪಘಾತದಲ್ಲಿ ತೀರಿಹೋದ ಮೇಲೆ ಇರುವ ಒಬ್ಬ ಮೊಮ್ಮಗನನ್ನು ಅತ್ಯಂತ ಪ್ರೀತಿಯಿಂದ ಜೋಪಾನ ಮಾಡುತ್ತಿದ್ದ ಅವರು ತಮ್ಮ ವೃದ್ಧಾಪ್ಯವನ್ನು ಸಂಪೂರ್ಣವಾಗಿ ಆತನನ್ನು ಬೆಳೆಸುವುದರಲ್ಲಿ ಕಳೆದಿದ್ದರು. ಒಳ್ಳೆಯ ಅಂಕಗಳನ್ನು ಗಳಿಸುವಲ್ಲಿ ಅವನೇನು ಹಿಂದೆ ಬಿದ್ದಿರಲಿಲ್ಲ, ನಿಜ ಆದರೆ ಕಾಲೇಜು ಕಟ್ಟೆ ಹತ್ತಿದ ಮೇಲೆ ಸದಾ ಸ್ನೇಹಿತರ ಹಿಂಡಿನೊಂದಿಗೆ

ಅಲೆಯುತ್ತಿದ್ದ ಆತ ಮನೆಗೆ ಬರುವುದು ರಾತ್ರಿ ಮಲಗಲು ಮಾತ್ರ ಎಂಬಂತೆ ಆಗಿದ್ದು ಸದಾ ಆತನ ನಿರೀಕ್ಷೆಯಲ್ಲಿ ಇರುತ್ತಿದ್ದ ಅಜ್ಜಿ ತಾತನಿಗೆ ಇದರಿಂದ ಬೇಸರವಾಗಿತ್ತು. ತಮ್ಮ ಜೀವಿತದ ಬಹುಕಾಲವನ್ನು ಮೊಮ್ಮಗನ ಹಿಂದೆ ಮುಂದೆ ಓಡಾಡಿ ಆತನಿಗೆ ತಾಯಿ, ತಂದೆ ಇಲ್ಲದ ನೋವು ಬಾರದಂತೆ ಸಾಕಿ ಸಲಹಿದ ಅವರಿಗೆ ಇದೀಗ ಮೊಮ್ಮಗ ತಮ್ಮನ್ನು ಕಡೆಗಣಿಸುತ್ತಿದ್ದಾನೆ ಎಂಬ ಭಾವ.

ಅದು ಎರಡನೇ ಪಿಯುಸಿಯ ಕಾಲ. ಕಳೆದ ವರ್ಷ ಅತ್ಯಂತ ಕಡಿಮೆ ಅಂಕಗಳನ್ನು ತೆಗೆದುಕೊಂಡು ಜಸ್ಟ್ ಪಾಸ್ ಆಗಿದ್ದ ಆತನಿಗೆ ಆ ದಿನ ಅಜ್ಜಿ ಮನೆಯಲ್ಲಿಯೇ ಇರಲು ಹೇಳಿದ್ದರು. ಐದು ನಿಮಿಷದಲ್ಲಿ ಬರುತ್ತೇನೆ ಎಂದು ಹೋದವನು ಸ್ನೇಹಿತರ ಜೊತೆಯಲ್ಲಿ ಸಿನಿಮಾ ನೋಡಿ ಹೋಟೆಲಿನಲ್ಲಿ ತಿಂದು ಮನೆಗೆ ಬಂದಾಗ ಸಂಜೆಯ ಆರು ಗಂಟೆ ಆಗಿತ್ತು.

ಮನೆಯ ಕರೆ ಗಂಟೆಯನ್ನು ಆತ ಒತ್ತಿದ ಕೂಡಲೇ ಅಜ್ಜ ಬಾಗಿಲು ತೆರೆದರು. ಇನ್ನೇನು ಆತ ಒಳಗೆ ಬರಬೇಕು ಎನ್ನುವಷ್ಟರಲ್ಲಿ ಅಜ್ಜಿ ಬಾಗಿಲಿಗೆ ಅಡ್ಡಲಾಗಿ ನಿಂತು "ಈ ಮನೆಯಲ್ಲಿ ಇನ್ನು ನಿನಗೆ ಜಾಗವಿಲ್ಲ, ಹೊರಟು ಹೋಗು" ಎಂದು ಹೇಳಿದರು.

ಅಜ್ಜಿಯ ಮಾತುಗಳು ಅರ್ಥವಾದರೂ ಏನೂ ತೋಚದೆ ಆತ ಕಕ್ಕಾಬಿಕ್ಕಿಯಾಗಿ ನಿಂತಿರುವುದನ್ನು ನೋಡಿದ ಅಜ್ಜ ಅಜ್ಜಿಯ ಹೆಗಲ ಮೇಲೆ ಕೈ ಇಟ್ಟು ಆಕೆಗೆ ಸಮಾಧಾನ ಮಾಡಲು ನೋಡಿದರು. ಕೂಡಲೇ ಪತಿಯ ಕೈಯನ್ನು ಕೊಸರಿದ ಆಕೆ ಹಿಂದೆ ಸರಿದು ಆತನಿಗೆ ಈ ಮನೆಯಲ್ಲಿ ಜಾಗ ಇಲ್ಲ.....ಇದೇ ಕೊನೆಯ ಮಾತು ಎಂದು ಹೇಳಿ ಆತನ ಮುಖಕ್ಕೆ ರಾಚುವಂತೆ ಬಾಗಿಲನ್ನು ಹಾಕಿಕೊಂಡು ಒಳಗೆ ಹೊರಟು ಹೋದರು.

ಒಮ್ಮಿಂದೊಮ್ಮೆಲೆ ಎಲ್ಲವನ್ನು ಕಳೆದುಕೊಂಡ ಹತಾಶ ಭಾವ ಮೊಮ್ಮಗನನ್ನು ಆವರಿಸಿತು. ಮುಂದೇನು ಎಂದು ತೋಚದೆ ಇದ್ದರೂ ನಿಧಾನವಾಗಿ ಮನೆಯ ಮೆಟ್ಟಿಲಿಳಿದು ರಸ್ತೆಗೆ ಬಿದ್ದನು. ಹಾಗೆ ನಡೆಯುತ್ತಾ ಮುಂದೆ ಹೋಗುವಾಗ ತಾನು ಕಾಯಂ ಆಗಿ ಸ್ನೇಹಿತರ ಜೊತೆ ಕೂಡುತ್ತಿದ್ದ ದೂರದ ರಸ್ತೆಯಂಚಿನ ಆಲದ ಮರದ ಬಳಿ ಸಾರಿದನು. ನಿಧಾನವಾಗಿ ಕಾಲೆಳೆದುಕೊಂಡು ಹೋಗಿ ಅಲ್ಲಿ ಆತ ಕುಳಿತಾಗ ಆತನ ಒಂದಿಬ್ಬರು ಸ್ನೇಹಿತರು ಮಾತನಾಡುತ್ತಾ ಅಲ್ಲಿಗೆ ಬಂದರು. ಈತನ ಜೋತು ಬಿದ್ದ ಮುಖವನ್ನು ನೋಡಿ ಏನಾಯ್ತು ಬ್ರೋ? ಯಾಕೆ ಹೀಗೆ ಕುಳಿತಿದ್ದೀಯಾ? ಮನೆಯಲ್ಲಿ ಏನಾದರೂ ಪ್ರಾಬ್ಲಮ್ಮಾ? ಎಂದು ಕೇಳಿದರು.

ಕೂಡಲೇ ಯುವಕ "ಅಜ್ಜಿ ನನ್ನನ್ನು ಮನೆಯಿಂದ ಹೊರಗೆ ಹಾಕಿದರು.. ಎಲ್ಲಿ ಹೋಗಬೇಕೆಂದು ನನಗೆ ತೋಚುತ್ತಿಲ್ಲ. ನನಗೆ ಒಂದೆರಡು ದಿನಗಳ ಕಾಲ ನಿಮ್ಮ ಯಾರದಾದರೂ ಮನೆಯಲ್ಲಿ ಇರೋಕೆ ಅವಕಾಶ ಕೊಡ್ತೀರಾ? ಎಂದು ಅವರಿಬ್ಬರನ್ನು ಕೇಳಿದ. ಪರಸ್ಪರ ಮುಖ ನೋಡಿಕೊಂಡ ಅವರಲ್ಲಿ ಒಬ್ಬ ಸ್ನೇಹಿತ ಇಲ್ಲ ಕಣೋ ನಮ್ಮ ಮನೆಯಲ್ಲಿ ಜಾಗ ಸಾಲೋದಿಲ್ಲ... ಅದು ಅಲ್ದೆ ನನ್ನ ಅಪ್ಪ ಅಮ್ಮ ಒಪ್ಪಲ್ಲ ಎಂದು ಹೇಳಿದ. ಮತ್ತೊಬ್ಬ ಆತನ ಮಾತಿಗೆ ಗೋಣು ಹಾಕುತ್ತಾ

"ಸಾರಿ ಕಣೋ ನಮ್ಮನೇಲೂ ಬಹುಶಃ ಇದೇ ಕಥೆ. ಬೆಟರ್ ನೀನು ನಿಮ್ಮ ಅಜ್ಜಿ ಹತ್ರ ಹೋಗಿ ಸಾರಿ ಕೇಳು... ಅವರು ನಿನ್ನನ್ನು ಕ್ಷಮಿಸುತ್ತಾರೆ" ಎಂದು ಈತನ ಮನೆಯ ಹಿನ್ನೆಲೆ ಗೊತ್ತಿದ್ದ ಅವರು ಆತನಿಗೆ ಹೇಳಿದರು. ಆಯ್ತು ಎಂದು ನಿಟ್ಟುಸಿರಿಟ್ಟ ಆತ ತಾನು ಸದಾ ತನ್ನ ಗರ್ಲ್ ಫ್ರೆಂಡ್ ಜೊತೆ ಕೂಡುತ್ತಿದ್ದ ಕೆಫೆಯತ್ತ ಹೆಜ್ಜೆ ಹಾಕಿದ. ಆತನ ಕರೆಯ ಮೇರೆಗೆ ಅಲ್ಲಿಗೆ ಬಂದಿದ್ದ ಗರ್ಲ್ ಫ್ರೆಂಡ್ ಈತನ ಪೇಲವ ಮುಖವನ್ನು ನೋಡಿ ಏನಾಯಿತು ಎಂದು ಕೇಳಿದಳು.

ಮನೆಯಲ್ಲಿ ನಡೆದ ವಿಷಯವನ್ನು ಆಕೆಗೆ ಹೇಳಿದ ಆತ ಕೆಲ ದಿನಗಳ ಕಾಲ ನಿನ್ನ ಮನೆಯಲ್ಲಿ ನನ್ನನ್ನು ಇರಿಸಿಕೊಳ್ಳುತ್ತೀಯಾ? ಎಂದು ಕೇಳಿದಾಗ ತುಸು ಗಾಬರಿ ಬಿದ್ದ ಆಕೆ ನನ್ನ ಪಾಲಕರನ್ನು ಕೇಳಿ ಹೇಳುತ್ತೇನೆ ಎಂದು ಹೇಳಿದಳು.

ನಂತರ ಅವರಿಬ್ಬರೂ ಆಕೆಯ ಮನೆಯೆಡೆ ನಡೆದರು. ಆತನನ್ನು ಮನೆಯ ಹೊರಗೆ ಗೇಟ್ ನ ಬಳಿ ನಿಲ್ಲಿಸಿದ ಆಕೆ ಮನೆಯ ಒಳಗೆ ಹೋಗಿ ತನ್ನ ಅಪ್ಪ ಅಮ್ಮನಿಗೆ ವಿಷಯವನ್ನು ತಿಳಿಸಿ ಆತನಿಗೆ ಕೆಲ ದಿನಗಳ ಕಾಲ ತಮ್ಮ ಮನೆಯಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗುತ್ತದೆಯೇ ಎಂದು ಕೇಳಿದಳು. ಪಾಲಕರು ಒಪ್ಪಲಿಲ್ಲ. ಆಕೆ ಮನೆಯ ಹೊರಗೆ ಬಂದು ಗೇಟಿನ ಬಳಿ ನಿಂತಿದ್ದ ಯುವಕನಿಗೆ "ಸಾರಿ ಕಣೋ... ನನ್ನ ಅಪ್ಪ ಅಮ್ಮ ಒಪ್ತಾ ಇಲ್ಲ ನಾನು ನಿನಗೆ ಯಾವ ರೀತಿನೂ ಸಹಾಯ ಮಾಡೋಕೆ ಆಗುತ್ತಿಲ್ಲ. ಐ ಯಾಮ್ ರಿಯಲಿ ಸಾರಿ ಏನೂ ತಿಳ್ಕೋಬೇಡ" ಎಂದು ಹೇಳಿದಳು. ನಿಟ್ಟುಸಿರಿಟ್ಟ ಆತ ನನ್ನ ಪರಿಸ್ಥಿತಿಯೇ ಹಾಗೆ ಇರುವಾಗ ನೀನಾದರೂ ಏನು ಮಾಡ್ತೀಯಾ? ಇರಲಿ ಬಿಡು ಹೊರಡುತ್ತೇನೆ ಎಂದು ಹೇಳಿ ತನ್ನ ಮನೆಯ ಕಡೆ ನಡೆದನು. ಮನೆಗೆ ಹೋಗಲು ಆತನಿಗೆ ಮನಸ್ಸು ಇರಲಿಲ್ಲ ಆದರೆ ಅನಾಯಾಸವಾಗಿ ಆತನ ಕಾಲುಗಳು ಮನೆಯ ಹತ್ತಿರ ಇರುವ ಪಾರ್ಕಿನ ಬಳಿ ಆತನನ್ನು ಕರೆದೊಯ್ದುವು. ಪಾರ್ಕಿನ ಕಲ್ಲು ಬೆಂಚೊಂದರ ಮೇಲೆ ಕುಳಿತ ಆತನಿಗೆ ತಾನು ಚಿಕ್ಕಂದಿನಲ್ಲಿ ಅಜ್ಜ ಅಜ್ಜಿಯರ ಜೊತೆ ಈ ಪಾರ್ಕಿಗೆ ಬಂದು ಆಟವಾಡುತ್ತಿದ್ದುದು ಅವರ ಕೈ ಹಿಡಿದು ವಾಕಿಂಗ್ ಮಾಡುತ್ತಿದ್ದುದು, ಕಣ್ಣಾಮುಚ್ಚಾಲೆ ಆಡುತ್ತಿದ್ದುದು ಎಲ್ಲವೂ ಒಂದರ ಹಿಂದೆ ಒಂದರಂತೆ ಮೆರವಣಿಗೆ ಹೊರಟವು. ಮಗ ಮತ್ತು ಸೊಸೆಯನ್ನು ಕಳೆದುಕೊಂಡ ಅಪಾರ ದುಃಖದ ನಡುವೆಯೂ ಅಜ್ಜಿ ತಾತ ತನಗಾಗಿ ತಮ್ಮ ಬದುಕನ್ನು ಮೀಸಲಿಟ್ಟಿದ್ದು ನೆನಪಾಗಿ ದುಃಖ ಒತ್ತರಿಸಿ ಬಂತು. ಜೋರಾಗಿ ಬಿಕ್ಕಿ ಬಿಕ್ಕಿ ಆತ ಅಳುತ್ತಿರುವಾಗ ಹೆಗಲ ಮೇಲೆ ಕೈಯೊಂದು ಬಿತ್ತು. ತಲೆಯೆತ್ತಿ ನೋಡಿದಾಗ ಅಲ್ಲಿ ಅಜ್ಜ ನಿಂತಿದ್ದರು. ಮೊಮ್ಮಗನನ್ನು ಗಟ್ಟಿಯಾಗಿ ತಬ್ಬಿದ ಅಜ್ಜ ಬೇಸರವಾಯಿತೆ ? ಎಂದು ಕೇಳಿದರು. ಇಲ್ಲ ಅಜ್ಜ, ನೀವು ನನಗಾಗಿ ಅದೆಷ್ಟು ಕಷ್ಟಪಟ್ಟಿರಿ... ಆದರೆ ಅದರ ಅರಿವಿಲ್ಲದ ನಾನು ನಿಮ್ಮಿಬ್ಬರ ಮನಸ್ಸನ್ನು ನೋಯಿಸಿದೆ, ಅದನ್ನು ನೆನೆದು ದುಃಖವಾಯಿತು ಎಂದು ಹೇಳಿದಾಗ ಆತನ ಹೆಗಲ ಮೇಲೆ ಮೆಲುವಾಗಿ ತಟ್ಟಿದ ಅಜ್ಜ ನಡೆ ಮನೆಗೆ ಹೋಗೋಣ ಎಂದು ಹೇಳಿದರು.

ಅಯೋಮಯನಾಗಿ ಯುವಕ "ಅಜ್ಜಿ ಬೈತಾರೆ...ನಾನು ಬರಲ್ಲ" ಎಂದು ಹೇಳಿದಾಗ "ಬಾ ಬಾ ನಿನ್ನ ಅಜ್ಜಿ ನಿನಗಿಂತಲೂ ನೋಯುತ್ತಿದ್ದಾಳೆ" ಎಂದು ಹೇಳಿ ಅಜ್ಜ ಆತನ ಕೈ ಹಿಡಿದು ಮನೆಯೆಡೆ ನಡೆದರು. ಅಜ್ಜಿಗೆ ಏಕೆ ನೋವಾಗಿದೆ ಎಂದು ಕುತೂಹಲದಿಂದ ಅಜ್ಜನನ್ನು ಹಿಂಬಾಲಿಸಿದ ಯುವಕ.

ಮನೆಯ ಬಾಗಿಲನ್ನು ತೆಗೆಸಲು ಕರೆಗಂಟೆ ಒತ್ತಲೇ ಬೇಕಾಗಿರಲಿಲ್ಲ. ತೆರೆದ ಬಾಗಿಲ ಮುಂದೆ ಗಲ್ಲಕ್ಕೆ ಕೈಕೊಟ್ಟು ಕುಳಿತ ಅಜ್ಜಿಯ ಮ್ಲಾನವದನ ಮೊಮ್ಮಗನ ಮುಖ ನೋಡುತ್ತಲೇ ನೂರು ಕ್ಯಾಂಡಲ್ ಬಲ್ಬು ಬೆಳಗಿದಂತೆ ಆಯಿತು. ಓಡಿಬಂದು ಮೊಮ್ಮಗನನ್ನು ತಬ್ಬಿದ ಆಕೆ ಎಲ್ಲಿ ಹೋಗಿದ್ದೆ ನೀನು? ಎಂದು ಆಕ್ಷೇಪಿಸಿದಳು.

ತಪ್ಪಾಯ್ತು ಅಜ್ಜಿ! ನನಗೆ ಈಗ ನಿಜವಾಗಿಯೂ ನನ್ನ ತಪ್ಪಿನ ಅರಿವಾಗಿದೆ.... ಹರೆಯದ ಹುಮ್ಮಸ್ಸಿನಲ್ಲಿ ಯಾರು ನನ್ನವರು, ನನಗಾಗಿ ಮಿಡಿಯುವವರು ತಮ್ಮ ಬದುಕಿನ ಸುಖ ಸಂತೋಷಗಳನ್ನು ನನ್ನಲ್ಲಿ ಕಾಣುವರು ಎಂಬುದರ ಅರಿವಿಲ್ಲದೆ ಸ್ನೇಹಿತರು, ಮೋಜು ಮಸ್ತಿಗಳಲ್ಲಿ ಮುಳುಗಿ ನಿಮ್ಮನ್ನು ಕಡೆಗಣಿಸಿಬಿಟ್ಟಿದ್ದೆ.


ಇಂದು ನೀನು ನನ್ನನ್ನು ಮನೆಯಿಂದ ಹೊರಗೆ ಹಾಕದೆ ಹೋಗಿದ್ದರೆ ನನಗೆ ನನ್ನ ತಪ್ಪಿನ ಅರಿವಾಗುತ್ತಿರಲಿಲ್ಲ. ಯಾರು ನನ್ನವರು ಎಂಬುದರ ಅರಿವು ನನಗೀಗ ಆಗಿದೆ. ಇನ್ನು ಮುಂದೆ ಯಾವತ್ತೂ ಇಂತಹ ತಪ್ಪು ಮಾಡುವುದಿಲ್ಲ. ನನ್ನನ್ನು ನೀವಿಬ್ಬರೂ ಕ್ಷಮಿಸಿಬಿಡಿ ಎಂದು ಅವರಿಬ್ಬರ ಕಾಲಿನ ಮೇಲೆ ಬಿದ್ದನು.

ನಿಧಾನವಾಗಿ ಆತನನ್ನು ಮೇಲಕ್ಕೆತ್ತಿದ ಅಜ್ಜಿ "ಕಂದ ಬದುಕಿನಲ್ಲಿ ನಮಗೆ ಸ್ವಾತಂತ್ರ್ಯ ಇರುವಷ್ಟೇ ಜವಾಬ್ದಾರಿಗಳು ಇರುತ್ತವೆ. ಬಹಳಷ್ಟು ಬಾರಿ ಸ್ವಾತಂತ್ರ್ಯವನ್ನು ಅನುಭವಿಸುವುದಕ್ಕಿಂತ ಹೆಚ್ಚು ಜವಾಬ್ದಾರಿಯನ್ನು ನಾವು ಹೊರಬೇಕಾಗುತ್ತದೆ. ಸ್ನೇಹಿತರ ಒಡನಾಟ ತಪ್ಪಲ್ಲ ಆದರೆ ಎಲ್ಲವೂ ಇತಿಮಿತಿಯಲ್ಲಿ ಇರಬೇಕು. ಈ ಪಾಠವನ್ನು ನಿನಗೆ ಕಲಿಸಲೆಂದೇ ನಾನು ನಿನ್ನನ್ನು ಮನೆಯಿಂದ ಹೊರಗೆ ಹಾಕಿದ್ದು. ಆದರೆ ಇದರಿಂದ ನಿನಗೆ ಎಷ್ಟು ದುಃಖವಾಯಿತೋ ಅದರ ಹತ್ತು ಪಟ್ಟು ಹೆಚ್ಚು ದುಃಖ ನನಗಾಗಿದೆ ಎಂದರೆ ನೀನು ನಂಬಲೇಬೇಕು. ನೀನಿಲ್ಲದೆ ನಮಗೆ ಬದುಕೇ ಇಲ್ಲ, ನಿನ್ನ ಸಂತಸದಲ್ಲಿ ನಮ್ಮ ಬದುಕಿನ ಸಾರ್ಥಕತೆ ಅಡಗಿದೆ" ಎಂದು ಅಜ್ಜಿ ಹೇಳಿದಾಗ ಹೌದೆಂಬಂತೆ ಅಜ್ಜ ತಲೆ ಆಡಿಸಿದರು.

ಅಜ್ಜಿಯ ತೊಡೆಯ ಮೇಲೆ ತಲೆ ಆನಿಸಿದ ಮೊಮ್ಮಗ

"ನಾನು ಕೂಡ ಇನ್ನು ಮುಂದೆ ಸರಿಯಾದ ಹಾದಿಯಲ್ಲಿ ಸಾಗುತ್ತೇನೆ ಏನಾದರೂ ತಪ್ಪು ಮಾಡಿದರೆ ಕಿವಿ ಹಿಂಡಿ ಬುದ್ಧಿ ಕಲಿಸಲು ನೀವಿಬ್ಬರು ಹಿಂಜರಿಯಬೇಡಿ" ಎಂದು ಹೇಳಿದಾಗ ಎಲ್ಲರೂ ಜೋರಾಗಿ ನಕ್ಕು ಆ ನಗುವಿನ ಮಂಜುಳ ದನಿ ಮನೆಯೆಲ್ಲ ತುಂಬಿತು.

ಎಷ್ಟು ಸುಂದರವಾದ ಕಥೆಯಲ್ಲವೇ ಸ್ನೇಹಿತರೆ! ಎಷ್ಟೋ ಬಾರಿ ಬದುಕಿನ ನಾಗಾಲೋಟದಲ್ಲಿ ಹರೆಯದ ಹುಮ್ಮಸ್ಸಿನಲ್ಲಿ ನಾವು ನಮ್ಮವರನ್ನು ಕಡೆಗಣಿಸಿ ಮುಂದೆ ಸಾಗುತ್ತೇವೆ. ನಮ್ಮ ಬದುಕಿನಲ್ಲಿ ಕೊನೆಯವರೆಗೂ ನಮ್ಮೊಂದಿಗೆ ಉಳಿಯುವುದು ನಮ್ಮ ಹೆತ್ತವರು, ಒಡಹುಟ್ಟಿದವರು, ಸಂಗಾತಿ ಮತ್ತು ಮಕ್ಕಳು ಮಾತ್ರ. ಉಳಿದೆಲ್ಲರಿಗೂ ಗೌರವವನ್ನು ನೀಡುವ ನಾವು ಕುಟುಂಬದ ಸದಸ್ಯರನ್ನು ಮಾತ್ರ ಅಸಡ್ಡೆಯಿಂದ ಕಾಣುತ್ತೇವೆ. ಮುಂಜಾನೆ ಮನೆಯನ್ನು ಬಿಟ್ಟು ಅದೆಷ್ಟೆ ಊರು ಸುತ್ತಿ ನಮ್ಮ ಕೆಲಸ ಕಾರ್ಯಗಳನ್ನು ಮುಗಿಸಿ ಅಂತಿಮವಾಗಿ ಮತ್ತೆ ನಾವು ಬರುವುದು ನಮ್ಮ ಮನೆಗೆಯೇ. ನಮ್ಮ ಕಷ್ಟ ಸುಖಗಳನ್ನು ಹಂಚಿಕೊಳ್ಳುವುದು ನಮ್ಮ ಕುಟುಂಬದ ಸದಸ್ಯರೊಂದಿಗೆ ಮಾತ್ರ. ತಡವಾಗಿಯಾದರೂ ಸರಿ ನಮ್ಮವರು ನಮಗೆ ಬೇಕೇ ಬೇಕು ಎಂಬುದನ್ನು ಅರಿತು ನಾವು ಅವರಿಗೆ ಬೇಕಾಗುವಂತೆ ವರ್ತಿಸುವ, ಅವರೊಂದಿಗೆ ಸೌಹಾರ್ದಯುತವಾಗಿ ಬಾಳುವ ಎಂದು ಆಶಿಸುವ



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,